# ಕೊಡಗು ಸಂಗಾತಿ

ಪಾಕ್ಷಿಕ ಪತ್ರಿಕೆ

ನಂ. ೩೫, ಸವಿತಾ ನಿಲಯ, ೧ನೇ ಕ್ರಾಸ್, ೪ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - ೫೭೦ ೦೧೨

ಸಂಪಾದಕಿ ಪಟ್ಟಡ ಶೀಲಾಮಣಿ


ಕನ್ನಡ ಮತ್ತು ಅರೆಭಾಷೆಯ ಏಕೈಕ ಪಾಕ್ಷಿಕ ಪತ್ರಿಕೆ

K.R. N. N. 240 ಸಂಪುಟ : 3 ಸಂಚಿಕೆ : 10 ಮೇ 15 ರಿಂದ 31, 1999 ಪುಟಗಳು : 24 ಬೆಲೆ ರೂ. : 5-00



[ಲೇಖನ ಒಳಪುಟಗಳಲ್ಲಿ]

**1993-94ರ ರಾಷ್ಟ್ರೀಯ ಸಿವಿಲ್ ಸರ್ವೀಸ್ ಸೇವೆಯ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಗಿಟ್ಟಿಸಿದ ಶ್ರೀ ನಂಗಾರು ಪೊನ್ನಪ್ಪ ದಯಾನಂದ**



## ಜೀವಾವಧಿ ಸದಸ್ಯತನ ಕೊಟ್ಟೊಳೊ

ಶ್ರೀಮತಿ ಮತ್ತು ಶ್ರೀ ಪಳ್ಳಿಪುರ ಭರತ್, ರೇಖಾ ದಂಪತಿಗ ಪತ್ರಿಕೆಯ ಅಭಿವೃದ್ಧಿ ದೃಷ್ಟಿಯಿಂದ ಜೀವಾವಧಿ ಸದಸ್ಯತನ ಕೊಟ್ಟ್ ಸಹಕರಿಸೊಳೋ. ಇವ್ರುಕೆ ಕುಲಗುರು ವೆಂಕಟರಮಣನ ಕೃಪಾಕಟಾಕ್ಷ ಇರಲಿತ್ತೇಳಿ ಸಂಗಾತಿ ಹಾರೈಸಿದೆ.

- ಸಂಪಾದಕಿ

## ಪ್ರಕಟಣೆ

ಪಾಲೂರು ಗ್ರಾಮದ ಶ್ರೀ ಕನ್ನಂಬಾಡಿ ಅಮ್ಮನವರ ವಾರ್ಷಿಕ ಉತ್ಸವವು ಇದೇ ತಿಂಗಳ 24ರ ಸೋಮವಾರ ಬೆಳಿಗ್ಗೆ 8ಗಂಟೆಯಿಂದ, ಸಂಜೆ 8ಗಂಟೆಯ ತನಕ ನಡೆಯಲಿರುವುದು. ಈ ಹಿಂದೆ ಈ ಉತ್ಸವವು ರಾತ್ರಿ ವೇಳೆ ನಡೆಯುತ್ತಿದ್ದು ಇನ್ನು ಮುಂದೆ ಹಗಲಿನಲ್ಲಿ ನಡೆಸುವಂತೆ ಅಮ್ಮನವರ ಉತ್ಸವ ಸಮಿತಿ ನಿರ್ಧರಿಸಿದೆ ಎಂದು ತಿಳಿದು ಬಂದಿದೆ.

ವರದಿ : ಬೈತಡ್ಕ ಬೆಳ್ಯಪ್ಪ.

## ಮಹಿಳಾ ಲೋಕದಲ್ಲಿ

1. ಮಡಿಕೇರಿ ನಗರದಲ್ಲಿ ದಿನಾಂಕ 11-5-1999 ರಂದು ನಡೆದ ಗೌಡ ಮಹಿಳಾ ಒಕ್ಕೂಟದ ಸಮಾರಂಭದ ಅದೃಷ್ಟ ಪರೀಕ್ಷೆ ಲಾಟರಿ ಬಹುಮಾನ ಈ ಕೆಳಗಿನ ನಂಬರಿಗೆ ಬಂದಿದೆ. ನಂ. **196, 187, 80**

2. ದಿನಾಂಕ 11-5-1999ರಂದು ಮಡಿಕೇರಿ ನಗರದಲ್ಲಿ ನಡೆದ ಗೌಡ ಮಹಿಳಾ ಒಕ್ಕೂಟದ ಸಮಾರಂಭದ ಪ್ರಬಂಧ ಸ್ಪರ್ಧಾ ವಿಜೇತರು

| | |
|---|---|
| ಪ್ರಥಮ | ಪ್ರೊ|| ಪೂಜಾರಿ ಮೊಣ್ಣಪ್ಪ, ಬೆಂಗಳೂರು |
| ದ್ವಿತೀಯ | ಶ್ರೀ ಬೈತಡ್ಕ ಬೆಳ್ಯಪ್ಪ, ಮಡಿಕೇರಿ |
| ತೃತೀಯ | ಶ್ರೀ ನಾಟೋಳನ ದೇವಯ್ಯಮಾದಯ್ಯ, ಮಡಿಕೇರಿ |
| ಸಮಾಧಾನಕರ ಬಹುಮಾನ | ಶ್ರೀ ಉಳುವಾರನ ಸುರೇಶ್‌ಕುಮಾರ್, ಚೆನ್ನೈ |

3. ಮುಂದಿನ ಸಂಚಿಕೆಯಲ್ಲಿ : ಗೌಡ ಮಹಿಳಾ ಒಕ್ಕೂಟ ಮಡಿಕೇರಿ ನಡೆದು ಬಂದ ದಾರಿ, ಅವರ ಕಾರ್ಯಸಾಧನೆ, ವಾರ್ಷಿಕೋತ್ಸವದಲ್ಲಿ ಪಾಲ್ಗೊಂಡ ಮುಖ್ಯ ಅತಿಥಿಗಳ ಕಿರುಪರಿಚಯವನ್ನು ನೀಡಲಾಗುವುದು

ನಿರೀಕ್ಷಿಸಿ ! ! !

# ಕೊಡಗು ಸಂಗಾತಿ

ಸಂಪಾದಕಿ, ಪ್ರಕಾಶಕಿ :

**ಪಟ್ಟಡ ಪಿ. ಶೀಲಾಮಣಿ**

ಗೌರವ ಸಂಪಾದಕ :

**ಪಟ್ಟಡ ಎಂ. ಪ್ರಭಾಕರ**

ಚಂದಾ ಕಳುಹಿಸುವ ಮತ್ತು
ಜಾಹೀರಾತು ಪ್ರಸಾರ ಕಛೇರಿ :

**ಕೊಡಗು ಸಂಗಾತಿ**

ನಂ. 35, "ಸವಿತಾ ನಿಲಯ"
1ನೇ ಕ್ರಾಸ್, 4ನೇ ಬ್ಲಾಕ್,
ಜಯಲಕ್ಷ್ಮಿಪುರಂ, ಮೈಸೂರು - 570 012.
**ಫೋನ್ : 0821/516771**

**ಸಂಪರ್ಕಿಸುವ ವಿಳಾಸ**

**ಮಣಿ ನಂಗಾರ್**
ಹೊಳ್ಳ ಕಾಂಪ್ಲೆಕ್ಸ್, ಮಂಗಳೂರು ರಸ್ತೆ,
ಚಿಕ್ಕಪೇಟೆ, ಮಡಿಕೇರಿ - 571 201
ದೂರವಾಣಿ : 08272/29372

**ಬೈತಡ್ಕ ಜಾನಕಿ ಬೆಳ್ಯಪ್ಪ**
ನಂ. 21-16 ಎಲ್. ಐ. ಸಿ. ಹತ್ತಿರ
ರೇಸ್ ಕೋರ್ಸ್ ರಸ್ತೆ, ಮಡಿಕೇರಿ
ದೂರವಾಣಿ : 08272/28047

**ಕುಂಭಗೌಡನ ಸೋಮಣ್ಣ**
ಮಯೂರ ಕೋಲ್ಡ್ ಸ್ಟೋರೇಜ್
ಮುಖ್ಯ ರಸ್ತೆ, ಕುಶಾಲನಗರ - 571 234

**ಅಮ್ಮಾಜೀರ ಪೊನ್ನಪ್ಪ /**
**ಕಲ್ಲುಮುಟ್ಲು ಬಸಪ್ಪ**
20, 1ನೇ ಮೈನ್, 4ನೇ ಕ್ರಾಸ್
ಸಾಕಮ್ಮ ಗಾರ್ಡನ್, ಬಸವನಗುಡಿ,
ಬೆಂಗಳೂರು - 04
ದೂರವಾಣಿ - 080/6549669





❀ ಸಂಪಾದಕೀಯ 02
❀ ಸಂಗಾತಿ - ಕವನ 02
❀ 1993-94ರ ರಾಷ್ಟ್ರೀಯ ಸಿವಿಲ್ ಸರ್ವೀಸ್ ಸೇವೆಯ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಗಿಟ್ಟಿಸಿದ ಶ್ರೀ ನಂಗಾರು ಪೊನ್ನಪ್ಪ ದಯಾನಂದ 03
❀ ಆರೋಗ್ಯ ಚಿಂತನೆ - ಕಿವಿನೋವು, ಕಿವಿ ಸೋರುವಿಕೆ 04
❀ ಸರ್ಪಗಂಧ (ಧಾರವಾಹಿ - 6) 05
❀ ರವಿ-ರಶ್ಮಿ - ಕವನ 06
❀ ಗೌಡ ಸಮಾಜ, ಕೊಡಗು ಬಂಡಾಯ ಮೊದಲು ಮತ್ತು ನಂತರ 07
❀ ಗೌಡ ಸಂಸ್ಕೃತಿ : ಶವದ ಚಟ್ಟ ಕಟ್ಟುವ ಕ್ರಮ (ಕೊಡಗು ಅರೆಭಾಷೆ ಗೌಡರಿಗೆ) 09
❀ ನನ್ನವಳ ಕಣ್ಮರೆ - ಕವನ 10
❀ ಶುಭವಿವಾಹ 11
❀ ಹರಿದ ನೋಟುಗಳ ಬದಲಾವಣೆ - ಮಾಹಿತಿ 11
❀ ಗೌಡ ಒಕ್ಕೂಟ, ಮಡಿಕೇರಿ, ಪ್ರಥಮ ವಾರ್ಷಿಕ ಮಹಾಸಭೆ ಮತ್ತು ವಾರ್ಷಿಕೋತ್ಸವ - ವರದಿ 15
❀ ಹೆಣ್ಣುಮಕ್ಕಳಿಗೆ ಬುದ್ಧಿವಾದ-1- ಕವನ 17
❀ ಹೆಣ್ಣುಮಕ್ಕಳಿಗೆ ಬುದ್ಧಿವಾದ-2 - ಕವನ 17


## ಅರೆಭಾಷಿಕ ವಿಭಾಗ


❀ ಕೆಣಿಯ ಕುದ್‌ಕ - ಪೆದ್ದ್ ಕಾಗೆ - ಕವನ 02
❀ ಭಟ್ಟಂಗೆ ಕೊಟ್ಟದ್ ಅತ್ತೆಗೆ ಹೋತ್ - ಕವನ 06
❀ ನಾಡ್ ಸಂಪ್ರದಾಯ - ಕವನ 08
❀ ಲವ್ ಲೆಟರ್- ಚುಟುಕ 11
❀ ಬೇಟೆ - ಕಥೆ 12
❀ ಮನೆ ಮೇಲೆ ಮರ ಬೀತ್ ! - ಕಥೆ 17
❀ ಕರಿಚಿನ್ನ - ಧಾರವಾಹಿ - 26 19


## ಚಂದಾ ವಿವರ

| | | |
|---|---|---|
| ಬಿಡಿ ಪ್ರತಿ | - | 5 ರೂ. |
| ಅರ್ಧ ವಾರ್ಷಿಕ | - | 60 ರೂ. |
| ವಾರ್ಷಿಕ ಚಂದಾ | - | 120 ರೂ. |

# ಸಂಪಾದಕೀಯ : ತೌರಿನ ಚಿಂತೆ

"ತೌರು" ಎಂಬ ಪದಕ್ಕೆ ಬಹಳ ದೊಡ್ಡ ಅರ್ಥವಿದೆ. ತೌರುಮನೆಯ ಪ್ರೀತಿ ಹೆಣ್ಣಿಗೆ ಇರುವ ಸಹಜವಾದ ಒಂದು ಮಾನಸಿಕ ನಂಬಿಕೆ. ತೌರಿಲ್ಲದೆ ಹೆಣ್ಣಿನ ಪಾಡು ಅನಾಥೆಯ ಪಾಡಿಗಿಂತಲೂ ಕಠಿಣ ಪರಿಸ್ಥಿತಿ. ಆದ್ದರಿಂದಲೇ ಹೆಣ್ಣಿಗೆ ತೌರೂರ ದಾರಿಯಲ್ಲಿ "ಕಲ್ಲಿಲ್ಲ ಮುಳ್ಳಿಲ್ಲ" ವೆಂದು ಜಾನಪದ ಕವಿ ವರ್ಣಿಸಿದ್ದಾನೆ.

ಹಿಂದಿನ ಕಾಲದಲ್ಲೂ, ಈಗಲೂ ಹಳ್ಳಿಗಳಲ್ಲಿ, ತೌರಿನಿಂದ ಹೆಣ್ಣು ತನ್ನ ಗಂಡನ ಮನೆಗೆ ಹೊರಡುವಾಗ ಅವಳು ತಾನು ನೆಟ್ಟ ಮರ ಬಳ್ಳಿಗಳು, ಸಾಕಿದ ದನಕರುಗಳು ಚೆನ್ನಾಗಿ ಇವೆಯೇ ಎಂಬುದನ್ನು ತಾನು ಪತಿಯ ಮನೆಗೆ ಹೊರಡುವಾಗ ಅವುಗಳ ವಿಷಯದಲ್ಲಿ ಚಿಂತಿಸುವ ಸಂದರ್ಭ, ಮಗಳನ್ನು ಕಳುಹಿಸುವಾಗ ಅವಳಿಗೆ ಬೇಕಾದ ತಿಂಡಿ ತಿನಸುಗಳನ್ನು ಅಣಿಮಾಡಿ ಜೋಪಾನದಿಂದ ತಲುಪಿಸುವ ಅಭಿಪ್ರಾಯ, ಮಗಳನ್ನು ಗಂಡನ ಮನೆಗೆ ಕಳುಹಿಸುವಾಗ ಹೊಳೆಯವರೆಗೆ ತೌರಿನವರೆಲ್ಲಾ ಸೇರಿ ಹೋಗಿ ಬೀಳ್ಕೊಡುವ ದೃಶ್ಯ ಈಗಿನ ನವ ನಾಗರೀಕತೆಯ ಜೀವನದಲ್ಲಿ ಕಾ[illegible]ವುದೇ ಅಪರೂಪವಾಗಿದೆ. ತೌರು ಮನೆಯವರಿಗೂ ಅಷ್ಟೇ, ತಮ್ಮ ಮನೆಯಿಂದ ಬೇರೆ ಮನೆಗೆ ಬಾಳಿಕೆ ನಡೆಸುವುದಕ್ಕೆ ಹೋಗುವ ಮಗಳು ಸದಾ ನಲಿನಲಿದು ಸಂತೋಷದಿಂದ ಇರಲಿ, ಅವಳ ಬಾಳು ಸುಗಮವಾಗಿರಲಿ ಎಂಬ ಭಾವನೆ ಕಣ್ಣೊರೆಸುವ ಮಾತಲ್ಲದೆ ಹೃದಯಾಳದಿಂದ ಬರುವ ಹರಕೆಯಾಗಿರುತ್ತದೆ. ಈಗಿನ ಈ ಸಮಾಜದಲ್ಲಿ ಹಿಂದಿನ ತೌರಿನ ಸಾಂತ್ವನ ಇಲ್ಲದಾಗಿದೆ. ನವ ಯುವತಿಯರಿಗೆ ತೌರು ಮರೆತೇ ಹೋಗಿದೆ. ಆದ್ದರಿಂದ ಹಿಂದೆ ಇದ್ದ ಆತ್ಮೀಯ ಭಾವನೆಗಳು ಮಾಯವಾಗಿ ಯಾಂತ್ರಿಕ ಜೀವನ ಪ್ರಾರಂಭವಾಗಿ ತೌರೆಂಬ ಶಬ್ದ ಇನ್ನೂ ಕೆಲವು ವರ್ಷಗಳಲ್ಲಿ ಮರೆತೇ ಹೋಗುವುದೆಂಬ ಭಾವನೆ ಉಂಟಾಗಿದೆ. ಆದ್ದರಿಂದ ಹಿಂದೆ ಇದ್ದ ತೌರಿನ ಸಂಬಂಧಕ್ಕೆ ಪ್ರೀತಿಯ ಲೇಪನ ಸಾಧ್ಯವಾದೀತೇ ಎಂದು ಸಂಗಾತಿಯು ಚಿಂತಿಸುತ್ತದೆ.

### ಕೆಣಿಯ ಕುದ್‌ಕ - ಪೆದ್ದ್‌ಕಾಗೆ
(ಮಕ್ಕಳ ಕಥೆ ಆಧಾರ)

ಕರ್‌ಂಜಿ ಕಾಗೆಯೊಂದು ಅಂದ್
ಊರು ಕೇರಿ ಸುತ್ತಿಕಂಡ್
ಹಾರಿ ಹುಡ್ಕಿ ಹೆರ್ಕಿತೊಂದು
ಮಾಸ ತುಂಡುನ
ಕೊಕ್ಕಿಲದರ ಕೊತ್ತಿಕಂಡ್
ಮರಲಿ ಕುದ್ದ ಪೊರ್ಲುಕಂಡ್
ಕೆಣಿಯ ಕುದ್‌ಕ ಮೆಲ್ಲೆಬಂದ್
ಮಾತಿಗಿಳ್‌ದತ್
"ಕಾಗೆಯಕ್ಕ ಯಾಗ ಬಂದ?
ಬಾವ ಮಕ್ಕ ಸೌಕ್ಯ ಲೊಲೊನಾ?
ಕಷ್ಟ ದುಃಖ ಏನಾರುಟ್ಟ?
ಹೇಳ್ ಕೇಳನೊ"
"ನನ್ನ ಸೋದರತ್ತೆ ನೀನ್
ನಿನ್ನ ಮೈ ಪೊರ್ಲುಏನ್!
ನಿನ್ನ ರಾಗ ಸಿಂಹಿಚೇನ್
ಹಾಡ್‌ಕೇಳನೊ"
ಹೊಗಳ್ ಮಾತ್ ಕೇಳಿಕಾಗೆ
ಜಂಬಬಂದ್ ಹಿಗ್ಗಿ ಹೋಗಿ
'ಕಾವ್' ತೇಳಿ ಕೊಕ್ಕು ತೆರದ್
ರಾಗ ಹಾಡ್ತ್'
ಕೊಕ್ಕು ಬಿಚ್ಚಿ ಹಾಡ್‌ಕನ
ಕಚ್ಚಿ ಹಿಡ್ದ ಮಾಸ ತುಂಡು
ಹಿಡ್ತ ತಪ್ಪಿ ಮರದ ಕೆಳಗೆ
ರಟ್ಟಿ ಬಿದ್ದತ್
ಕುದ್‌ಕ ಅದರ ಹೊತ್ತ್‌ಕಂಡ್
ತಿರ್‌ಗಿ ತಿರ್‌ಗಿ ನೋಡಿಕಂಡ್
"ನಾಳೆಬನ್ನೆ" ತೇಳಿಕಂಡ್
ಕಾಡಿಗೋಡ್ತ್"
ಮೋಸ ಹೋದ ಕಾಗೆಯಾಗ
ಬಿಕ್ಕಿ ಬಿಕ್ಕಿ ಮರ್‌ಗ್ಚಿಕಂಡ್
"ಹೊಗಳ್ ಮಾತ್ ಮೋಸತೇಳಿ
ಸಾರಿ ಹೇಳ್ತ್"

ಬಾಚರಣಿಯಿಂದ ಅಪ್ಪಣ್ಣ
ಕುಶಾಲನಗರ

### ಸಂಗಾತಿ

ಓ ನನ್ನ ಬಾಂಧವರೇ
ಕೊಡಗು ಸಂಗಾತಿಯು
ಗೌಡ ಸಂಗಾತಿಯಾಗಲಿ,
ಎಲ್ಲರ ಮನ ಸೆಳೆಯಲಿ
ಅಚ್ಚು ಮೆಚ್ಚಿನ ಪುಸ್ತಕವಾಗಿ
ಮನೆ ಮನೆಯ ಮಾತಾಗಿ
ಗೌಡ ಜನರ ಪ್ರಿಯವಾಗಲಿ,
ಗೌಡ ಸಂಗಾತಿ ಪಾಕ್ಷಿಕದಲ್ಲಿ
ನಾ ಬರೆವೆ ಗೀತೆಯಾಗಿ
ಗೌಡ ಸಂಗಾತಿ ಪುಸ್ತಕವು
ಕನಸಲ್ಲೂ ನೆನಪಾಗಿ,
ಹೊಸಿಲಲ್ಲಿ ಕಾದಿರುವೆ
ಪಾಕ್ಷಿಕ ಗೌಡ ಸಂಗಾತಿಗಾಗಿ

ಆಜಡ್ಕ ರಾಣಿ ಬಾಲಕೃಷ್ಣ
ಕುಶಾಲನಗರ

# ರಾಷ್ಟ್ರೀಯ ಸಿವಿಲ್ ಸರ್ವೀಸ್ ಸೇವೆಯ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಗಳಿಸಿದ ಶ್ರೀ ನಂಗಾರು ಪೊನ್ನಪ್ಪ ದಯಾನಂದ



ಶ್ರೀ ನಂಗಾರು ದಯಾನಂದರವರು 14-7-1968ರಲ್ಲಿ ಗೌಡ ಜನಾಂಗದ ಅತೀ ಹೆಚ್ಚು ಜನಸಂಖ್ಯೆ ಇರುವ ಮನೆತನ ಆದ ಶ್ರೀ ನಂಗಾರು ಪೊನ್ನಪ್ಪನವರ ಪುತ್ರರಾಗಿ ಭಾಗಮಂಡಲ ನಾಡಿನ ಕೋರಂಗಾಲ ಗ್ರಾಮದಲ್ಲಿ ಜನಿಸಿದರು. ಶ್ರೀಯುತರಿಗೆ 4ಜನ ಸಹೋದರಿಯರು. ಇವರ ತಂದೆ ಪೊನ್ನಪ್ಪನವರು ಕರ್ನಾಟಕ ಪೋಲೀಸ್ ಇಲಾಖೆಯಲ್ಲಿ ಹವಲ್ದಾರ್ ಆಗಿದ್ದು 1984ರಲ್ಲಿ ನಿವೃತ್ತರಾದರು. ಇವರ ಪತ್ನಿ ರಾಧ ಬೆಂಗಳೂರಿನ ಗೌಡರಾಗಿದ್ದು, ಪುತ್ರ ಹರ್ಷಿತ್ ಮತ್ತು ಪುತ್ರಿ ನೇಹಾ ರೊಡನೆ ಸುಖ ಜೀವನ ಸಾಗಿಸುತ್ತಿದ್ದಾರೆ.

ಇವರು ಎಸ್.ಎಸ್.ಎಲ್.ಸಿ ತನಕ ಮಡಿಕೇರಿಯ ಸೈಂಟ್ ಮೈಕಲ್ ಶಾಲೆಯಲ್ಲಿ ಓದಿದರು. ನಂತರ ಭಾಗಮಂಡಲ ಕಾವೇರಿ ಜೂನಿಯರ್ ಕಾಲೇಜಿನಲ್ಲಿಯೂ ಮತ್ತು ಪದವಿಯನ್ನು ಬೆಂಗಳೂರಿನ ಸೈಂಟ್ ಜೋಸೆಫ್ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜಿನಲ್ಲಿಯೂ 1990ಕ್ಕೆ ಮುಗಿಸಿದರು.

ವಿದ್ಯಾರ್ಥಿ ಜೀವನದಲ್ಲಿ ಎಲ್ಲಾ ತರಹದ ಕ್ರೀಡೆಯಲ್ಲಿ ತೀರಾ ಆಸಕ್ತಿಯುಳ್ಳವರಾಗಿದ್ದರು. ಕಬ್ಬಡಿ, ಫುಟ್‌ಬಾಲ್, ಹಾಕಿಯಲ್ಲಿ ಸಾಕಷ್ಟು ಪ್ರಶಸ್ತಿಯನ್ನೂ ಗಳಿಸಿರುತ್ತಾರೆ. ಡೆಕಾತ್ಲನ್ ಅಂದರೆ ಭಾರದ ಗುಂಡು ಎಸೆತ, ಡಿಸ್ಕಸ್ ಥ್ರೋ ಮತ್ತು ಜವಲಿನ್ ಥ್ರೋ, 100, 400, 1500 ಮೀಟರ್ಸ್ ಓಟವಲ್ಲದೆ, 110 ಮೀ ಹರ್ಡಲ್ಸ್, ಉದ್ದ ಜಿಗಿತ, ಎತ್ತರ ಜಿಗಿತ, ಪೋಲ್‌ವಾಲ್ಟ್ ಹೀಗೆ ಹಲವಾರು ವಿಭಾಗಗಳಲ್ಲಿ ಯಾವ ತರಬೇತಿದಾರರ ಸಹಾಯವಿಲ್ಲದೆ ಅಭ್ಯಾಸ ಮಾಡುತ್ತಲಿದ್ದರು. ಇವರ ಪೋಷಕರಿಗೆ ಕ್ರೀಡಾ ಬಗ್ಗೆ ಅರಿವಿಲ್ಲದಿದ್ದರೂ ಸಾಕಷ್ಟು ಸಹಕಾರವಿತ್ತು. ಅಚಾನಕ್ ಆಗಿ 1987ರಲ್ಲಿ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ರಾಜ್ಯ ಮಟ್ಟದ ಹುಡುಗರ ಸ್ಪೋರ್ಟ್ಸ್ ಹಾಸ್ಟೆಲಿನ ಮಕ್ಕಳ ಕ್ರೀಡೆಯಲ್ಲಿ ಭಾಗವಹಿಸಿದ್ದರು. ನಂತರ ಹಿಂದೆ ನೋಡದ ಶ್ರೀಯುತರು ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದ ಸಿವಿಲ್ ಸರ್ವೀಸ್ ಕ್ರೀಡೆಯಲ್ಲಿ ಸಾಕಷ್ಟು ಮಿನುಗಿದರು.

1988ರಲ್ಲಿ ರಾಜ್ಯ ಡೆಕಾತ್ಲಾನ್‌ನಲ್ಲಿ ಮೊದಲ ಸ್ಥಾನವನ್ನು, 1988ರಲ್ಲಿ ಕಾನ್‌ಪುರದಲ್ಲಿ ನಡೆದ ರಾಷ್ಟ್ರೀಯ ಓಪನ್ ಕ್ರೀಡೆಯಲ್ಲಿ ಪಾಲ್ಗೊಳ್ಳುವಿಕೆ. 1989ರಲ್ಲಿ ಬೆಂಗಳೂರು ವಿಶ್ವ ವಿದ್ಯಾಲಯ ನಡೆಸಿದ ಡೆಕಾತ್ಲಾನ್‌ನಲ್ಲಿ ಮೊದಲ ಸ್ಥಾನ. 1990ರಲ್ಲಿ ನಡೆದ ರಾಜ್ಯ ಮಟ್ಟದ ಜಾವಲಿನ್ ಥ್ರೋನಲ್ಲಿ ಪ್ರಥಮ ಸ್ಥಾನ. 1991ರ ಇಂಟರ್ ಸ್ಟೇಟ್ ಜಾವೆಲಿನ್ ಥ್ರೋದಲ್ಲಿ ದ್ವಿತೀಯ ಸ್ಥಾನ. 1991ರಲ್ಲಿ ಮೈಸೂರಿನಲ್ಲಿ ನಡೆದ ಇಂಟರ್ ಯೂನಿವರ್ಸಿಟಿ ಡಿಸ್ಕಸ್ ಥ್ರೋದಲ್ಲಿ 3ನೇ ಸ್ಥಾನ ಪಡೆದಿರುತ್ತಾರೆ.

ಇವರು ಈ ಮೇಲಿನ ಎಲ್ಲಾ ಚಟುವಟಿಕೆಗಳಿಂದ ಪ್ರೇರಣೆಗೊಂಡ ನಂತರ ಆದಾಯ ತೆರಿಗೆ ಇಲಾಖೆಯಲ್ಲಿ ಉದ್ಯೋಗಿಯಾಗಿ ಸೇರ್ಪಡೆಗೊಂಡು 2ವರ್ಷ ಸೇವೆ ಸಲ್ಲಿಸಿದರು. 1992ರಲ್ಲಿ ದೆಹಲಿಯಲ್ಲಿ ನಡೆದ ಕೇಂದ್ರೀಯ ಸಿವಿಲ್ ಸರ್ವೀಸ್ ಕ್ರೀಡಾಕೂಟದಲ್ಲಿ ದ್ವಿತೀಯ ಸ್ಥಾನವನ್ನು, ಡಿಸ್ಕಸ್ ಥ್ರೋಬಾಲ್‌ನಲ್ಲಿ ಮೊದಲ ಸ್ಥಾನವನ್ನು ಗಳಿಸಿದರು. 1993ರಲ್ಲಿ ಶ್ರೀಯುತರು ಕಸ್ಟಮ್ಸ್ ಮತ್ತು ಸೆಂಟ್ರಲ್ ಎಕ್ಸೈಸ್ ಇಲಾಖೆಗೆ ಸೇರ್ಪಡೆಗೊಂಡರು. ತದನಂತರ 1994ರಲ್ಲಿ ಹರಿಯಾಣದಲ್ಲಿ ನಡೆದ ರಾಷ್ಟ್ರೀಯ ಸಿವಿಲ್ ಸೇವೆಯ ಕ್ರೀಡಾಕೂಟದಲ್ಲಿ ಡೆಕಾತ್ಲಾನ್ ವಿಭಾಗದಲ್ಲಿ ಚಿನ್ನದ ಪದಕ ಸ್ವೀಕಾರ. 1996ರಲ್ಲಿ ನಡೆದ ಸಿವಿಲ್ ಕೂಟದಲ್ಲಿ ಬೆಳ್ಳಿ ಪದಕ. 1996ರಲ್ಲಿ ಹೈದರಬಾದ್‌ನಲ್ಲಿ ನಡೆದ ಸೆಂಟ್ರಲ್ ರೆವಿನ್ಯೂ ಕೂಟದಲ್ಲಿ ಚಿನ್ನದ ಪದಕ. 1997ರಲ್ಲಿ ದೆಹಲಿಯಲ್ಲಿ ನಡೆದ ರಾಷ್ಟ್ರೀಯ ಕೇಂದ್ರಿಯ ರೆವಿನ್ಯೂ ಸ್ಪೋರ್ಟ್ಸ್‌ನಲ್ಲಿ ಕಂಚಿನ ಪದಕವನ್ನು ಪಡೆದಿದ್ದಾರೆ.

ಶ್ರೀಯುತರಿಗೆ ತಕ್ಕ ಆರ್ಥಿಕ ನೆರವು ಸಿಕ್ಕಿದಲ್ಲಿ ಬಡ ಗೌಡ ಮಕ್ಕಳಿಗಾಗಿ ಕ್ರೀಡೆಯಲ್ಲಿ ಉಚಿತ ತರಬೇತಿ ಕೊಡಲು ಶ್ರೀಯುತರು ಬಯಸಿರುವುದು ನಿಜಕ್ಕೂ ಹೆಮ್ಮೆ ಮತ್ತು ಮೆಚ್ಚತಕ್ಕದ್ದೆ. ಇವರ ಆಶೋತ್ತರಗಳು ಆದಷ್ಟು ಶೀಘ್ರವಾಗಿ ನೆರವೇರಲಿ ಎಂದು ಸಂಗಾತಿ ತುಂಬು ಹೃದಯದಿಂದ ಆಶಿಸುತ್ತದೆ.

ಸಂದರ್ಶನ ಲೇಖನ - ಪಟ್ಟಡ ಪ್ರಭಾಕರ

---

ಅರೆಭಾಷೆ ಒಂದ್ ಪೊರ್ಲ್ನಾದ ಭಾಷೆ ಇದರ ಹಿಂದೆ ಒಂದು ಇತಿಹಾಸ್ಯೆ ಉಟ್ಟು. ಜನಾಂಗದ ಜನರ ಕೀಳರಿಮೆಂದ ಇದ್ ನಾಶವಾಗದಿರಲಿ

- ಪಟ್ಟಡ ಪ್ರಭಾಕರ

# ಆರೋಗ್ಯ ಚಿಂತನೆ

## ಕಿವಿನೋವು, ಕಿವಿ ಸೋರುವಿಕೆ

ಕಿವಿಯನ್ನು ಸ್ವಚ್ಛಮಾಡದೇ ಬಹಳ ದಿನಗಳಾಗಿದ್ದರೆ ಕಿವಿಯೊಳಗೆ ಮೇಣ (ಗುಗ್ಗೆ, wax)ತುಂಬಿಕೊಂಡು ಕಿವಿನೋವು ಕಾಣಿಸಿ ಕೊಳ್ಳುವುದು. ಗುಗ್ಗೆ (wax) ಎಂಬುದು ಕಿವಿಯು ಸ್ರವಿಸುವ ದ್ರವಾಂಶ ಗಟ್ಟಿಯಾಗಿರುವುದು. ಇದು ಕಿವಿಯೊಳಗೆ ನಡೆಯುವ ಸಾಮಾನ್ಯಕ್ರಿಯೆಯಾಗಿದೆ. ಜನಸಾಮಾನ್ಯರು ತಿಳಿದಂತೆ ಕೊಳೆ, ಧೂಳು, ಮಣ್ಣು ಹೊರಗಡೆಯಿಂದ ಸೇರಿ ಗುಗ್ಗೆಯಾಗುವುದಿಲ್ಲ. ಹೊರಗಡೆ ಯಿಂದ ನೀರು ಇತ್ಯಾದಿ ಕಿವಿ ಒಳಹೋದಲ್ಲಿ ಈ ಗುಗ್ಗೆ ಹಿಗ್ಗಿಕೊಂಡು ಕೆಲವೊಮ್ಮೆ ಸಣ್ಣಮಟ್ಟದ ಕಿವುಡುತನ ಸಹ ಕಾಣಿಸಿಕೊಳ್ಳುವುದು. ಒಂದು ಕಡ್ಡಿಯ ತುದಿಗೆ ಸ್ವಚ್ಛವಾದ ಹತ್ತಿ ಸುತ್ತಿ ಕಿವಿಯೊಳಗೆ ನಿಧಾನವಾಗಿ ಅದ್ದಿ ತಿವಿಯುವುದರ ಮೂಲಕ ಈ ಗುಗ್ಗೆಯನ್ನು ತೆಗೆದುಕೊಳ್ಳಬಹುದು. ಬಹಳಷ್ಟು ಗುಗ್ಗೆ ತುಂಬಿದ್ದರೆ ವೈದ್ಯರ ಮೂಲಕ ತೆಗೆಸಿಕೊಳ್ಳುವುದು ಕ್ಷೇಮ. ಗುಗ್ಗೆಯನ್ನು ಕರಗಿಸುವ ಕಿವಿಯೊಳಗೆ ಹಾಕಿಕೊಳ್ಳುವ ತೊಟ್ಟಿನ ಔಷಧವನ್ನೂ ಬಳಸಬಹುದು.

ಆಡುತ್ತಿರುವಾಗ ಮಗು ಕೆಲವೊಮ್ಮೆ ಕೆಲವೊಂದು ವಸ್ತುಗಳನ್ನು ಕಿವಿಯೊಳಕ್ಕೆ ಹಾಕಿಕೊಳ್ಳಬಹುದು. (ಬಟಾಣಿ, ಕಡಲೆಬೀಜ, ಹಣ್ಣಿನ ಬೀಜ ಇತ್ಯಾದಿ) ಈ ವಸ್ತುಗಳು ಕಿವಿಯೊಳಗೆ ಸೇರಿ ಅಲ್ಲಿರುವ ದ್ರವಾಂಶವನ್ನು ಹೀರಿಕೊಳ್ಳುವುದರಿಂದ ಈ ವಸ್ತುಗಳು ಹಿಗ್ಗಿ ಕೊಳ್ಳುತ್ತವೆ. ಇದರಿಂದ ತೀವ್ರವಾದ ಕಿವಿನೋವು ಕಾಣಿಸಿಕೊಳ್ಳುತ್ತದೆ. ಒಳ ಸೇರಿದ ವಸ್ತುಗಳನ್ನು ನೀವು ತೆಗೆಯಲು ಪ್ರಯತ್ನಿಸಬೇಡಿ ಏಕೆಂದರೆ, ನಿಮ್ಮ ಪ್ರಯತ್ನದಲ್ಲಿ ಆ ವಸ್ತು ಇನ್ನೂ ಒಳಪ್ರವೇಶಿಸಿ, ಕಿವಿ ತಮಟೆಗೆ ಏಟೂ ಆಗಬಹುದು ಕೂಡಲೆ ತಜ್ಞವೈದ್ಯರ ಬಳಿ ಕರೆದ್ದೊಯ್ಯಿರಿ.

ಮಕ್ಕಳಲ್ಲಿ ಕಿವಿಗೆ ಸೋಂಕು ತಗಲುವುದು ಸಾಮಾನ್ಯ. ನೆಗಡಿಯಾದಾಗ ಅಥವಾ ಮೂಗು ಕಟ್ಟಿದ ನಂತರ ಕಿವಿನೋವು ಶುರುವಾಗುತ್ತದೆ. ನಂತರ ಕೆಲವೊಮ್ಮೆ ಕಿವಿಯಿಂದ ಕೀವು ಹೊರಬರಲಾರಂಭಿಸುತ್ತದೆ. ಕಿವಿಯ ತಮಟೆಗೆ ಗಾಯವಾದಲ್ಲೂ ನಂತರ ಕಿವಿಸೋರುವಿಕೆ ಶುರುವಾಗುತ್ತದೆ.

ಸಾಮಾನ್ಯವಾಗಿ ಶೀತ, ನೆಗಡಿ, ಜ್ವರ, ಕಿವಿನೋವಿನೊಂದಿಗೆ ಕಿವಿಸೋರುವಿಕೆ ಪ್ರಾರಂಭವಾಗುತ್ತದೆ. ಮೂಗಿನ ಒಳಭಾಗಕ್ಕೂ, ಮಧ್ಯಕಿವಿಗೂ 'ಯುಸ್ಟೇಶಿಯನ್ ನಾಳ'ದ ಮೂಲಕ ಸಂಪರ್ಕವಿದ್ದು, ಪದೇ ಪದೇ ಶೀತ, ನೆಗಡಿ, ಗಂಟಲುನೋವು (ಟಾನ್ಸಿಲ್) ಇತ್ಯಾದಿ ಆದಾಗ ಸೋಂಕು ಮೂಗಿನ ಒಳಭಾಗದಿಂದ ಯುಸ್ಟೇಶಿಯನ್ ನಾಳದ ಮೂಲಕ ಮಧ್ಯಕಿವಿಗೆ ಹರಡುತ್ತದೆ.

ಮಧ್ಯಕಿವಿಯಲ್ಲಿ ಬ್ಯಾಕ್ಟೀರಿಯಗಳು ಸೋಂಕನ್ನುಂಟು ಮಾಡುತ್ತವೆ. ಇದರಿಂದಾಗಿ ಕೀವು, ಕಿವಿಯ ತಮಟೆಯ ಭಾಗದಲ್ಲಿ ರಂಧ್ರಮಾಡುವುದರ ಮೂಲಕ ಹೊರಗೆ ಬರಲಾರಂಭಿಸುತ್ತದೆ. ಕೆಲವೊಮ್ಮೆ ಈ ಕೀವು ಕೆಟ್ಟವಾಸನೆಯಿಂದ ಕೂಡಿರ..ವುದು. ಕೆಲವೊಮ್ಮೆ ರಕ್ತ ಸಹ ಬರಬಹುದು. ಕೂಡಲೇ ಸರಿಯಾದ ಔಷಧಿ ತೆಗೆದುಕೊಳ್ಳದಿದ್ದಲ್ಲಿ ಕಿವಿಸೋರುವಿಕೆ ಬಹಳ ಸಮಯದವರೆಗೆ ಮುಂದುವರಿಯಬಹುದು. ಆಗಾಗ ಮರುಕಳಿಸಬಹುದು. ಈ ರೀತಿ ಬಹಳ ಸಮಯದವರೆಗೆ ಕಿವಿ ಸೋರುವಿಕೆ ಇದ್ದಲ್ಲಿ ಸೋಂಕು ಸುತ್ತಮುತ್ತಲಿನ ಭಾಗಗಳಿಗೆ ಹರಡಿ ನಂತರ ಕಿವಿ ಕೇಳದೆ ಇರುವ ಪರಿಸ್ಥಿತಿಯನ್ನು ತಲುಪಬಹುದು. ಸೋಂಕು ಕೆಲವೊಮ್ಮೆ ಮೆದುಳಿಗೂ ತಲುಪಿ ಮೆದುಳಿನಲ್ಲಿ ಕೀವು, ಮೆದುಳು ಜ್ವರ ಸಹ ಉಂಟಾಗಬಹುದು. ಆದ್ದರಿಂದ ಕಿವಿ ಸೋಂಕು ಆದಲ್ಲಿ ನಿರ್ಲಕ್ಷಿಸದೆ ಕೂಡಲೇ ಗುಣಪಡಿಸುವುದು ಅತ್ಯವಶ್ಯಕ.

ಕಿವಿ ಸೋರುವಿಕೆ ಇದ್ದಾಗ ಕಿವಿಯನ್ನು ಸ್ವಚ್ಛವಾಗಿ ಇಟ್ಟುಕೊಳ್ಳಬೇಕು. ಒಂದು ಕಡ್ಡಿಯ ತುದಿಗೆ ಸ್ವಚ್ಛವಾದ ಹತ್ತಿ ಸುತ್ತಿ ನಿಧಾನವಾಗಿ ಕೀವು ಹೊರತೆಗೆಯಬೇಕು. ಸಾಧ್ಯವಾದರೆ ಹತ್ತಿಯನ್ನು ಕಿವಿಗೆ ತೂರಿಸುವ ಮೊದಲು ಹೈಡ್ರೊಜನ್ ಪೆರಾಕ್ಸೈಡ್‌ನ ದ್ರವಾಂಶದಲ್ಲಿ ಅದ್ದಿದರೆ ಇನ್ನೂ ಉತ್ತಮ. ಕಿವಿಯೊಳಕ್ಕೆ ಯಾವುದೇ ಕಾರಣಕ್ಕೂ ನೀರು ಸೇರಲು ಬಿಡಬಾರದು. ಸ್ನಾನಮಾಡುವಾಗ ಕಿವಿಯಲ್ಲಿ ಹತ್ತಿಯನ್ನು ಇಟ್ಟುಕೊಳ್ಳಬೇಕು. ವೈದ್ಯರ ಸಲಹೆಯಂತೆ ಜೀವರೋಧಕ ಔಷಧವನ್ನು (antibiotics) ತಪ್ಪದೇ ಉಪಯೋಗಿಸಬೇಕು. ಜೊತೆಗೆ ಶೀತ, ಮೂಗು ಕಟ್ಟಿಕೊಳ್ಳುವುದು ಇದ್ದಲ್ಲಿ ತಪ್ಪದೇ ಅದಕ್ಕೂ ಚಿಕಿತ್ಸೆ ತೆಗೆದುಕೊಳ್ಳಬೇಕು. ನೆಗಡಿಯಾದಾಗ ಮೂಗು ಒರೆಸಿಕೊಳ್ಳುವುದೇ ವಿನಃ ಮೂಗು ಸೀಟಬಾರದು.

ಟಾನ್ಸಿಲ್ ಗ್ರಂಥಿಗೆ ಪದೇ ಪದೇ ಸೋಂಕಾಗುತ್ತಿದ್ದಲ್ಲಿ ಶಸ್ತ್ರಚಿಕಿತ್ಸೆಯ ಮೂಲಕ ಟಾನ್ಸಿಲನ್ನು ತೆಗೆಸಿಕೊಳ್ಳಬೇಕು. ಮೂಗಿನ ಮೂಳೆ ಡೊಂಕಾಗಿದ್ದು ಪದೇ ಪದೇ ನೆಗಡಿಯಾಗುತ್ತಿದ್ದಲ್ಲಿ ಶಸ್ತ್ರಚಿಕಿತ್ಸೆಯ ಮೂಲಕ ಸರಿ ಪಡಿಸಿಕೊಳ್ಳಬೇಕು. ಈ ಕ್ರಮಗಳಿಂದ ಮುಂದೆ ಕಿವಿಸೋರುವಿಕೆ ಸಾಧ್ಯತೆ ತುಂಬಾ ಕಡಿಮೆಯಾಗುತ್ತದೆ.

ಬಹಳ ವರ್ಷದಿಂದ ಇರುವ ಕಿವಿಸೋರುವಿಕೆಯಿಂದಾಗಿ ಹಲವಾರು ತೊಂದರೆಗಳು ಉದ್ಭವಿಸಬಹುದು. ಇಂತಹ ಸಂದರ್ಭಗಳಲ್ಲಿ ಕಿವಿ ವೈದ್ಯರ ಸಲಹೆಯಂತೆ ಕಿವಿಯೊಳಗೆ ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಳ್ಳಬೇಕಾಗುತ್ತದೆ.

ಒಟ್ಟಿನಲ್ಲಿ ಕಿವಿಸೋರುವಿಕೆ, ಕಿವಿನೊವು ಇದ್ದಲ್ಲಿ ನಿರ್ಲಕ್ಷಿಸದೇ ಕೂಡಲೇ ತಜ್ಞವೈದ್ಯರನ್ನು ಕಂಡು ಅವರ ಸಲಹೆಗನುಗುಣವಾಗಿ ನಡೆಯುವುದು ಅತ್ಯಂತ ಕ್ಷೇಮಕರ.

ಡಾ. ಎಸ್. ಎಸ್. ಪ್ರವೀಣ, ಎಂ. ಡಿ.,
ಕೇರಳ




✦ ಕೌಂಡಿನ್ಯ

ಧಾರವಾಹಿ -6

ಸಂಪಿಗೆ ಪುರ!

ಬಂಗಲೆಯಿಂದ ಹೊರಟ ಜೀಪಿನಲ್ಲಿ ರೇವತಿ ಕುಳಿತುಕೊಂಡಿದ್ದಾಳೆ. ಪ್ರಸನ್ನ ತಾನೇ ಡ್ರೈವ್ ಮಾಡುತ್ತಿದ್ದಾನೆ.

ಇಬ್ಬರ ನಡುವೆ ಮೌನ !

ರಸ್ತೆಗಳು ಚೆನ್ನಾಗಿರಲಿಲ್ಲ !

ಜೀಪಿಗೆ ಅಡ್ಡವಾಗಿ ತೋಟಗಳು, ದನ, ಎಮ್ಮೆ, ಕರುಗಳು ಬರುತ್ತಿದ್ದವು. ಗಬ್ಬು ವಾಸನೆ ಬರುತ್ತಿದೆ.

ಬೋರ್‌ವೆಲ್ ಹತ್ತಿರ ಆ ದೃಶ್ಯ !

ಕೆಲವರು ಪಾತ್ರೆ ತೊಳೆಯುತ್ತಿದ್ದರೆ ಇನ್ನೂ ಕೆಲವರು ಎಮ್ಮೆಗಳ ಮೈ ತೊಳೆಯುತ್ತಿದ್ದಾರೆ. ಗಲೀಜು........... ಗಲೀಜು !

ವಾಸ್ತವ ತರಂಗಗಳಲ್ಲಿ ಆ ದೃಶ್ಯ !

ಮಕ್ಕಳು ಬಟ್ಟೆ ಬಿಚ್ಚಿ ಕುಕ್ಕರಕಾಲಿನಲ್ಲಿ ಕುಳಿತು ಕಕ್ಕಸು ಮಾಡುತ್ತಿರುವ ನಿತ್ಯ ದೃಶ್ಯ !

ಮುಖ ಸಿಂಡರಿಸಿದಳು ರೇವತಿ !

ಆ ಊರಿನಲ್ಲಿ ಒಂದಾದರೂ ಒಳ್ಳೆಯ ಮನೆ ಇರಲಿಲ್ಲ. ಯಾವ ರೀತಿಯ ಅನುಕೂಲಗಳು ಸಹ ಇರಲಿಲ್ಲ !

ರೇವತಿ ಅವನತ್ತ ನೋಡಿದಳು !

ಅದೇನೋ ಚಿಂತೆ ಕವಿದಿದೆ !

ಮುಖದಲ್ಲಿ ಮೊದಲಿನ ನಗು, ಉತ್ಸಾಹ ಇರಲಿಲ್ಲ. ಏನೇನೋ ಹೇಳಬೇಕು ಎಂದು ಪರದಾಡುತ್ತಿದ್ದಾನೆ.

ಆದರೆ ಹೇಳಲಾಗುತ್ತಿಲ್ಲ !

ಮುಖದ ಸ್ನಾಯುಗಳು ಬಿಗಿದಿವೆ !

ತುಂಬಾ ಹೊತ್ತಿನ ನಂತರ ಪ್ರಸನ್ನ ಗಂಭೀರವಾಗಿ "ರೇವತಿ ನೀನು ಅಲ್ಲಿಗೆ ಹೋಗಲೇ ಬೇಕಾ"?

ರೇವತಿ ನಗುತ್ತಾ "ಇದೆಂತ ಪ್ರಶ್ನೆ ಅಂತ ಕೇಳುತ್ತೀರಾ ಪ್ರಸನ್ನ?"

ಈ ಊರಿಗೆ ಬಂದ ಮೇಲೆ ನನ್ನ ಕ್ಲೋಸ್ ಫ್ರೆಂಡನ್ನು ನೋಡದೆ ಇದ್ದರೆ ಅವಳು ಸುಮ್ಮನಿರುತ್ತಾಳೆಯೇ?" ಎಂದು ಕೇಳಿದಳು.

ಪ್ರಸನ್ನ ಉತ್ತರಿಸಲಿಲ್ಲ.

ಪ್ರಸನ್ನ ಮೆಲ್ಲಗೆ "ರೇವತಿ......... ನೀನು ವಿದ್ಯಾವಂತೆ ಆಲೋಚಿಸುವ ಶಕ್ತಿ ಇದೆ. ಕೆಡುಕು ಮಾತುಗಳಿಗೆ ಕಿವಿಕೊಡಬೇಡಿ"

ರೇವತಿ ಆಶ್ಚರ್ಯದಿಂದ "ಅಂದರೆ...............!"

"ನಿಮಗೆ ಗೊತ್ತಾಗುತ್ತದೆ ಹೋಗಿ. ನಾನು.......... ಊರಿಗೆ ಹೋಗುವ ಮುನ್ನ ನೀವು ನನ್ನನ್ನು ನೋಡಲೇಬೇಕು"

ರೇವತಿ ನಗುತ್ತಾ ತಲೆಯಾಡಿಸಿದಳು.

"ನಿಮ್ಮ ನಿರ್ಧಾರ ತಿಳಿಯಲು ಕಾತರಿಸು ತ್ತಿದ್ದೇನೆ" ಎಂದು ಅವಳ ಕಣ್ಣುಗಳನ್ನೇ ನೋಡುತ್ತಾ ಹೇಳಿದನು.

ರೇವತಿಗೆ ರೋಮಾಂಚನವಾಯಿತು– ಮಾದಕತೆ ತುಂಬಿರುವ ಅವನ ನೋಟ !

ಅಬ್ಬಾ............... ನೋಡುತ್ತಿದ್ದರೆ ತಾನಲ್ಲಿ ಈ ಕ್ಷಣವೇ ಒಪ್ಪಿಗೆಯನ್ನು ತಿಳಿಸಿ ಬಿಡುತ್ತೇನೋ ಎಂದು ಹೆದರಿದಳು.

ಜೀಪು ಹೋಗುತ್ತಿದೆ !

ರೇವತಿ ಕೈಯಲ್ಲಿ ಸೂಟ್‌ಕೇಸನ್ನು ಹಿಡಿದುಕೊಂಡು ಹೋಗುತ್ತಿರುವ ಜೀಪನ್ನೇ ನೋಡುತ್ತಿದ್ದಾಳೆ.

ಇವನ ವ್ಯಕ್ತಿತ್ವ ತೆರೆದಿಟ್ಟ ಪುಸ್ತಕ ಅಲ್ಲ! ನಗು ಮುಖದ ಹಿಂದೆ ಏನೋ.......... ಇನ್ನೇನೋ ಇದೆ.

ನಾನು ದುಡುಕಬಾರದು !

ಆ ರಸ್ತೆಯ ಜನಗಳು ರೇವತಿಯನ್ನು ಈಗ ವಿಚಿತ್ರ ಪ್ರಾಣಿಯನ್ನು ನೋಡುವಂತೆ ನೋಡುತ್ತಿದ್ದಾರೆ.

ರೇವತಿ ಚೆಲುವೆ ಅಂತ ಅಲ್ಲ !

---

ಇಲ್ಲಿಯವರೆಗೆ....................................

ಸಂಪಿಗೆ ಪುರದ ಎಡತೊರೆಯ ಶ್ರೀಮಂತರ ಮನೆಯಲ್ಲಿ ವಧು ಪರೀಕ್ಷೆ ನಡೆಯುತ್ತದೆ. ಸುಂದರ ಮುಖದ ಪ್ರಸನ್ನ ರೇವತಿಯನ್ನು ಮದುವೆಯಾಗಲು ಬಯಸುತ್ತಾನೆ. ರೇವತಿ ತನ್ನ ನಿರ್ಧಾರವನ್ನು ಮಾರನೆಯ ದಿನ ತಿಳಿಸುವುದಾಗಿ ಹೇಳುತ್ತಾಳೆ. ರೇವತಿಯ ಗೆಳತಿ ಮೀನಳ ಹೆಸರನ್ನು ಕೇಳಿದ ಕೂಡಲೆ ಪ್ರಸನ್ನ ತುಂಬ ಗಾಬರಿಯಾಗುತ್ತಾನೆ.

ಮುಂದೆ ಓದಿ..............

---

ರಸ್ತೆ ತಿರುವಿನಲ್ಲಿ ಜೀಪನ್ನು ನಿಲ್ಲಿಸಿ ರೇವತಿಯ ಕಡೆಗೆ ತಿರುಗಿ ನೋಡಿದನು.

ಸಾಲು, ಸಾಲಾಗಿದ್ದ ಮಣ್ಣಿನ ಗೋಡೆಯ ಮನೆಗಳನ್ನು ನೋಡುತ್ತಾ ರೇವತಿ

"ಇವರಲ್ಲಿ ಮೀನಳ ಮನೆ ಯಾವುದು?"

ರೇವತಿಗೆ ಆಶ್ಚರ್ಯವಾಗುತ್ತಿದೆ !

ಮೀನಳ ಮನೆಗೆ ಇನ್ನೂ ತುಂಬಾ ದೂರ ಹೋಗಬೇಕು. ರಸ್ತೆಯ ತುದಿಯಲ್ಲಿ ಜೀಪನ್ನು ಏಕೆ ನಿಲ್ಲಿಸಿದ?

"ನೀವು ಬರುತ್ತೀರಾ ಪ್ರಸನ್ನ?"

ಪ್ರಸನ್ನ ಗಂಭೀರವಾಗಿ "ನಾನು ಬರುವ ಹಾಗೆ ಇದ್ದಿದ್ದರೆ ಇಲ್ಲಿ ಏಕೆ ಜೀಪನ್ನು ನಿಲ್ಲಿಸುತ್ತಿದ್ದೆ ರೇವತಿ."

"ಮೀನಳ ಮನೆಗೆ ನೀವು ಏಕೆ ಬರಲ್ಲ?"

ಪ್ರಸನ್ನ "ಮೀನಳ ಮನೆಗೆ ಅಂತ ಅಲ್ಲ. ನಾನು ಯಾರ ಮನೆಗೂ ಸಹ ಹೋಗು ವುದಿಲ್ಲ. ನೀವಿನ್ನು ಹೋಗಿ ಬನ್ನಿ".

ರೇವತಿ ಜೀಪಿನಿಂದ ಇಳಿದಳು.

ರೇವತಿ ಎಡತೊರೆ ಮನೆಯ ಶ್ರೀಮಂತ ಯುವಕನ ಜೊತೆ ಜೀಪಿನಲ್ಲಿ ಬಂದಿದ್ದಳಲ್ಲ? ಎಡತೊರೆಯವರು ಶ್ರೀಮಂತರು !

ಈ ಶ್ರೀಮಂತಿಕೆ ವಂಶಪಾರಂಪರ್ಯವಾಗಿ ಬಂದಿರಲಿಲ್ಲ ! ಹಂತ ಹಂತವಾಗಿ ಮೇಲೆ ಏರಲಿಲ್ಲ !

ದಿಢೀರ್ ಅಂತ ಶ್ರೀಮಂತರಾಗಿಬಿಟ್ಟರು !

ಅದೇ ಊರಿನವರಿಗೆ ಸಂದೇಹ !

ಸಂಪಿಗೆ ಪುರದಲ್ಲಿ ದೊಡ್ಡ ಹುತ್ತವಿತ್ತು ! ಎಡತೊರೆಯ ಬಂಗಲೆಯನ್ನು ಆ ಊರಿನ ಜನಗಳು ಹುತ್ತಕ್ಕೆ ಹೋಲಿಸುತ್ತಿದ್ದರು !

ಅಲ್ಲಿರುವ ಮಂದಿಗಳು ಹುತ್ತದಲ್ಲಿನ ಹಾವುಗಳಂತೆ !

ಹಾವು ಅಂದ ಮೇಲೆ ಎಲ್ಲಾದರೂ ಒಂದು ಕಡೆ ವಿಷ ಇರಬೇಕು !

* * *

ಅದು ಈಶ್ವರನ ದೇವಸ್ಥಾನ !

ಆಗ ಮಧ್ಯಾಹ್ನ ನಾಲ್ಕು ಗಂಟೆ !

ಆದ್ದರಿಂದ ದೇವಸ್ಥಾನದ ಬಾಗಿಲನ್ನು ಹಾಕಲಾಗಿತ್ತು. ರೇವತಿ ದೇವಸ್ಥಾನದ ಪಕ್ಕದ ಮನೆಗೆ ಬಂದಳು.

ಮೃದುವಾಗಿ ಬಾಗಿಲನ್ನು ಬಡಿದಳು.

ಗೆಳತಿ ಮೀನಳನ್ನು ನೋಡಬೇಕು. ಅವಳ ಜೊತೆ ತುಂಬಾ......... ಮಾತಾಡಬೇಕು. ಎಂಬ ಕಾತುರವಾಗುತ್ತಿದೆ !

ಬಾಗಿಲು ತೆರೆಯಿತು !

ಅಲ್ಲಿ ಮೀನ ಇರಲಿಲ್ಲ !

ತುಂಬು ಪ್ರಾಯದ ಯುವಕ ನಿಂತಿದ್ದ !

ರೇವತಿ ಕಣ್ಣರಳಿಸಿ ನೋಡಿದಳು. ಆ ಯುವಕನ ಮುಖದಲ್ಲಿ ಮೀನಳ ಹೋಲಿಕೆ ಇತ್ತು. ಬಹುಶಃ ಅವಳ ತಮ್ಮ ಇರಬೇಕು.

"ಲೋ ಶ್ರೀಕಂಠ ಯಾರೋ ಬಂದಿರಬೇಕು" ಎನ್ನುತ್ತಾ ವಯಸ್ಸಾದ ಮುದುಕಿ ಅಲ್ಲಿಗೆ ಬಂದಳು.

ಮೀನಳ ಅಜ್ಜಿ !

ರೇವತಿ ಕೈ ಜೋಡಿಸಿ ನಮಸ್ಕರಿಸುತ್ತಾ ನನ್ನ ಹೆಸರು ರೇವತಿ ಅಂತ. ನಾನು ಮೀನಳ ಗೆಳತಿ. ನಾವಿಬ್ಬರೂ ಮೈಸೂರಿನಲ್ಲಿ ಒಟ್ಟಿಗೆ ಓದುತ್ತಿದ್ದೆವು.

ಅಜ್ಜಿಯ ಮುಖ ಅರಳಿತು.

ಮುಖದಲ್ಲಿ ನಗು !

ಅಜ್ಜಿ ನಗುತ್ತಾ "ಓ................ ರೇವತಿನಾ ................. ನಿನ್ನ ಬಗ್ಗೆ ನಮ್ಮ ಮೀನ ತುಂಬಾ ಹೇಳುತ್ತಿದ್ದಳು. ಒಳಗೆ ಬಾರಮ್ಮ."

ರೇವತಿ ಒಳಗೆ ಬಂದಳು

ಅದು ಹಳೆಯ ಕಾಲದ ಮನೆ. ಮಣ್ಣಿನ ಗೋಡೆಗಳು ! ನಾಡ ಹಂಚು ಅಲ್ಲಲ್ಲಿ, ಚೂರು ಚೂರಾಗಿತ್ತು.

ಬಡತನದ ಲಕ್ಷಣಗಳು !

ಆದರೆ ಎಲ್ಲಾ ಕಡೆ ಶುಚಿಯಾಗಿತ್ತು !

ಗೋಡೆಯ ಮೇಲೆ ಇರುವ ದೇವರ ಫೋಟೋಗಳನ್ನು ರೇವತಿ ನೋಡುತ್ತಿರುವಾಗ ಅವಳ ದೃಷ್ಟಿ ಅಲ್ಲಿ ನಿಂತಿತು !

ಗೆಳತಿ ಮೀನಳ ಫೋಟೋ !

ಅದಕ್ಕೆ ಹಾರ ಹಾಕಲಾಗಿತ್ತು !

ಅಂದರೆ....... ಅಂದರೆ.............!?

(ಮುಂದುವರೆಯುತ್ತದೆ)

---

***ಭಟ್ಟಂಗ ಕೊಟ್ಟದ್ ಅತ್ತಗೆ ಹೋತ್***

ಹೇಳಿಕೆ ಒಂದು ಕಥೆವುಟ್ಟು
ಕೇಳಿಕೆ ಬಾರಿ ರಸವುಟ್ಟು ।
ಮ್ಯಾಲೆ ಮನೆ ತಮ್ಮಣ್ಣ ಹೈದ
ಹೋದ್ ಗೂಡೆನ ನೋಡಿಕೆ ಹೌದ?
ಗೂಡೆನ ಹೆಸರ್ ಚಿಮ್ಮಿತ
ಅವ್ಳಿಗೆ ಏನ್ ಕಮ್ಮಿತ !
ನೋಡಿಕೆ ಗೂಡೆ ಪೊರ್ಳುಟ್ಟು
ಹೈದನೂ ಒಪ್ಪಿಗೆ ಕೊಟ್ಟುಟು ।
ಗಣ ಕೂಟ ಎಲ್ಲಾ ಕೂಡಿನೂ ಬಾತ್
ಭಟ್ಟಂಗೆ ಕೊಟ್ಟದ್ ಅತ್ತಗೆ ಹೋತ್ !
ಆಕಡೆ ಈ ಕಡೆ ಮನೆ ನೋಡ್ಯಾತ್
ಕೋಳಿಗ ಎರ್ಡ್ ಗೈಪಾತ್ ।
ಗೂಡೆನ ಮನೆಲಿ ಕುಡ್ದದ್ ಕುಪ್ಪಿ
ಎಲ್ಲವು ಹೊರ್ಲ್ಯೊ ಖುಷಿಲಿ ಒಪ್ಪಿ ।
ಮದುವೆ ನಡೆದು ಮುಂದೇನ ತಿಂಗ
ಮಾಡ್ಲೊನ ಅವು ಅಳಿಯನ ಮಂಗ?
ಧಾರೆಗೆ ಆಕಕನ ಅಳಿಯನ ಬೊಬ್ಬೆ
ಗೂಡೆನ ಕಡೆವು ಬೆಬ್ಬೆಬ್ಬೆ ।
ತೋರ್ಸಿದ್ ಇವಂಗೆ ತಂಗೆನಗಡ
ಹಿಡ್ಸಿಕೆ ನೋಡ್ಡ್ ಅಕ್ಕನ ಗಡ !
ಗೂಡೆದ್ ಈಗ ಗೋಳಾಟ
ಅತ್ತೆ ಮಾವಂದ್ ರಂಪಾಟ ।
ಹೈದನ ತಮ್ಮನೂ ಹೋಗಿತ್ತ್ ದಿಬ್ಬಣ
ಒಪ್ಪಿತ್ ಅಕ್ಕನ ಅಂವ ಆ ಕ್ಷಣ ।
ಮೂಹೂರ್ತಕ್ಕೆ ಕುದ್ದದ್ ಜೋಡೆರಡ್
ಸುಖಲಿ ಬದ್ಕುವೆ ಈಗವು ನೋಡಿ ॥

ರಾಜ ಚೆರಿಯ ಮನೆ
ಜೋಡುಪಾಲ

---

## ರವಿ-ರಶ್ಮಿ

ಮುಂಜಾನೆಯ ನಸುಕಿನಲಿ
ತನ್ನ ರಶ್ಮಿಯನ್ನು ಚೆಲ್ಲುತ್ತಾ
ಭೂ ಮಂಡಲವನ್ನು
ರಂಜಿಸುವನು ಆ ರವಿ ।

ರಶ್ಮಿಯ ಕಾಂತಿಗೆ ಹಸಿರು
ಜಗಮಗಿಸುತ್ತಾ ಹಕ್ಕಿಗಳ,
ನದಿಗಳ, ಸಕಲ ಜೀವ ಸತ್ವಗಳ
ರಂಜಿಸುವನು ಆ ರವಿ ।

ಮುಂಜಾನೆಯ ರಶ್ಮಿಯನ್ನು
ನೋಡಲು ಸಾಲದು ಎರಡು
ಕಣ್ಣುಗಳು, ಸಕಲ ದೃಶ್ಯವನ್ನು
ರಂಜಿಸುವನು ಆ ರವಿ ।

ರಶ್ಮಿಯು ಕ್ಷೀಣಿಸುತ್ತಾ ಹೋದ
ಹಾಗೆ, ಸಕಲ ಶಕ್ತಿಯನ್ನು
ಕಳೆದುಕೊಂಡವನ ಹಾಗೆ,
ರಂಜಿಸುವನು ಆ ರವಿ ।

ಮುಕ್ಕಾಟಿರ ಎಸ್. ರವಿಕುಮಾರ್
ಚೇರಂಬಾಣೆ

# ಗೌಡ ಸಮಾಜ, ಕೊಡಗು ಬಂಡಾಯ ಮೊದಲು ಮತ್ತು ನಂತರ

(ಗೌಡರ ಉನ್ನತಿ ಅವನತಿಗಳ ಹೋಲಿಕೆಯನ್ನು ಶ್ರೀ ಬಾಲಕೃಷ್ಣನವರು ಸಮಾಜದ ಬಂಧುಗಳಿಗೆ ಮಾಡಿಕೊಟ್ಟಿದ್ದಾರೆ. ಯಾವುದೇ ಸಮಾಜ ನೈತಿಕವಾಗಿ ಅಧ್ಯಾತ್ಮಿಕವಾಗಿ - ಭೌತಿಕವಾಗಿ ದಿನ ದಿನಕ್ಕೆ ಮುಂದುವರೆದರೆ ಆ ಸಮಾಜದ ಸರ್ವತೋಮುಖ ಅಭಿವೃದ್ಧಿಯನ್ನು ಕಾಣಬಹುದು. ಅದಲ್ಲದೆ ಒಂದು ಸಲ ಉನ್ನತ ಸ್ಥಿತಿಗೇರಿ ಮತ್ತೊಮ್ಮೆ ಪಾತಾಳಕ್ಕೆ ಬಿದ್ದರೆ ಅಂತಹ ಸಮಾಜದ ಸಂಸ್ಕೃತಿ ಆರ್ಥಿಕ ಸ್ಥಿತಿಯಲ್ಲಿ ಏರುಪೇರಾಗುವುದು ಎಂಬುದಕ್ಕೆ ಶ್ರೀ ಬಾಲಕೃಷ್ಣನವರು ತಮ್ಮ ಲೇಖನದಲ್ಲಿ ತೋರಿಸಿಕೊಟ್ಟಿದ್ದಾರೆ. ಈ ರೀತಿಯ ನ್ಯೂನತೆಗೆ ಕಾರಣದ ಪಾಠವನ್ನು ಚರಿತ್ರೆಗಳಿಂದ ಕಲೆತು, ಕಲಿತ ಪಾಠದಿಂದ ಜನತೆ ಜಾಗ್ರತೆಗೊಳ್ಳುವುದಕ್ಕೆ ಈ ಲೇಖನ ಉಪಯುಕ್ತವಾಗಿದೆ.) –ಸಂ]

ಭಾರತದ ಸ್ವಾತಂತ್ರ ಸಂಗ್ರಾಮವು ಸಿಪಾಯಿದಂಗೆ ಎಂದು ಆಂಗ್ಲರಿಂದ ಹೆಸರಿಸಲ್ಪಟ್ಟಿದ್ದರೆ ಅದಕ್ಕೂ ಸುಮಾರು 2 ದಶಕಗಳ ಹಿಂದೆ ನಡೆದು ಅಮರ ಸುಳ್ಯ ಕಾಟಕಾಯಿ ಅಥವಾ ಕಲ್ಯಾಣಪ್ಪನ ಕಾಟಕಾಯಿಯು ಕೊಡಗು ಕೆನರಾ ಬಂಡಾಯವೆಂದಾಯ್ತು. ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಗೌಡ ಜನಾಂಗದ ಮುಂದಾಳುಗಳು ಸ್ವಾತಂತ್ರ್ಯ ಸಮರದ ಕಹಳೆಯನ್ನೂದಿದ್ದರು. ಇದೇ ಕಾಟಕಾಯಿ ಕೀರ್ತಿಶೇಷರುಗಳಾದ ಗುಡ್ಡೆಮನೆ ಅಪ್ಪಯ್ಯಗೌಡರು ಸುಳ್ಯದ ಕೆದಂಬಾಡಿ ರಾಮಪ್ಪಗೌಡರೂ ಮೂರು ವರ್ಷಗಳ ಪರ್ಯಂತ ಅವಿಶ್ರಾಂತ ಶ್ರಮ ವಹಿಸಿ ಸುಮಾರು 12,000 ಕ್ರಾಂತಿ ವೀರರನ್ನು ಸಿದ್ಧಪಡಿಸಿ 1837ರಲ್ಲಿ ಬೆಳ್ಳಾರೆ ಪುತ್ತೂರು, ಪಾಣೆ ಮಂಗಳೂರು ಮತ್ತು ಮಂಗಳೂರುಗಳನ್ನು ತಮ್ಮ ಜೈತ್ರ ಯಾತ್ರೆಯಿಂದ ಸ್ವಾಧೀನ, ಕಲ್ಯಾಣಸ್ವಾಮಿಯ ಅಧಿಕಾರ ಸ್ಥಾಪನೆ ಮಾಡಿದರು. ಯೋಗ್ಯರೂ ಧೀರರೂ ಮುಂದೆ ಹೋಗುವಾಗ ಕಂತ್ರಿಗಳೂ ಕುತಂತ್ರಿಗಳೂ ಎಲ್ಲಿಯವರೆಗೆ ಅವರು ಕುಮ್ಮಕ್ಕನ್ನು ಕೊಡುವುದು ಅಂದೂ-ಇಂದೂ ಎಂದೆಂದೂ ಇರುವ ರೂಢಿ, ಪರಿಣಾಮವಾಗಿ ಮಂಗಳೂರನ್ನು ಸ್ವಾತಂತ್ರ್ಯ ವೀರರು ಸ್ವಾಧೀನ ಪಡಿಸಿದ 13ನೇ ದಿನವೇ ಬೊಂಬಾಯಿ ಕಡೆಯಿಂದ ಕೇವಲ 3000 ಸುಸಜ್ಜಿತ ಸೈನಿಕರೊಂದಿಗೆ ಧಾವಿಸಿದ ಕೇಪ್ಟನ್ ಎವರೆಸ್ಟ್ ಮತ್ತು ಗ್ರೀನ್ ಎಂಬವರು ಇವರನ್ನು ಯುದ್ಧದಲ್ಲಿ ಸೋಲಿಸಿದರು. ನಂತರ ವೀರ ರಾಮಪ್ಪಗೌಡರನ್ನು ಮತ್ತು ಕಲ್ಯಾಣಸ್ವಾಮಿಯವರನ್ನು ಮಂಗಳೂರು ಬಿಕರ್ನಕಟ್ಟೆಯ ಬಳಿಯು ಗುಡ್ಡೇರ ಅಪ್ಪಯ್ಯಗೌಡರನ್ನು ಮಡಿಕೇರಿ ಕೋಟೆಯ ಮುಂಭಾಗದಲ್ಲಿಯೂ ಬ್ರಿಟಿಷ್ ಸೇನಾ ಕಾನೂನು ಅಧಿಕಾರಿಗಳು ವಿಚಾರಣೆ ಮಾಡಿ ಗಲ್ಲಿಗೇರಿಸಿದರು. ಕ್ರಾಂತಿ ವೀರರೂ ಸ್ವಾತಂತ್ರ್ಯ ಯೋಧರು ಬಂಡಾಯಗಾರರು ದೇಶ ದ್ರೋಹಿಗಳೆಂದಾದರು. ಸೆರೆ ಸಿಕ್ಕಿದ ಕೆಲವು ಮುಖ್ಯಸ್ಥರನ್ನು ಅಜೀವ ಶಿಕ್ಷೆ ವಿಧಿಸಿ ಸಿಂಗಾರಪುರಕ್ಕೂ ಅಂಡಮಾನಿಗೂ ಗಡಿಪಾರು ಮಾಡಿದರು. ಕೆಲವರನ್ನು ಬಹುದೂರದ ಜೈಲುಗಳಿಗೆ ತಳ್ಳಿದರು. ಸ್ವಾತಂತ್ರ್ಯ ಸಂಗ್ರಾಮದ ಕಿಡಿಯು ನಂದಿತು. ಗೌಡರ ಧೈರ್ಯವು ಕುಗ್ಗಿತು. ಕಾರುಬಾರು ಉಡುಗಿತು.

ಕ್ರಿ. ಶ. 1834ರ ಮೊದಲು ಗೌಡ ಜನಾಂಗವು ಉಚ್ಛ್ರಾಯಸ್ಥಿತಿಯಲ್ಲಿತ್ತು. ಎಲ್ಲವರೂ ಕೃಷಿಕರೂ ಪಶುಪಾಲನಾ ವೃತ್ತಿಯವರಾಗಿ ಬೇಸಾಯದ ಭೂಮಿಯನ್ನು ಹೊಂದಿದ ವರ್ಗದಾರರೂ ಪಟ್ಟಾದಾರರೂ ಆಗಿದ್ದರು. ಕನ್ನಡ ಓದು ಬರಹ ತಿಳಿದಿದ್ದ ಧನಿಕ ಗೌಡನು ಊರ ಪಟೇಲನೋ ಪಾರುಪತ್ತೆಗಾರನೊ ಆಗಿ ಮುಂದಾಳುವಾಗಿದ್ದ.

ಜಾತಿಯ ಧಾರ್ಮಿಕ ಕಟ್ಟುಪಾಡುಗಳು ಸರಿಯಾಗಿ ನಡೆಯುತ್ತಿದ್ದುವು. ಕಾನೂನು ಕಟ್ಟಳೆಗಳೂ ವ್ಯಾಜ್ಯ ಸಾಜ್ಯಗಳೂ, ಜಾತಿ ನಡವಳಿಕೆಗಳೂ ಊರ ಅಧಿಕಾರಿ ಊರಗೌಡ, ಗ್ರಾಮದ ಅಧಿಕಾರಿ ಗ್ರಾಮಗೌಡ, ಮಾಗಣೆ ಅಧಿಕಾರಿ ಮಾಗಣೆ ಗೌಡ, ಸೀಮೆ ಅಧಿಕಾರಿ ಸೀಮೆ ಗೌಡ ಹಾಗೂ ಸರ್ವೋಚ್ಛ ಅಧಿಕಾರಿ ಕಟ್ಟೆಮನೆ ಗೌಡರ ತೀರ್ಮಾನಕ್ಕೆ ಬದ್ಧವಾಗಿದ್ದವು. ಕಟ್ಟೆಮನೆಯಲ್ಲಿ ತೀರ್ಮಾನವಾಗದ ನ್ಯಾಯ ಶೃಂಗೇರಿ ಮಠದ ಶ್ರೀ ಶ್ರೀ ಶ್ರೀ ಜಗದ್ಗುರು ಅವರ ಮುಖೇನ ಮುಗಿಯುತ್ತಿತ್ತು. ಹಾಗಾಗಿ ಗೌಡ ಸಮಾಜದೊಳಗೆ ಸ್ನೇಹಭಾವ ಮತ್ತು ಅನ್ಯೋನ್ಯತೆಯಿತ್ತು. ಜನರು ಸಂಪನ್ನರಾಗಿದ್ದು ದಾನ ಧರ್ಮ ಮಾಡುತ್ತಿದ್ದರು. ಇದಕ್ಕೆ ಸಾಕ್ಷಿಯಾಗಿ ಕ್ರಿ. ಶ. 1246ನೇ ಇಸವಿಯಲ್ಲೇ ಕಾರ್ಕಳದಲ್ಲಿ ಚಕ್ಕಲ ಮಹಾದೇವಿಯು ರಾಜ್ಯಭಾರ ಮಾಡುತ್ತಿದ್ದಾಗ ಕಳಸದ ಸ್ವಾಮಿಯ ಸೇವೆಗೆಂದು ಮಿಗುದಂಡ ಕೋಟೆ ಗೌಡನ ಭೂಮಿಯನ್ನು ದತ್ತಿಯಾಗಿ ಬಿಟ್ಟುಕೊಟ್ಟ ಶಾಸನದ ಉಲ್ಲೇಖವಿದೆ.*

ದುಡಿಯ ಬೇಕು. ದುಡಿದು ಜೀವಿಸಬೇಕು. ಸೇವಕತನ ಸಲ್ಲದು. ಭಿಕ್ಷೆ ಬೇಡಿ ಜೀವಿಸುವುದು ಸರ್ವಥಾ ಕೂಡದು. ಭಿಕ್ಷೆ ಎತ್ತಿಯೂ ಜೀವಿಸಬೇಕೆಂದಾದರೆ ಕಟ್ಟೆಮನೆ ಗೌಡರ ಆದೇಶ ಪಡೆದು ಶೃಂಗೇರಿ ಗುರುಪೀಠದಿಂದ ಮರದ ಚಿಕ್ಕನೇಗಿಲಾಕೃತಿಯನ್ನು ಪಡೆದು ತನ್ನ ಕುತ್ತಿಗೆಗೆ ನೇತು ಹಾಕಿಕೊಂಡು ಬೇಡಬೇಕು. ಇದು ಅಂದಿನ ಕಟ್ಟಳೆ. ಎಂತಲೇ ಗೌಡ ಜನಾಂಗದಲ್ಲಿ ಬೇಡುವವರೇ ಇಲ್ಲವೆಂದರೂ ಅತಿಶಯವಲ್ಲ.

ಆಂಗ್ಲರ ಆಳ್ವಿಕೆಯ ತರುಣರಲ್ಲಿ ಕಂದಾಯವನ್ನು ಖಜಾನೆಗೆ ತಲುಪಿಸುವುದು ಗೌಡ ಜನಾಂಗದವರಿಗೆ ದೊಡ್ಡ ತಲೆನೋವಾಗಿತ್ತು. ದವಸ ಧಾನ್ಯಗಳ ಬದಲು ನಾಣ್ಯಗಳು ಅವುಗಳ ಬೆಲೆಯೆಂತ ಹುಟ್ಟಿಕೊಂಡ ಸಾಲ. ಚಿನ್ನ, ಬೆಳ್ಳಿ, ಹಿತ್ತಾಳೆ ಮತ್ತು ತಾಮ್ರದ ನಾಣ್ಯಗಳು ಬಂದಿದ್ದುವು. ಒಂದು ಕಡೆ ಆಳುವವರ ಭಯ ಇನ್ನೊಂದು ಕಡೆ ದವಸ ಧಾನ್ಯಗಳ ಬೆಲೆ ರೂಪದ ಹಣ ಮತ್ತು ಹಣದ ಲೆಕ್ಕಾಚಾರ ತಲೆಗೆ ಹತ್ತದ ಗೌಡ ಹತ್ತಿರದ ಇತರ ಜಾತಿಯ ಗೆಳೆಯನನ್ನು ಹಿಡಿದು ಅವನ ಮೂಲಕ ಕಂದಾಯ ಸಂದಾಯದ ದಾರಿಯನ್ನು ಹಿಡಿದು ಆ ಗೆಳೆಯನು ಇವರ ಬಗ್ಗೆ ರಸೀದಿ ಮಾಡಿಸುತ್ತಿದ್ದ. ಹೀಗೆ ಕೆಲವು ವರ್ಷಗಳ ಬಗ್ಗೆ ರಸೀದಿಯಾದ ಬಳಿಕ ಗೌಡರ ಭೂಮಿ ಗೆಳೆಯನಿಗೆ ಆಗಿ ಇವನು ಒಕ್ಕಲು ಗೆಳೆಯ ಧನಿಯಾದ ಇಂತಃ ಘಟನೆಗಳು ಹಲವು.

"ಕೊಟ್ಟುವ ಕೋಡಂಗಿ ಇಸ್ಕೊಂಡವ ಈರಭದ್ರ" ಅಂದ್ಹ ಹಾಗಾಯ್ತು. ಇನ್ನೂ ಹಲವು ಕಾರಣಗಳಿಂದ ಗೌಡ ಜನಾಂಗವು ಕೆಳಗಿಳಿಯುತ್ತಾ ಬಂತು.

ಬ್ರಿಟಿಷರು ತಮ್ಮ ಆಫೀಸುಗಳಲ್ಲಿ ಕೆಲಸ ಮಾಡಲು ಜನ ತಯಾರಿ ಮಾಡಲು ಹೈಸ್ಕೂಲು ಕಾಲೇಜುಗಳನ್ನು ಮಡಿಕೇರಿ, ಮಂಗಳೂರು, ಮೈಸೂರು, ಮದರಾಸು ಇತ್ಯಾದಿ ಕಡೆಗಳಲ್ಲಿ ತೆರೆದರು. ಕೊಡಗಿನಲ್ಲಿ ಕ್ರಿ. ಶ. 1907 ಹೊತ್ತಿಗೆ ನಿಡ್ಯಮಲೆ ಮುದ್ದಪ್ಪನವರು ಕೊಡಗು ಜಿಲ್ಲೆಯ ಮೊದಲ ಗೌಡ ಪದವೀಧರ. ಸೋಣಗೇರಿ ಚಿನ್ನಪ್ಪಗೌಡರು ಕ್ರಿ. ಶ. 1922 ನೇ ಇಸವಿಗೆ ಕನ್ನಡ ಜಿಲ್ಲೆಯ ಪ್ರಥಮ ಪದವೀಧರ ಗೌಡರಾದರು.

ಅಲ್ಲಿಯವರೆಗೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಗೌಡ ಜನಾಂಗದ ಹಿರಿಯರನೇಕರು ಪಾಲ್ಗೊಂಡು ಸೋತ ದೆಸೆಯಿಂದಲೋ, ಇಂಗ್ಲೀಷ್ ವಿದ್ಯಾಭ್ಯಾಸ ಕೊಟ್ಟ ಮಗ ಎತ್ತು ಕೋಣಗಳ ಮಾಂಸವನ್ನು ಗತ್ತಿನಲ್ಲಿ ತಿಂದಾನು ಎಂಬ ಅಂಜಿಕೆಯಿಂದಲೋ, ವಿದ್ಯಾಭೀತಿಯಿಂದಲೋ, ಮಗನನ್ನು ಬಲು ದೂರದ ಮಂಗಳೂರಿಗೆ ಓದಲು ಕಳುಹಿಸಲಿಲ್ಲ. ತಮ್ಮ ಅಂಕೆಯಲ್ಲಿರಲಾರನೆಂದು ಹೆದರಿಕೆಯಿಂದಲೋ, ಮುದ್ದು ಮಗನನ್ನು ಬಿಟ್ಟಿರಲಾರದ ಮಮತೆಯಿಂದಲೋ ಅಥವಾ ಆರ್ಥಿಕ ಮುಗ್ಗಟ್ಟಿನ ದೆಸೆಯಿಂದಲೋ ಗೌಡನು ಹೆಚ್ಚಿಗೆ ಓದಲಾರದೆ ಉಳಿದದ್ದು ಉಳಿದದ್ದೇ.

ಹಾಗಾಗಿ ಗೌಡ ಜನಾಂಗವನ್ನು 1837ರ ಹೊಡೆತದಿಂದ ಪೂರ್ಣ ಚೇತರಿಸಿಕೊಂಡಿಲ್ಲವೆಂದರೆ ತಪ್ಪಾಗಲಾರದು.

ಈಗ 1950-60 ರಿಂದೀಚಿಗೆ ಹಳ್ಳಿ ಹಳ್ಳಿಯಲೂ ಹೈಸ್ಕೂಲು ಕಾಲೇಜುಗಳು ಹುಟ್ಟಿಕೊಂಡು ಗೌಡರಲ್ಲಿ ಪದವೀಧರರು ನಿರ್ಮಾಣವಾಗುತ್ತಿದ್ದರೂ ಉದ್ಯೋಗಕ್ಕೆ ಸೇರಿಸಿಕೊಳ್ಳುವಾಗ ಶಿಫಾರಸ್ಸು ಮಾಡುವ ಶಾಸಕರಾಗಲೀ, ಸಂಸತ್ ಸದಸ್ಯರಾಗಲೀ (ಈ ಸಾಲಿನಲ್ಲಿ ಒಬ್ಬರನ್ನು ಹೊರತು) ಗೌಡ ಜನಾಂಗದಲ್ಲಿ ಇಲ್ಲವಾಗಿರುವುದರಿಂದ ಅನಾಥರಂತೆ ಇತರರನ್ನು ಯಾಚಿಸುವ ಸ್ಥಿತಿಗೆ ಬಂದಿದೆ. ಆದಕಾರಣವೇ ಹೆಚ್ಚಿನ ಗೌಡರು ಅಧ್ಯಾಪಕರಾಗಿ, ಉಪನ್ಯಾಸಕರಾಗಿಯೇ ಉದ್ಯೋಗದಲ್ಲಿದ್ದಾರೆ. ಮತ್ತು ಕಂದಾಯ, ವಿದ್ಯೆ, ಅರಣ್ಯ, ಪೋಲಿಸ್ ಮತ್ತು ಬೇರೆ ಸಂಸ್ಥೆಗಳಲ್ಲಿ ಉನ್ನತ ಅಧಿಕಾರ ಸ್ಥಾನಗಳಿಂದ ವಂಚಿರಾಗಿದ್ದಾರೆ.

* (ಸಂಪಾದಕರ ಸೂಚನೆ : ಈ ಗೌಡನಿಗೂ ಈಗ ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳಲ್ಲಿ ಕಾಣಸಿಗುವ ಗೌಡರಿಗೆ ರಕ್ತ ಸಂಬಂಧವಿದೆಯೋ ಎಂಬುದನ್ನು ಶ್ರೀ ಬಾಲಕೃಷ್ಣನವರಾಗಲೀ ಅಥವಾ ಗೌಡಸಂಸ್ಕೃತಿ ಬಗ್ಗೆ ಅನ್ವೇಷಣೆ ಮಾಡುವವರು ಈ ಗೌಡರು ವಿಜಯನಗರದಿಂದ ದಕ್ಷಿಣಕ್ಕೆ ಯಾವ ಸಮಯದಲ್ಲಿ ಬಂದರೆಂಬುದು ಅರಿವಾಗುವುದು. ಯಾಕೆಂದರೆ ನಮ್ಮ ಹಿರಿಯರು ಮತ್ತು ಲಾರ್ಡ್ ಇರ್ವಿನ್ ವೈಸರಾಯರು ಕೊಡಗಿಗೆ ಭೇಟಿ ಕೊಟ್ಟಾಗ 1929 ರಲ್ಲಿ ಈ ಪಂಗಡದ ಗೌಡರು ವಿಜಯನಗರ ಪತನವಾದ ನಂತರ ದಕ್ಷಿಣಕ್ಕೆ ಬಂದರೆಂದು ಅವರು ಕೊಟ್ಟ ಬಿನ್ನವತ್ತಳೆಯಲ್ಲಿ ತಿಳಿಸಿದ್ದಾರೆ. ವಿಜಯನಗರವು 1565ರಲ್ಲಿ ಪತನವಾಗಿರುವುದರಿಂದ 1246ನೇ ಇಸವಿಯ ಈ ಶಾಸನ ಈ ಗೌಡರ ಸಂತತಿಯವರಿಗೆ ಸಂಬಂದಪಟ್ಟಿದ್ದೇ ಅಲ್ಲವೇ ಎಂಬ ಸಂಶಯ ಬರುತ್ತದೆ.

**ಲೇಖನ : ಶ್ರೀ ಕೆಮ್ಮಾರ ಬಾಲಕೃಷ್ಣ. ದ. ಕ.**

## ನಾಡ್ ಸಂಪ್ರದಾಯ

ಯಾರು ಮಾಡಟ ಇಲ್ಲೆ ಯಾರು ನೋಡಟ ಇಲ್ಲೆ
ನಾಡ್ ಜನರಾ ನಾಡ ಸಂಪ್ರದಾಯ ।
ನೋಡ್ ಡೀಂಗಾದರೆ ನಾಡ್ ಹೆಸರಳ್ದೋದೆ
ಮಾಡೊವೆ ಇಲ್ಲೆ ಇದ್ ಬಾರಿ ಅನ್ಯಾಯ ।
ನೋಡಿನಿ ನೀವ್ ನಿಮ್ಮ ನಾಡಿಲಿ ಓಡುವಾ
ನೆತ್ತರ್‌ಲಿ ಬಂದಂತ ನಾಡಕಲೆನ !
ಕೂಡಿಂದ್ ಜನ ಎಲ್ಲ ಮಾಡಿ ನಾವ್ ಮನ್‌ಸಿಟ್ಟ್
ಉಳಿಸಿ ಕೊಣೊಕು ಹಳ್ಳಿ ಕಲೆನ ಬೆಲೆನ ।
ಬೆವರಿಳಿಸಿ ದುಡಿವ ಜನ ಅತೀ ಕಮ್ಮಿ ಹಳ್ಳಿಲಿ
ಇದ್ದರೂ ನೂರರ್ಲಿ ಒಬ್ಬ ಇಬ್ಬ ।
ಅಂತವರ ಮನೆಹಾಳ್ ಮಾಡಿಕೆ ಕಾದಿರುವೊ
ಅಕ್ಕ ಪಕ್ಕದ ಮನೆಲಿ ಯಾರಾದರೊಬ್ಬ ।
ಹಳೆ ತಲೆಗ ಅಳ್ದೋಗಿ ಹೊಸ ಜನಂಗ ತುಂಬ್ಯೋಗಿ
ತಲೆ ಮಾರ್‌ಂದಳೆ ಬೆಳ್ದ ಬಂದಕಲೆನ ।
ಎಳೆಕೂಸ್‌ಂದಳೆ ಆದರತಿಳೆ ಹೇಳಿ ನಾವವುಕೆ
ಅಳಿಸದೆ ಬೆಳಸೊಕ್ಕು ನಮ್ಮ ಸಂಸ್ಕೃತಿನ ।
ಹಳ್ಳಿ ಪೇಟೆನೆ ಆಗಿ ಹಳ್ಳಿಲದ್ ಮರ್ತೋಗಿ
ಜನ ಇಲ್ಲೆ ಪದ ಇಲ್ಲೆ ಜಾನಪದ ಕಲೆನೆ ।
ಜನಕಿರ್ದು ಮೈ ಬಿಚ್ಚಿ ನೋಡುವಾ ಬನಮುಚ್ಚಿ
ಜೀವನನ ತಿಳ್ದವುಕೆ ಅದೆ ದೊಡ್ಡ ಬೇನೆ ।
ನೇಗಿಲದ್ ಅಂದಿದ್ದ ನೊಗ ಅದ್ ಹಾಳಾಗಿ
ಹೂಡುವೆತ್ತ್‌ಗ ಇದ್ದೊ ಹಟ್ಟಿ ಒಳಗೆ ।
ಗೋರಿನಾವ್ ಗದ್ದೆಗಳ ಸೇರಿ ಬಿತ್ತುವ ಬೀಜ
ಸೋರಿ ಹೋಗುಟು ಇಂದ್ ಆ ಹಳ್ಳಿ ಒಳಗೆ ।
ಮಾರಿ ಪೂಜೆನು ಅಂದ್ ಜನ ಸೇರಿ ಮಾಡುವೊವು
ಮಿತಿ ಮೀರಿದಾ ಕುಸಿದ ದೆವ್ವಗಳಿಗೆ ।
ದಾರಿ ತೋರ್ಸಿಕೆ ಬೆಡ್ಯೊ ದನಕರ್‌ಗ ಜನಗಳಿಗೆ
ಊರೊಳಗೆ ಹಬ್ಬಿರುವ ಕೆಲ ಕಾಯ್ಲೆಗಳಿಗೆ ।
ನೇಜಿ ನೆಡಿಕನ ಅಂದ್ ಹಾಡ್‌ತಿದ್ದಾ ಹಾಡ್
ಯಾರಿಗದ್ ನೆನ್ಪುಟ್ಟು ಹೇಳಿ ಇಂದ್ ।
ಊರೊಳಗೆ ನಡಿವಂತ ಹಬ್ಬಗಳ ಕ್ರಮನೆಲ್ಲ
ಕ್ರಮದಾಂಗೆ ಮಾಡವದ್ ಯಾರಿಲ್ಲೆ ಇಂದ್ ।
ನಾಡೊಳಗೆ ನಡಿವಂತ ಹಳ್ಳಿಮೊದುವೆಗ ಎಲ್ಲ
ಎಲ್ಲಿ ನಡ್ದದೆ ಸಂಪ್ರದಾಯದಾಂಗೆ ।
ಗೂಡೆ ಪ್ರಾಯಕೆ ಬಂದ್ ಮೈನೆರ್ದರಾ ಮೊದುವೆ
ಇಲ್ಲೆ ಅವು ಇರುವೊ ಅದ್‌ಗೊತ್ತ ಇಲ್ಲದಾಂಗ ।
ಅಂದ್ ಕರ್ ಬುಡಿಕಿರುವೊ ಎಷ್ಟೊ ಹಸ್ ಮನೆ ಮನೆಲಿ
ಒಂದಲ್ಲ ಹಟ್ಟಿಲವು ಎಂಟೊಹತ್ತ ।
ಹಂದಿ ಶೋಗಿನ ಕೂಡ ಇರುತ್ತಿದ್ದೊ ಬೇಕಸ್ಟ್
ಇಂದ್ ಅದ್ ಏನಿಲ್ಲೆ ಏನ್ ಆತ್ ।
ಹಳ್ಳಿ ಜಂಬರಕ್ಕೆಲ್ಲ ಚಿಂತೆ ಮಾಡದೆ ಜನಂಗ
ಸಂತೆಂದಳೆ ತೆಕೊಂಡೋವೋ ಬೇಕಾದಸ್ಟ್ ।
ತನ್ನ ಜಾಗೆಲಿ ದುಡಿಕೆ ಜನಕಿಂದ್ ಮನ್ಸ್‌ಲ್ಲೆ
ಫಸಲ್ ಬರಕರೆ ಕಷ್ಟ ಪಡೊಕು ಅಸ್ಟ್ ।
ಅಂದ್‌ನಾ ಜನಪದ, ಜಾನಪದ ನೆನ್ಪಿರೆ
ಮುಂದೆ ಅದು ಅಳಿದುಂತ ಬೇಜಾರಾದೆ ।
ನಾಳೆನಾ ಪೀಳಿಗೆಗೆ ಎಲ್ಲ ಅದ್ ಮರ್ತೋಗಿ
ಪೀಳಿಗೆನ ಕಥೆ ಗೊತ್ಲೆ ಏನ್ ಆದೆ ॥

ರಚನೆ : ಹೊದ್ದೆಟ್ಟಿ ಭವಾನಿಶಂಕರ್
ಬೆಂಗಳೂರು

# ಗೌಡ ಸಂಸ್ಕೃತಿ : ಶವದ ಚಟ್ಟ ಕಟ್ಟುವ ಕ್ರಮ (ಕೊಡಗು ಅರೆಭಾಷೆ ಗೌಡರಿಗೆ)

(ಹಿಂದಿನ ಸಂಚಿಕೆಯಿಂದ......)

ಎರಡು ಬಿದಿರನ್ನು ಉದ್ದಕ್ಕೆ ಇಟ್ಟು, ಶವ ಇಡಲು ಬೇಕಾದಷ್ಟು ಅಗಲಕ್ಕೆ ಸಮನಾಂತರವಾಗಿ ಬಿದಿರಿನ ಎರಡು ತುದಿಗೆ ಅಡ್ಡ ಪಟ್ಟಿ ಕಟ್ಟಿ ಉಳಿದ ತಟ್ಟೆಗಳನ್ನು ಕತ್ತರಿ ಆಕಾರದಲ್ಲಿ ಕಟ್ಟುವರು. ಈ ರೀತಿ ಅಡ್ಡ ತಟ್ಟೆಗಳನ್ನು ಐದರಿಂದ ಏಳು ತಟ್ಟೆಗಳನ್ನು ಕಟ್ಟುವರು. ಎರಡು ಬಿದಿರುಗಳನ್ನು ತೋರಣ ಕಟ್ಟುವುದಕ್ಕೆ ಬಿಲ್ಲಿನಾಕೃತಿಯಲ್ಲಿ ಬಗ್ಗಿಸಿ ಎರಡು ಬಿದಿರಿನ ತಟ್ಟೆಗಳನ್ನು ಕಟ್ಟಿ ಚಟ್ಟ ಶೃಂಗರಿಸುವುದಕ್ಕೆ ಅನುಕೂಲ ಮಾಡಿಕೊಳ್ಳುವರು. ನಂತರ ಶವದ ಎಡದ ಕಾಲಿನ ಭಾಗದಲ್ಲಿ ಒಂದು ಸೇರು ಭತ್ತವನ್ನು ತಲೆಯ ಬಲ ಭಾಗದಲ್ಲಿ ಒಂದು ಸೇರು ಅಕ್ಕಿಯನ್ನು ಕಟ್ಟಿ ಬದಿಗೆ ನಿಲ್ಲುವರು. ಒಂದು ತೆಂಗಿನಕಾಯಿ ಒಡೆದು ಒಂದು ಗಡಿಯಲ್ಲಿ ದೀಪದ ಎಣ್ಣೆ ಹಾಕಿ ಗಂಧದ ಮರದ ಕಟ್ಟಿಗೆ ಮಾಡಿ ಅದಕ್ಕೆ ಬಟ್ಟೆ ಸುತ್ತಿ ಎಣ್ಣೆ ಹಾಕಿ ತಲೆ ಭಾಗದಲ್ಲಿ ಬೆಳಕು ಹಚ್ಚಿ ಇಡುವರು. ಇದೇ ರೀತಿ ಮಾಡಿ ಇನ್ನೊಂದು ಗಡಿಯನ್ನು ಕಾಲಿನ ಬದಿಯಲ್ಲಿ ಇಡುವರು.

ಶವದ ಬಾಯಿಗೆ ಕುಂಟಿಗೆ ನಿಲ್ಲುವವನು ಮನೆಯ ಮೆಟ್ಟುಕಲ್ಲಿನಲ್ಲಿ ಎಲೆ ಅಡಿಕೆ ಜಜ್ಜಿ ಇಡುವನು. ಆ ಮೇಲೆ ಕುಟುಂಬದವರೆಲ್ಲರೂ ಮೇಲ್ಮೈ ವಸ್ತ್ರವನ್ನು ಬಿಚ್ಚಿ ಸಾಲಾಗಿ ನಿಂತು ಹಿರಿಯರು ಮುಂದೆ ನಂತರ ಕಿರಿಯರು ಶವದ ಸುತ್ತು ಮೂರು ಬಾರಿ ಅಪ್ರದಕ್ಷಿಣೆ ಬರುವರು. ಶವದ ಸುತ್ತು ಬರುವಾಗ ಎಲ್ಲರೂ "ನಾರಾಯಣ-ನಾರಾಯಣ" ಎಂದು ದೇವರನಾಮ ಪಠಿಸುತ್ತಾ, ಸತ್ತವರಿಗೆ ಹಿರಿಯರು ಎಡಗೈಯಿಂದ ಶವದ ತಲೆಯನ್ನು, ಕಿರಿಯರು ಎಡಗೈಯಿಂದ ಕಾಲು ಮುಟ್ಟಿ ಶರಣು ಮಾಡುವರು. ಮನೆಯವರೆಲ್ಲರೂ ಶವದ ಬಾಯಿಗೆ ತುಳಸಿ ಕೊಡಿಯಿಂದ ನೀರು ಕೊಟ್ಟ ನಂತರ ಮನೆಯವರು, ಊರಿನವರು, ನೆಂಟರಿಷ್ಟರು ಸೇರಿ ಮನೆಯ ಮೆಟ್ಟುಕಲ್ಲಿಗೆ ಹೊಂದಿಸಿ ಇಟ್ಟ ಚಟ್ಟಕ್ಕೆ ಶವವನ್ನು ಎತ್ತಿ ಕಾಲು ಮುಂಭಾಗವಾಗಿಯೂ, ತಲೆಯು ಹಿಂಭಾಗವಾಗಿಯೂ ಒಲೆ ಚಾಪೆ ಇದ್ದಂತೆ ಸೇರಿಸಿ ತಂದಿಡುವರು. ಅಲ್ಲಿ ಶವದ ಮೇಲೆ ಹೊದಿಸಿದ್ದ ಉದ್ದನೆಯ ಬಟ್ಟೆ ನೋಡಿ ಅದನ್ನು ಕುಂಟಿಗೆ ನಿಂತವನ ಹಸ್ತ ಕೊಟ್ಟು, ಒಂದು ಇಂಚಿನ ಅಗಲ ಸುತ್ತು ನಾಲ್ಕು ಭಾಗ ಹರಿಯುವಂತೆ ಹೇಳಿ, ಹರಿದ ಅದನ್ನು ನಾಲ್ಕು ಭಾಗಮಾಡಿ ಒಂದು ತುಂಡಿನಿಂದ ಕಾಲಿನ ಎರಡು ಹೆಬ್ಬೆರಳನ್ನು ಜೋಡಿಸಿ ಕಟ್ಟಿ, ಮತ್ತೊಂದು ತುಂಡು ಬಟ್ಟೆಯಿಂದ ಕೈ ಬೆರಳುಗಳನ್ನು ಕಟ್ಟುವರು. ಇನ್ನೊಂದು ತುಂಡು ಬಟ್ಟೆಯನ್ನು ಕುಂಟಿಗೆ ನಿಂತವನು ಇಟ್ಟುಕೊಳ್ಳುವನು. ಊರಿನವರು ಬಟ್ಟೆ ತೆಗೆದು ಕೊಳ್ಳುವವನಿಗೆ ಊರು ಕುಂಟಿಗೆ ಎಂದು ಹೇಳುವರು. ಆ ಬಟ್ಟೆಯ ತುಂಡನ್ನು ತೆಗೆದುಕೊಂಡ ಮನೆ ಕುಂಟಿಗೆಯ ಉತ್ತರ ಕ್ರಿಯೆ ಕಳೆಯುವವರೆಗೆ ತನ್ನ ಬಳಿಯೇ ಇಟ್ಟುಕೊಳ್ಳತಕ್ಕದ್ದು.

ಶವವನ್ನು ಅಲುಗಾಡದಂತೆ ಚಟ್ಟಕ್ಕೆ ಕಟ್ಟಿ, ಕಾಲು ಕಡೆಯಿಂದ ಊರಿನವರು ತಲೆ ಕಡೆಯಿಂದ ಮನೆಯವರು ಚಟ್ಟವನ್ನು ಎತ್ತಿ "ನಾರಾಯಣ - ನಾರಾಯಣ" ಎಂದು ಹೇಳುತ್ತಾ ಹಿಂದಕ್ಕೂ ಮುಂದಕ್ಕೂ ಮೂರು ಬಾರಿ ಜೂಗಿಸಿ ಹೆಗಲ ಮೇಲೆ ಇಟ್ಟುಕೊಂಡು ಸ್ಮಶಾನದ ಕಡೆಗೆ ಸಾಗುವರು. ಅರ್ಧ ದಾರಿ ಸಾಗಿದ ನಂತರ ಮನೆಯಿಂದ ತಂದ ಐದು ವೀಳ್ಯದೆಲೆ, ಒಂದು ಅಡಿಕೆ ಮತ್ತು ಅನ್ನದ ಬುತ್ತಿಯನ್ನು ಯಾರಾದರೊಬ್ಬರು ಹೋಗುವ ಹಾದಿಯ ಎಡಭಾಗದಲ್ಲಿ ಯಾವುದಾದರೊಂದು ಮರದ ಬುಡದಲ್ಲಿ ಇಡುವರು.

"ದಾರಿ ಬುತ್ತಿ ಮತ್ತು ಎಲೆ ಅಡಿಕೆ ಇಡುವುದು ಯಮಧರ್ಮ ರಾಯನ ಆಜ್ಞೆಯಂತೆ ಯಮದೂತರು ಪ್ರಾಣವನ್ನು ಕೊಂಡೊಯ್ಯುವಾಗ ಆ ಮಾರ್ಗದಲ್ಲಿ ಉಣಲು ಬುತ್ತಿ ಇರಲೆಂದೂ, ಊಟವಾದ ನಂತರ ಜಗಿಯಲು ಎಲೆ ಅಡಿಕೆ ಇಡುವುದೆಂದೂ ಹಿರಿಯರು ಹೇಳುತ್ತಾರೆ. ಅಲ್ಲದೆ ಐದು ವೀಳ್ಯದೆಲೆ ಪಂಚ ಪಾಂಡವರೆಂದೂ ಒಂದು ಅಡಿಕೆ ದ್ರೌಪದಿ ಸಂಕೇತವೆಂದೂ". ಹೇಳುತ್ತಾರೆ.

ದಾರಿ ಬುತ್ತಿಯನ್ನು ಇಟ್ಟ ನಂತರ ತಲೆಯ ಕಡೆ ಹೊತ್ತವರು ಕಾಲು ಕಡೆಗೂ, ಕಾಲು ಕಡೆ ಹೊತ್ತವರು ತಲೆಯ ಕಡೆ ಹೊತ್ತು ಸಾಗಿಸುವರು. ಶವವನ್ನು ವಾದ್ಯಗೋಷ್ಠಿಗಳಿಂದ ಸಾಗಿಸಲಾಗುವುದು. ಕೆಲವು ಕಡೆ ಅಕ್ಕಿ ಮತ್ತು ಚಿಲ್ಲರೆ ನಾಣ್ಯಗಳ ಮಿಶ್ರಣವನ್ನು ಮಾಡಿ ಶವದ ಮೇಲೆ ಎರಚುತ್ತಾ ಹೋಗುವರು. ಒಂದು ಚಿಕ್ಕ ಮಣ್ಣಿನ ಮಡಕೆಯಲ್ಲಿ ನೀರನ್ನು ಇನ್ನೊಂದು ತಟ್ಟೆಯಲ್ಲಿ ಬೆಂಕಿಯನ್ನು ತೆಗೆದುಕೊಂಡು ಜೊತೆಯಲ್ಲಿ ಗಂಧದ ಮರದ ಸಣ್ಣ ಸಿಗಳು (ಚೊಕೆ) ಕೊಬ್ಬರಿ ತೆಂಗಿನಕಾಯಿ, ಎಣ್ಣೆ ಮತ್ತು ತುಪ್ಪ ಮುಂತಾದವುಗಳನ್ನು ಬೆಂಕಿ ಉರಿಸುವುದಕ್ಕೆ ಹಾಕಲು ತೆಗೆದುಕೊಂಡು ಹೋಗುತ್ತಾರೆ. ಕಾಟದ ಬಳಿ ತಲುಪಿದ ನಂತರ ಕಾಟದ ಮೇಲಿಟ್ಟ ಕಲ್ಲು, ಚೂರಿ ಮುಳ್ಳನ್ನು ದೂರ ಎಸೆದು ಶವವನ್ನು ಕಾಟಕ್ಕೆ ಮೂರು ಸುತ್ತು ಅಪ್ರದಕ್ಷಿಣೆ ಮಾಡಿ ಚಟ್ಟವನ್ನು ಕೆಳಗಿಟ್ಟು ಶವವನ್ನು ಮಾತ್ರ ಮೇಲೆತ್ತಿ ಉತ್ತರ ದಕ್ಷಿಣವಾಗಿ ಕಾಟದ ಮೇಲಿರಿಸುವರು. ಆಗ ಎಲ್ಲರೂ ನಾರಾಯಣ ನಾರಾಯಣ" ಎಂದುಸ್ತುತಿಸುವರು. ನಂತರ ಶವದ ಚಟ್ಟ ಮತ್ತು ಚಾಪೆಯನ್ನು ಕಡಿದು ಎಸೆಯಬೇಕು. ಶವಕ್ಕೆ ಹೊದಿಸಿದ ಮೂರು ಅಥವಾ ಐದು ಬಟ್ಟೆಗಳನ್ನು ಬಿಟ್ಟು, ಉಳಿದಲ್ಲಿ ಊರಿನ ಕುಳುವಾಡಿಗೆ ಹಾಗೂ ವಾದ್ಯದವರಿಗೂ ಹಂಚಬೇಕು. ಕಂಚಿನ ಬಟ್ಟಲಿನಲ್ಲಿ ಕೂಡಿದ ಹಣವನ್ನು ದಾನ ಮಾಡುವರು. ಶವದ ಮೈಮೇಲೆ ನೂಲು, ತಾಯಿತ, ಬೆರಳುಗಳಿಗೆ ಕಟ್ಟಿದ ಬಟ್ಟೆ ಎಲ್ಲವನ್ನು ಬಿಚ್ಚುವರು. (ಕೆಲವು ಕಡೆಗಳಲ್ಲಿ ವೆಂಕಟರಮಣದೇವರ ಹೆಸರಿನಲ್ಲಿ ಕಷ್ಟಕ್ಕಾಗಿ ಹೇಳಿದ ಹರಿಕೆ ಎಂದು ಕಾಲಿನಲ್ಲಿ ಬೆಳ್ಳಿ ಬೇಡಿ (ಬಳೆ) ಇರುವುದು. ಅದನ್ನು ಸಹ ತೆಗೆದು ಶುದ್ಧ ಮಾಡಿ ಹರಿಸೇವೆ ಸಮಯದಲ್ಲಿ ಮುಡಿಪಿಗೆ ಹಾಕತಕ್ಕದ್ದು) ತದನಂತರ ಶವದ ಬಾಯಿಗೆ ನೀರು ಕೊಟ್ಟು ಮೂರು ಸುತ್ತು ಬರುವರು.

ಸತ್ತವರು ಹೆಣ್ಣಾದರೆ ಅವಳ ಮಾಂಗಲ್ಯ ಮತ್ತು ಎಲ್ಲಾ ಆಭರಣಗಳನ್ನು ಬಿಚ್ಚಿ ತೆಗೆಯುವರು. ಗಂಡಸು ಸತ್ತರೆ ಹೆಂಡತಿಯ ಮೂಗುತಿ, ಓಲೆ, ಮಾಂಗಲ್ಯ ಮೊದಲಾದವುಗಳನ್ನು ತೆಗೆದು ಕಂಚಿನ

ಬಟ್ಟಲಿಗೆ ಹಾಕುವರು. ಮಾಂಗಲ್ಯದ ತುದಿಯಿಂದ ಸ್ವಲ್ಪ ಚಿನ್ನ ತೆಗೆದು ಅದನ್ನು ತುಳಸಿ ನೀರು ಸಮೇತ ಮಾಂಗಲ್ಯದಿಂದ ಶವದ ಬಾಯಿಗೆ ಅವಳ ಕೈಯಿಂದಲೇ ನೀರು ಕೊಂಡಿಸಿ "ನಾನು ಮಾಡಿದ ಏನೊಂದು ತಪ್ಪುಗಳಿದ್ದರೂ ಮನ್ನಿಸಿ ಸ್ವರ್ಗಕ್ಕೆ ಹೋಗಿ" ಎಂದು ಹೇಳಿಸುವುದು. ಹೆಂಡತಿಯ ಕೈಯಲ್ಲಿದ್ದ ಕಂಕಣ (ಬಳೆ)ವನ್ನು ಶವದ ಎದೆಯ ಮೇಲಿಟ್ಟು ಅವಳ ತವರಿನ ಕಡೆಯುವವರು ಒಡೆಯುವುದು. ಒಡೆಯುವಾಗ ಗಾಜಿನ ಚೂರು ಶವದ ಮೇಲೆ ಬೀಳದಂತೆ ಬೇರೆಯೇ ವಸ್ತ್ರ ಹಿಡಿದು ಎಚ್ಚರ ವಹಿಸುವುದು. (ಬಳೆ ಒಡೆಯುವುದು ಹಿರಿಯರಿಂದ ನಡೆದು ಬಂತೆಂಬುದರ ಬಗ್ಗೆ ಅಂದಿನಿಂದ ಇಂದಿನ ತನಕ ಸಂಕೋಚವಿದೆ. ಇಂದಿನ ಆಧುನಿಕ ಮತ್ತು ಮುಂದುವರಿದ ನಾಗರೀಕತೆಯ ಸಮಾಜದಲ್ಲಿ ಇದೊಂದು ಅಮಾನುಷ ಕೃತ್ಯ. ಬಳೆಯನ್ನು ಹೆಣ್ಣು ಮಗುವಿನಿಂದಲೇ ಧರಿಸುವಳು. ಅದು ವಿವಾಹದ ನಂತರ ಪತಿಯಿಂದ ಬಂದ ಉಡುಗೊರೆಯಲ್ಲ. ಮಾಂಗಲ್ಯ, ಮೂಗಿನ ನತ್ತು ಕಾಲುಂಗುರ ಮುಂತಾದವುಗಳು ವಿವಾಹ ಕಾಲದಲ್ಲಿ ಗಂಡನಿಂದ ಬಂದ ಉಡುಗೊರೆಗಳು. ಆದುದರಿಂದ ಆ ನಿಯಮವನ್ನು ಮನ್ನಾಪಡಿಸಿ ಸ್ತ್ರೀಯ ಇಚ್ಛಾನುಸಾರ ಇರುವಂತೆ ನಮ್ಮ ಸಮಾಜ ಸುಧಾರಕರಲ್ಲಿ ವಿಷಯ ಸಂಗ್ರಹಿಸಿದ ನಾವುಗಳು ನಿಮ್ಮಲ್ಲಿ ನಮ್ಮ ಮಾತೆಯರ ಪರವಾಗಿ ವಿನಂತಿಸಿಕೊಳ್ಳುತ್ತೇವೆ.)

ಮೇಲಿನ ಕ್ರಮ ಮುಗಿದ ನಂತರ ಗಂಧದ ಚೂರುಗಳನ್ನು ಎಲ್ಲರೂ ಎಡಗೈಯಿಂದ ಶವದ ಮೇಲಿಟ್ಟು ಮೇಲ್ಕಾಟವನ್ನು ಒಟ್ಟುವರು. ಈ ಮೊದಲೇ ಒಣ ಬಿದಿರಿನ ಸೂಟೆ (ಹೊಂತಿಗೆ) ಅಥವಾ ಸೌದೆಯ ಸೀಳುಗಳನ್ನು ಸೂಟೆ ಮಾಡಿಟ್ಟು ಕೊಂಡಿರುವರು. ಮನೆಯಿಂದ ಚಟ್ಟಿಯಲ್ಲಿ ತಂದ ಬೆಂಕಿಯಲ್ಲಿ ಎರಡು ಸೂಟೆಗಳಿಗೂ ಬೆಂಕಿ ಹಿಡಿಸಿ ಒಂದನ್ನು ಮನೆಯ ಕುಂಟಿಗೆದಾರನು ಇನ್ನೊಂದನ್ನು ಊರು ಕುಂಟಿಗೆದಾರನು ಹಿಡಿದು ಇಬ್ಬರು ಕಾಟಕ್ಕೆ ಮೂರು ಸುತ್ತು ಅಪ್ರದಕ್ಷಿಣೆ ಬರುವರು. ನಂತರ ಮನೆಯ ಕುಂಟಿಗೆಯವನು ತಲೆ ಕಡೆಯಿಂದಲೂ ಊರು ಕುಂಟಿಗೆಯವನು ಕಾಲು ಕಡೆಯಿಂದಲೂ ಕಾಟಕ್ಕೆ ಬೆಂಕಿ ಹಚ್ಚುವರು. ತದನಂತರ ಮನೆಯಿಂದ ತಂದ ಕೊಬ್ಬರಿ, ಎಣ್ಣೆ, ತುಪ್ಪ ಮುಂತಾದವುಗಳನ್ನು ಬೆಂಕಿ ಉರಿಸಲು ಉಪಯೋಗಿಸುವರು. ಬೆಂಕಿ ಸರಿಯಾಗಿ ಉರಿದು ಎರಡು ಭಾಗಗಳಿಂದ ನಡುಭಾಗಕ್ಕೆ ಸೇರುವುದೆಂದು ತಿಳಿದಾಗ ಸೌದೆ ಕಡಿಯಲು ಉಪಯೋಗಿಸಿದ ಕತ್ತಿ, ಕೊಡಲಿಗಳನ್ನು ಮನೆಯ ಕುಂಟಿಗೆಯವನು ಒಂದು ಬದಿಯಿಂದ ಊರು ಕುಂಟಿಗೆಯವನು ಇನ್ನೊಂದು ಬದಿಯಿಂದ ಅಡ್ಡಕ್ಕೆ ತಿರುಗಿ ಎಡ ಕೈಯಿಂದ ಕಾಟಕ್ಕೆ ಅಡ್ಡವಾಗಿ ಮೂರು ಬಾರಿ ಎಸೆಯುವನು. ನಂತರ ಕುಂಟಿಗೆ ನಿಂತವನು ನೀರಿನ ಮಡಕೆಯನ್ನು ಚಿಕ್ಕ ತೂತು ಮಾಡಿ ಮೂರು ಸುತ್ತು ಪ್ರದಕ್ಷಿಣೆ ಬಂದು ಮಡಿಕೆ ಒಡೆದು ಎಸೆಯುವನು. ಆ ಮೇಲೆ ಅಲ್ಲಿಯೇ ಎಲ್ಲರೂ ಕುಳಿತು ಉತ್ತರ ಕ್ರಿಯಾದಿಗಳ ಬಗ್ಗೆ ಮಾತುಕತೆ ನಡೆಸಿ ಎಲ್ಲರೂ ಅವರವರ ಮನೆಗಳಿಗೆ ಹೋಗುವರು.

ಶವ ಸಂಸ್ಕಾರದ ಮನೆಯವರು, ಊರಿನವರು, ನೆಂಟರಿಷ್ಟರು ಎಲ್ಲರೂ ತಣ್ಣೀರಿನಲ್ಲಿ ಸ್ನಾನ ಮಾಡತಕ್ಕದ್ದು. ಅನಂತರ ಕುಂಟಿಗೆ ನಿಂತವನು ಹೊರಗೆ ತಿರುಗಾಡುವುದು, ಮದ್ಯ ಮಾಂಸ ಸೇವಿಸುವುದು, ಹಾಲು, ತುಪ್ಪ ಇತ್ಯಾದಿಗಳನ್ನು ಕರ್ಮಕ್ರಿಯೆ ಮುಗಿಯುವವರೆಗ ಅಂದರೆ ಹನ್ನೊಂದು ದಿವಸಗಳ ತನಕ ಉಪಯೋಗಿಸಬಾರದು. ಒಪ್ಪೊತ್ತಿನ ಊಟಕ್ಕಾಗಿ ರಾಗಿ, ಗೋಧಿ, ಅವಲಕ್ಕಿ, ಹಣ್ಣು ಹಂಪಲು ಉಪಯೋಗಿಸುವುದು. ಪ್ರತಿದಿನ ರಾತ್ರಿ ಹೊತ್ತು ಅಂದರೆ ತಿಥಿಕರ್ಮಾಂತರ ಮುಗಿಯುವ ತನಕ ಒಂದು ಚೆಂಬು ನೀರು ಮೃತನನ್ನು ಮಲಗಿಸಿದ ಸ್ಥಳದಲ್ಲಿ ಇಡತಕ್ಕದ್ದು. ಕುಂಟಿಗೆ ನಿಂತವನು ಬಿಳಿವಸ್ತ್ರ ಉಡುವುದು. ಹಾಗೂ ಮೈಗೆ ಶರಟು ಹಾಕಬಾರದು. ಹೆಗಲಿಗೆ ಬಿಳಿಬಟ್ಟೆ ಮಾತ್ರ ಹಾಕಬಹುದು. ಸೌದೆ ಕಡಿದ ಕತ್ತಿ, ಕೊಡಲಿ, ಮಚ್ಚು ಮತ್ತು ಗುಂಡಿ ತೆಗೆದ ಹಾರೆ ಗುದ್ದಲಿ ಇತ್ಯಾದಿಗಳನ್ನು ಮನೆಯಿಂದ ಹೊರಗಡೆಯೇ ಇಡತಕ್ಕದ್ದು. ಶವವನ್ನು ಸ್ನಾನ ಮಾಡಿಸಲು ಉಪಯೋಗಿಸಿದ ಹಂಡೆ ಪಾತ್ರೆಗಳನ್ನು ಬೋರಲು ಹಾಕಿ ಹೊರಗಡೆಯೇ ಶುದ್ಧ ನಡೆಯುವ ತನಕ ಯಾವ ವಸ್ತುವನ್ನು ಒಳಗೆ ತೆಗೆದುಕೊಳ್ಳುವಂತಿಲ್ಲ.

(ಮುಂದುವರಿಯುತ್ತದೆ......)

ಕೃಪೆ : ಗೌಡ ಸಂಸ್ಕೃತಿ

---

## ನನ್ನವಳ ಕಣ್ಮರೆ

ತಾಯಿಯ ನೆಚ್ಚಿನ ಮಗಳು
ತಂದೆಯ ಮೆಚ್ಚಿದ ಮಗಳು
ಎನ್ನಯ ನೆಚ್ಚಿನ ಮನದವಳು
ಪ್ರೇಮವೋ ಕಾಮವೋ ನಾನರಿಯೆ
ಮಾಯಯ ಬರಡು ತಾಳಕೆ
ಜೀವನವೇ ಮೋಹ ಎಂದರಿತೆ
ನೋವು ನಲಿವನು ಕಂಡವಳು
ಭಾವಭಂಗಿಯಲಿ ನಿಂದವಳು
ಅಕ್ಕರೆಯ ಸಕ್ಕರೆಯಲಿ ಮಿಂದವಳು
ಜೊತೆಯಲ್ಲಿ ಬೆಳಗಿತು ಭಾವ
ಚಿತೆಯಲ್ಲಿ ಕರಗಿತು ದೇಹ
ವ್ಯಥೆಯೆಂಬ ಕಥೆಯಾಯಿತೇ ಜೀವ
ಮಕ್ಕಳೆರಡೆಂಬ ಪರಿವಿಲ್ಲವಾಯಿತೇ
ಇಕ್ಕುವ ಕೈ ಬರಡಾಯಿತೇ
ನಕ್ಕು ನಲಿವಾಸೆಗೆ ದಿಕ್ಕಿಲದಾಯಿತೇ
ಹಿಂದೆಂದೂ ಕಾಣದ ಜಗವ
ಇಂದು ಕಂಡೆನು ನಿನ್ನ ಮನದಾಳದಲಿ
ಮುಂದೆದೂ ಕಾಣೆನು ನಿನ್ನ ಒಲವನು
ನಿನಗೇನಾಯಿತು "ಶಿವನೇ" ಇಂದು
ನನ್ನ ಬಾಳಿನ ಬುಡವ ಕಿತ್ತೊಗೆದೆಯಾ
ಬುಡವಿಲ್ಲದ ಬಾಳಿಗೆ ಚಿಗುರಾಸೇಕೆ?
ನಾ ನಿನ್ನ ನಿಂದಿಸಲಾರೆ ದೀರ್ಘ ಸುಮಂಗಲಿ
ಜೀವನದ ಸಮರದಲಿ ಬೆಂದವಳ
ದೀರ್ಘ ಶಾಂತಿ ನಿದ್ರೆಯೊಳಿರಿಸಿದೆ

ಚೇಂದ್ರಿಮಾಡ. ಗ. ಮುತ್ತಪ್ಪ, ಕುಶಾಲನಗರ.

# ಶುಭ ವಿವಾಹ

1. ಕಾಂತೂರು ಗ್ರಾಮದ ಕಲ್ಲುಮುಟ್ಲು ರಾಮಪ್ಪನವರ ಮಗ ಸೋಮಯ್ಯ ಮತ್ತು ಕಟ್ಟೆಮಾಡು ಗ್ರಾಮದ ಗುಡ್ಡೇರ ಭೀಮಯ್ಯನವರ ಮಗಳು ಜಮುನ ಇವರ ವಿವಾಹವು ದಿನಾಂಕ 29-4-1999ರಲ್ಲಿ ನಡೆಯಿತು.

2. ಪಾಲಿಬೆಟ್ಟದ ಕಾಚಿಲಂಡ ಪೂವಯ್ಯನವರ ಮಗ ಅಶೋಕ್ ಹಾಗೂ ಪಾಲೂರು ಗ್ರಾಮದ ಚಿಕ್ಕಂಡ್ರ ತಮ್ಮಣ್ಣನವರ ಮಗಳು ಆಶಾರ ವಿವಾಹವು ದಿನಾಂಕ 25-4-1999ರಲ್ಲಿ ಮಡಿಕೇರಿಯ ಮೇಲಿನ ಗೌಡ ಸಮಾಜದಲ್ಲಿ ನಡೆಯಿತು.

3. ಬಿಳಿಗೆರಿ ಗ್ರಾಮದ ತುಮ್ಮ್‌ತ್ತಜ್ಜಿ ಪೌತಿ ರಾಮಪ್ಪನವರ ಪುತ್ರ ಗಿರೀಶನಿಗೂ ಮತ್ತು ಕಟ್ಟೆಮನೆ ಕಾರ್ಯಪ್ಪನವರ ಪುತ್ರಿ ಗೀತಾಳಿಗೂ 25-4-1999 ರಂದು ಮಡಿಕೇರಿಯ ಕೆಳಗಿನ ಗೌಡ ಸಮಾಜದಲ್ಲಿ ನಡೆಯಿತು.

4. ಮಡಿಕೇರಿಯ ನಿವಾಸಿ ಪಾಣತ್ತಲೆ ಬಿದ್ದಪ್ಪನವರ ಮಗ ಸತೀಶ್ ಕುಮಾರನಿಗೂ ಮತ್ತು ಪಾಲಿಬೆಟ್ಟದ ನಿವಾಸಿ ತೆಕ್ಕಡೆ ಪೊನ್ನಪ್ಪನವರ ಮಗಳು ಹರಿಣಿಗೂ ದಿನಾಂಕ 23-4-1999 ರಂದು ಮಡಿಕೇರಿ ಕೆಳಗಿಸ ಗೌಡ ಸಮಾಜದಲ್ಲಿ ನಡೆಯಿತು.

5. ಮದೆನಾಡಿನ ಪಟ್ಟಡ ಐಯ್ಯಣ್ಣನವರ ಪುತ್ರಿ ವಿಶಾಲಾಕ್ಷಿಗೂ, ಕರ್ಣಂಗೇರಿ ಗ್ರಾಮದ ಮರಿಕೆ ರಘುರವರ ಪುತ್ರ ಹರೀಶ್‌ಗೂ ದಿನಾಂಕ 11-4-1999ರಲ್ಲಿ ಮಡಿಕೇರಿಯ ಮೇಲಿನ ಗೌಡ ಸಮಾಜದಲ್ಲಿ ನಡೆಯಿತು.

6. ಕರವಲೆ ಬಾಡಗ ಗ್ರಾಮದ ಮೂವನ ಶಿವಣ್ಣನವರ ಮಗಳು ಭವಾನಿಗೂ ಗಾಳಿಬೀಡು ಗ್ರಾಮದ ಕೋಳಿಮೂಡಿಯನ ಮುತ್ತಣ್ಣನವರ ಪುತ್ರ ಕುಟ್ಟಪ್ಪನಿಗೂ ದಿನಾಂಕ 2-5-1999ರಲ್ಲಿ ಮಡಿಕೇರಿಯಲ್ಲಿ ನಡೆಯಿತು.

7. ವಿರಾಜಪೇಟೆ ತಾಲ್ಲೂಕು ಆರ್ಜಿ ಗ್ರಾಮದ ಚೆಟ್ಟಿನೆರವನ ದಿವಂಗತ ಪೊನ್ನಪ್ಪನವರ ಪುತ್ರಿ ಆಶಾಳಿಗೂ ಮತ್ತು ಬಿಳಿಗೇರಿ ಗ್ರಾಮದ ಮುಕ್ಕಾಟಿ ಪೂವಯ್ಯನವರ ಪುತ್ರ ಹರೀಶ್‌ಗೂ ದಿನಾಂಗ 12-5-1999ರಂದು ವಧುವಿನ ಸ್ವಗೃಹ ಆರ್ಜಿ ಗ್ರಾಮದಲ್ಲಿ ನಡೆಯಿತು.

8. ನರಿಯಂದಡ ಗ್ರಾಮದ ಪೊಕ್ಕುಳಂಡ್ರ ಸಿದ್ಧಾರ್ಥನವರ ಪುತ್ರಿ ಸುಜಿತಳಿಗೂ, ಹೊಸ್ಕೇರಿ ಗ್ರಾಮದ ಮಂದ್ರೀರ ಗಣಪತಿರವರ ಪುತ್ರ ಜಯಪ್ರಕಾಶ್‌ನಿಗೂ ದಿನಾಂಕ 9-5-1999 ರಂದು ಮಡಿಕೇರಿ ಮೇಲಿನ ಗೌಡ ಸಮಾಜದಲ್ಲಿ ನಡೆಯಿತು.

9. ಸಿದ್ಧಾಪುರದ ಕಾಫಿ ಪ್ಲಾಂಟರರು, ಕೊಡಗು ಗೌಡ ಸಮಾಜದ ಅಧ್ಯಕ್ಷರು ಆದ ಶ್ರೀ ತೋಟಂಬೈಲು ನಾಣಯ್ಯನವರ ಪುತ್ರಿ ಶಿಲ್ಪಳಿಗೂ ಮತ್ತು ಬೆಂಗಳೂರು ನಿವಾಸಿ ಕೆ. ಕೆ. ಗೋವಿಂದಪ್ಪ ಇವರ ಪುತ್ರ ಡಾ. ಅಮರನಾಥ್‌ರಿಗೂ ದಿನಾಂಕ 3-5-1999 ರಂದು ಬೆಂಗಳೂರಿನ ದಯಾನಂದ ಸಾಗರ್ ಮೆಮೋರಿಯಲ್ ಹಾಲ್‌ನಲ್ಲಿ ಭಾರಿ ವಿಜೃಂಭಣೆಯಿಂದ ನಡೆಯಿತು.

10. ಮಕ್ಕಂದೂರು ಗ್ರಾಮದ ಕುಂಬುಗೌಡನ ಉತ್ತಪ್ಪನವರ ಪುತ್ರಿ ಇಂದ್ರಾಳಿಗೂ ಸೋಮವಾರಪೇಟೆ ಹಾನಗಲ್ಲು ದಿವಂಗತ ಮೋಟಯ್ಯನವರ ಪುತ್ರ ಗಣೇಶನಿಗೂ ದಿನಾಂಕ 2-5-1999 ರಂದು ಮಡಿಕೇರಿಯ ಕೆಳಗಿನ ಗೌಡ ಸಮಾಜದಲ್ಲಿ ನಡೆಯಿತು.

### ಹರಿದ ನೋಟುಗಳ ಬದಲಾವಣೆ

ಹರಿದ ನೋಟುಗಳ ಚಲಾವಣೆಗಾಗಿ ಮೈಸೂರು ನಗರದ ನಾಗರೀಕರು ಕೆಲವು ಬ್ಯಾಂಕುಗಳ ಶಾಖೆಗಳಲ್ಲಿ ಹೊಸ ನೋಟುಗಳಿಗೆ ಬದಲಾಯಿಸಿ ಕೊಳ್ಳಬಹುದಾಗಿದೆ.

ಕೆನರಾ ಬ್ಯಾಂಕ್ ಮುಖ್ಯ ಶಾಖೆ, ಮೈಸೂರು
ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಸಯ್ಯಾಜಿರಾವ್ ರಸ್ತೆ ಶಾಖೆ,
ವಿಜಯಾ ಬ್ಯಾಂಕ್ ಗೋಕುಲಂ ಶಾಖೆ
ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಅಶೋಕ ರಸ್ತೆ ಮುಖ್ಯ ಶಾಖೆ
ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಹೆಚ್. ಡಿ. ಕೋಟೆ, ಕೆ. ಆರ್. ನಗರ, ನಂಜನಗೂಡು, ಪಿರಿಯಾ ಪಟ್ಟಣ ಮತ್ತು ಟೀ. ನರಸೀಪುರ ಶಾಖೆಗಳಲ್ಲಿ ನೋಟು ಬದಲಾವಣೆಗೆ ಭಾರತೀಯ ರಿಸರ್ವ್ ಬ್ಯಾಂಕ್ ಆದೇಶಿಸಿದೆ.

### ಲವ್ ಲೆಟರ್ !

ಈ ಕೊಡಗ್ ಸಂಗಾತಿಗೆ ನಾನ್
Aನ್ತ ಹೇಳ್‌ದು
Bಡ್‌ಸಿ ಬರೆಯೊಕ
Cಹಿ ಮಾತ್ ಹೇಳ್‌ರೆ ಆದೊ
Dಯರ್ ಎಂದ್ ಕರೆಯಲಾ
Eಲ್ಲಿಗೆ ಮುಗ್‌ಸಿನೆ
ಬೈಯ್ಯಿಬಡಿ ಬಲಾ ಈ ಹೃದಂಗೆ !

ನಂಗಾರು ಕಿರಣ್ ಕೀರ್ತಿಪ್ರಸಾದ್
ಎಡವಾರೆ ಗ್ರಾಮ

# ಬೇಟೆ

ನಾ ಈಗ ಒಂದ್ ಕತೆ ಹೇಳೀಕೆ ಹೊರಟೊಳೆ. ಕತೆ ಅಂದ್ರೆ ನಾ ಕಟ್ಟಿದ್ದಲ್ಲ. ಕೇಳಿದ್ದ್. ಈ ಕತೆಯ ನಾಯಕ ಈಗ ಬದ್‌ಕಿತ್ಲೆ. ಕತೆ ಹೇಳ್ದವ್ರೂ ಬದ್‌ಕಿತ್ಲೆ. ಆದ್ರೆ ಕತೆಯಾಗಿ ಇಬ್ರೂ ಬದುಕ್ಕೊಳೊ.

ನಮ್ಮದ್ ಮಲೆನಾಡ್. ಕೊಡಗಿಗೆ ಅಂಟಿಕೊಂಡೇ ಇರುವ ಊರ್. ಇಲ್ಲಿ ಒಂದ್ ಗುಡಿ ಉಟ್ಟು. ಅದ್ ಬೈನಾಟಿ ಬೂತದ್ದ್. ವರ್ಷಕೊಮ್ಮೆ ಬೈನಾಟಿ ಬೂತದ ಜಾತ್ರೆ ಆದೆ. ಬೈನಾಟಿ ಬೂತ ಅಂದ್ರೆ ಅರ್ಜುನ್ನ ಪರೀಕ್ಷೆ ಮಾಡಿಕೆ ಹೊರ್ಟ ಈಸರ ದೇವ್ರ್. ಬೈನಾಟಿ ಜಾತ್ರೆಯಂದ್ ಊರವೆಲ್ಲಾ ಸೇರಿ ಕೂಡು ಬೇಟೆ ಆಡುವೆ. ಈಗ ಕಾಡ್ ಇಲ್ಲೆ, ಮೃಗನೂ ಇಲ್ಲೆ. ಆದ್ರೂ ನಾವೆಲ್ಲಾ ಬೆಡಿ ಹಿಡ್ದ್ ಗುಡ್ಡ ಸುತ್ತಿ ಕಾಲಿಕ್ಕೈಲಿ ಬಂದವೆ. ಸಂಪ್ರದಾಯ ಬುಡೀಕೆ ಬತ್ತಲ್ಲಾ?

ಅಂತಾ ಒಂದ್ ದಿನ ಅಪ್ಪಯ್ಯ ಗೌಡ್ರ್ ಬೂತ ಕಲ್ ಗುಡ್ಡೆ ಮೇಲೆ ಹೇಳ್ದ ಕತೆ. "ಈ ಗುಡ್ಡೆಲಿ ನಾ ಮೂವತ್ತಾದ್ರೂ ಹುಲಿಗಳ ಕೊಂದಿರುವೆ. ಉಳ್ದ್ ಚಿಲ್ರೆ ಪಲ್ರೆ ಬುಡಿ. ಆದ್‌ರೆ ಕೂಸಪ್ಪ ಗೌಡ್ರ ಹಾಂಗೆ ನಮ್ಮಿಂದ ಯಾರಿಂದ್ಲೂ ಮಾಡಿಕ್ಕೆ ಆತ್ಲೆ ಬುಡಿ."

"ಯಾವ ಕೂಸಪ್ಪ ಗೌಡ್ರ್?"

ಅಪ್ಪಯ್ಯ ಗೌಡ್ರ್ ನಮ್ಮ ಪ್ರಸ್ನೆಗೆ ನೆಗಾಡ್ದೊ. ಹಕ್ಕಲೆ ಇದ್ದ ದೊಡ್ಡ ಬಂಡೆಗಲ್ಲ ಮೇಲೆ ಕೂದ್ದೊ. ನಾವು ಕೂಡಾ ಸುತ್ತ ಮುತ್ತ ಕುದ್ದೊ. ತಮ್ಮ ಸಡನ್ನ್‌ಡೆತ್ತ್ ಬೆಡೀನ ಬಂಡೆ ಮೇಲೆ ಇಸಿ ಗೌಡ್ರ್ ಚೋಯಂಬುನ ಹಕ್ಕಲೆ ಒಂದ್ ಬೀಡಿ ಕೇಳ್ದೊ. ಬಿಡಿ ಎಳ್ಕಂಡ್ ಅದ್‌ರ ಹೊಗೇನೇ ನೋಡ್‌ತಾ ಹಳೇದ್‌ರ ನೆಂಪು ಮಾಡೀಕ್ಕೆ ಸುರು ಮಾಡ್‌ದೊ.

* * * * *

"ಆಗ ಈ ಸೀಮೆಗೆ ಅಮರ ಸುಳ್ಯಾಂತ ಹೆಸ್‌ರ್. ಕೊಡಗಿನ ಚಿಕ್ಕವೀರ ರಾಜೇಂದ್ರ ದೊರೆಗಳ ಆಡಳ್ತಕ್ಕೆ ಇದ್ ಒಳಪಟ್ಟಿತ್ತ್. ಅವು ಲಿಂಗಾಯಿತ್ರ್. ಈ ಸೀಮೇಲಿ ಲಂಗಾಯಿತ್ರೇ ಇತ್ಲೆ. ಆದ್‌ರೂ ಜನ ಅವ್‌ರ ಪ್ರೀತಿಸ್ತಿದ್ದೊ.

ನಮ್ಮ ಕೋಲ್ಯಾರ್ ಕೂಸಪ್ಪ ರಾಜ್‌ರ ಸೈನ್ಯಲಿ ಇತ್ತ್. ಬರ್ಜರಿ ಆಳಂಗದ ಸಿಪಾಯಿ. ಆರೂವರೆ ಅಡಿಯಸ್ಟ್ ಎತ್ತ್‌ರ ಇತ್ತ್. ಅಗಲ ಮುಖ, ದೊಡ್ಡ ಮೂಗು, ಬರ್ಜರಿ ಹುರಿಮೀಸೆ ಮತ್ತೆ ಹೆದ್ರಿಕೆ ಹುಟ್ಟುಸ್‌ವ ಕೆಂಪು ಕಣ್ಣುಗ! ಅವ್‌ರ ಬಲವಾದ ತೋಳುಗ, ದೃಢವಾದ ಕಾಲ್‌ಗ, ಮಾಸಲವಾದ ಗಟ್ಟಿಸರೀರ ಅವ್‌ರ ಒಬ್ಬ ನಾಯಕನಾಗಿ ಮಾಡಿತ್ತ್. ಅವ್‌ರ ಸೇನಾ ನಾಯಕ ಕುಳ್ಳು ಕುಂಡೋಚ್ಚ. ಕೂಸಪ್ಪ ಗೌಡ್ರೀಗೆ ಏನಾದರೂ ಹೇಳೋಕೂಂತಾದ್‌ರೆ ಅವ್ನಿಗೇ ತುಂಬಾ ಕಸಿವಿಸಿ ಆತಿತ್ತ್. ಈ ಕೂಸಪ್ಪ ಎಂತಾ ವ್ಯಕ್ತಿಯೆಂದ್‌ರೆ, ಮೊದುವೆಗೆ ಹೋದ್‌ರೆ ಪಂತ ಹಾಕಿ ನಾಲ್‌ಕ್ ಕವಂಗ ಪಾಯ್ಸ ಕುಡೀತೀತ್ ಗಡ. ಹಲ್ಲಿಂದ ಕಚ್ಚಿ ಅಕ್ಕಿ ಮುಡಿ ಎತ್ತ್‌ತೀತ್ ಗಡ !

ಒಂದ್ ಸರ್ತಿ ರಜಾ ತಗಂಡ್ ಊರಿಗೆ ಬಂದ ಕೂಸಪ್ಪ ಗೌಡ್‌ರೀಗೆ ಬೇಟೆ ಆಡ್‌ವ ಮನಸ್ಸಾತ್. ಬಾಳ್ ಕತ್ತಿ ಸೊಂಟಕ್ಕೆ ಸಿಗ್ಸಿ, ಕೇಪಿನ ಬೆಡಿಗೆ ಮದ್ದ್ ಜಡ್‌ದ್ ಅವು ಉದದ್ದ್ ಇದೇ ಬೂತಕಲ್ ಗುಡ್ಡೆಗೆ. ಹೆದ್ರಿಕೆ ಅಂತ ಹೇಳ್‌ರೆ ಏನ್‌ತ ಗೊತ್ತೆ ಇರ್‌ದ ಅವು ಒಬ್ಬುರೇ ಬೇಟೆಗೆ ಬಂದಿದ್ದೊ ಗಡ.

ಆಗ ಈ ಗುಡ್ಡೆ ಹೀಂಗೆ ಇತ್ಲೆ. ಗಿಡ ಮರಗಳಿಂದ ತುಂಬಿ ಎಲ್ಲೆಲ್ಲೂ ಹಸ್‌ರ್. ಒಳಗಡೆ ಸಂಕಪಾಲ, ಕಾಟಿ, ಹಂದಿ, ಹುಲಿಗೊ ತುಂಬಿಕೊಂಡಿತ್ತ್‌ಗಡ. ಆದ್‌ರೆ ಕೂಸಪ್ಪ ಗೌಡ್ರ್ ಸ್ವಲ್ಪನೂ ಹೆದ್ರಿಕೆ ಇಲ್ಲದೆ ಬುರ್ತ್ತಿದ್ದೊಗಡ. ಮರದ ಮೇಲಿದ್ದ ಒಂದು ಮುಚ್ಚ ಇವರ ನೋಡಿ 'ಕೀಚ್, ಕೀಚ್' ಅಂತೇಳಿ ಮತ್ತೊಂದ್ ಮರಕ್ಕೆ ಹಾರಿತ್‌ಗಡ. ಮುಚ್ಚನ ಮಾಸ ಬಾರೀ ರುಚಿ. ಕೂಸಪ್ಪ ಗೌಡ್ರ್ ಬೆಡಿ ಎತ್ತಿದೊ. "ಬೇಡ ಇದ್ಕಿಂತ ಒಳ್ಳೇದ್ ಸಿಕ್ಕುದು. ಹಾಳಾದ್ದ್ ಮತ್ತೆ ಯಾರ್ ಮೊದ್ದ್ ಜಡಿಯುದು" ಎಂದು ಕೆಳಗಿಳಿಸಿದೊ. ಮುಚ್ಚ ಮತ್ತೊಂದ್ ಮರಕ್ಕೆ ಹಾರಿ ಕಾಣೆಯಾತ್.

ಆಗ ಆ ಮರದ ಬುಡದತ್ತ ಅವ್‌ರ ದೃಷ್ಟಿ ಹೋತ್. ಒಂದ್ ಕ್ಷಣ ಅವು ಮರಗಟ್ಟಿ ಹೋದೋ. ಅಲ್ಲಿ ಎರಡ್ ಹಡೀ ಗಾತ್ರದ ಕಾಟಿಗ ಇವ್ರುನ್ನೇ ನೋಡ್ತಿತ್ತ್ ! ಯಾದಕ್ಕೆ ಗುಂಡು ಹೊಡಿಯೂದು? ಈ ಗುಡ್ಡೆಲಿ ಕಾಟಿಗಿಂತ ಜೋರಾಗಿ ಓಡಿಕೆ ಸಾದ್ಯ ಇಲ್ಲೆ. ಮಳೆಗಾಲ ಆದ್‌ರಿಂದ ಮರ ಹತ್ತಿ ಬೊದ್ಕಿಕೆ ಸಾದ್ಯ ಇಲ್ಲೆ.

ಅವು ಆಲೋಚ್ನೆ ಮಾಡಿಕೊಂಡು ಇದ್ದಾಂಗೆ ಸಣ್ಣ ಕಾಟಿ ಹಾಯೀಕ್ಕೆ ಬಾತ್. ಕೂಸಪ್ಪ ಗೌಡ್ರ್ ನೋಟ ನೋಡಿ ಕುದ್ರೆ ಅದುಮಿದೊ. ಕಾಟಿ ಬೀತ್. ನೋಡಿ ಓ ಅಲ್ಲಿ ದೊಡ್ಡ ಗುಂಡಿ ಕಂಡದೆಯಲ್ಲ........ ಅದ್‌ಕ್ಕೆ ಕಾಟಿ ಹೊರಳ್ತಾ ಹೊರಳ್ತಾ ಹೋಗಿ ಬೀತ್.

ಈಗ ದೊಡ್ಡ ಕಾಟಿ ಕೊಂಬು ಚಾಚಿ ಮುಂದೆ ಬಾತ್. ಮೊದ್ದ್ ಜಡೀಕ್ಕೆ ಸಮಯ ಇಲ್ಲೆ. ಸಿಟ್ಟಿಂದ ಸುಳುಂಪುತ್ತಾ ಬಾವ ಕಾಟಿನ ನೋಡಿ ಗೌಡ್ರಿಗೆ ಎಲ್ಲಾ ದೇವ್‌ರ ನೆಂಪಾಗಿರ್ದ್. ಮೈಸಾಸುರ್ನ ಅವ್ತಾರದಂಗೆ ಕಾಣ್‌ವ ಕಾಟಿ ಅವ್‌ರ ಕುತ್ತೋಕು ಅಂತೇಳುವಷ್ಟ್ರಲ್ಲಿ ಅವುಕೆ ಸೈನಲಿ ದಿನಾ ಮಾಡ್‌ವ ಕವಾಯಿತು ನೆಂಪಾಗಿ ಅವು ಕಾಲ್ ಅಗ್ಗಿಸಿ ಮೇಲೆ ಹಾರ್ದೊ. ಕಾಟಿ ತಲೆ ಬೊಗ್ಗಿಸಿದ್ರಿಂದ ಅವು ಸರ್ತಾಗಿ ಕಾಟಿನ ಬೆನ್ನ್ ಮೇಲೆ ಕುಳಿತಿದ್ದೊ. ಕಾಟಿ ಗಾಬ್ರಿಲಿ ಅತ್ತಿತ್ತ ಓಡಿಕೆ ಸುರು ಮಾಡ್ತ್.

ಹೆಂಗೊ ಸರಿ ಮಾಡಿಕೊಂಡ ಅವು ತಿರ್ಗಿ ಕಾಟಿನ ಬೆನ್ನ ಮೇಲೆ ಸರ್‍ಯಾಗಿ ಕುದ್ದೊ. ಕಾಟಿನ ದೊಡ್ಡ ಕೊಂಬುಗ ಅವ್‌ರ ಕೈಗೆ ಸರ್‍ಯಾಗಿ ಸಿಗ್ತಿತ್. ಕೊಂಬ್ ಹಿಡ್ಕೊಂಡ್ ಜೋರಾಗಿ ಅಲ್‌ಗಾಡ್ಸಿಕೆ ಅವು ಸುರು ಮಾಡ್ದೊ. ಕಾಟಿ ತಲೆನ ಅತ್ತಿತ್ತ ಆಡ್ಸಿಕೆ ಸುರು ಮಾಡ್ತ್. ಅವು ಹಿಡ್‌ದ ಪಟ್ಟ್ ಬುಟ್ಟಿತ್ತಿಲ್ಲೆ. ಬಲವಾಗಿ ಹಿಡ್ದ್ ಕುತ್ತಿಗೇನ ಎಡಕ್ಕೆ ತಿರ್‌ಗಿಸ್ದೊ. ಲಟಕ್ಕ್ ಸಬುದದೊಟ್ಟಿಗೆ ಕುತ್ತಿಗೆ ಮುರೀತ್. ಅವು ಕೆಳಕ್ಕೆ ಬಿದ್ದೊ. ಬಿದ್ರೂ ಕೊಂಬುನ ಬುಟ್ಟಿತ್ಲೆ. ಕಾಟಿ ಅಡ್ಡ ಬಿದ್ದ್ ಹೊರಳ್ಳಿಕ್ಕೆ ಸುರು ಮಾಡ್ತ್. ಆಗ ಅವು ಕೊಂಬುನ ಬುಟ್ಟೊ. ಅವುಕೆ ಬಾಳ್‌ಕತ್ತಿ ನೆಂಪಾತ್. ಅದ್ ಉರ್ಡಾಟ ಮಾಡಕನ ಸ್ವಲ್ಪ ದೂರಲೇ ಬಿದ್ದೀತ್. ಅವು ಓಡಿ ಹೋಗಿ ಕತ್ತೀನ ತಂದೊ. ಎರಡ್ ಕಡಿಯಾಟಲಿ ತಲೆ

ಬೇರೆ ಆತ್. ಕಾಟಿನ ಸರೀರ ಹೊರ್ಳಿ ಹೊರ್ಳಿ ಅಲ್ಲೇ ಆ ಹೊಂಡಕ್ಕೆ ಬೀತ್."

* * * * *

ಅಪ್ಪಯ್ಯ ಗೌಡ್ರ್ ಚೋಯಂಬುನ ಹಕ್ಕಲೆ ಇನ್ನೊಂದ್ ಬೀಡಿ ಕೇಳ್ರೊ. ನಾವು ಆಸ್ಚರ್ಯ ಪಟ್ಟ್ ಕೂತಿದ್ದೊ. ಬೀಡಿ ಎಳ್ಕೊಂಡ್ ಇದ್ದಂಗೆ ಅಪ್ಪಯ್ಯ ಗೌಡ್ರ್ "ಆತಲ್ಲಾ........................ ಇನ್ನ್ ಎದ್ರಿ. ಹಂದಿನೋ, ಮೊಲನೋ ಸಿಕ್ಕಿದೆನೋ ನೋಡಮ್ಮಾ" ಎಂತೇಳಿ ಎದ್ರಿಕೆ ನೋಡ್ರೊ. ನಾವು ಬುಡೇಕಲೆ? "ಕುದ್ರಿ.......... ಕುದ್ರಿ............. ಕೂಸಪ್ಪ ಗೌಡ್ರ ಕತೆ ಹೇಳಿ" ಎಂದ್ ನಾವ್ ಅವ್ರ ಕುದ್ರಿಸಿದೊ. ಅಪ್ಪಯ್ಯಗೌಡ್ರ್ "ಬೇಡ ಬುಡಿ. ಅದ್ ದೊಡ್ಡ ರಾಮಾಯಣನೇ ಆದೆ" ಎಂದೊ. ನಾವ್ ಕೇಳೊಕಲೆ? "ಆತ್. ಇಲ್ಲಿ ಮುರ್ಗಗೊ ಇಲ್ಲೆ. ಇಂದ್ ನಾವ್ ಬೇಟೆ ಆಡ್ದಂಗೆ" ಎಂದ್ ಅವು ಕುದ್ರಿದೊ. ಬೀಡಿ ಎಳೀತಾ ಮೊತ್ತೆನೆಂಪು ಮಾಡೀಕ್ಕೆ ಸುರು ಮಾಡ್ರೊ.

* * * * *

"ಆಗ ಇಂಗ್ಲೀಸರ ಆರ್ವಾಡ ಜೋರಿದ್ದ ಕಾಲ. ಮೈಸೂರ್ನ ಸ್ವಾದೀನ ಮಾಡ್ಕೊಂಡ ಮೇಲೆ ಅವ್ರ ಕಣ್ಣ್ ಕೊಡಗಿನ ಮೇಲೆ ಬೀತ್. ಅವ್ರ ಯಜಮಾನಿಕೆ ಒಪ್ಪಿಕೊಣ್ಹೊಕು ಅಂತೇಳಿ ರಾಜಂಗೆ ಕರೆ ಬಾತ್. ರಾಜನ ಸೇನಾಪತಿಗೊ ಯುದ್ಧ ಮಾಡೊಮಾ ಅಂತ ಹೇಳ್ರೊಗಡ. ಸೇನೆಲಿ ಬರಿಕ್ಕೆಯಲ್ಲಿ ಹುಲಿ ಕೊಂದ ನಂಜಯ್ಯ ಎಂಬ ಸುಬೇದಾರ ಇತ್ತ್. ನಮ್ಮಲ್ಲಿ ಕೋಟಿ ಚೆನ್ನಯ್ಯರ್ ಒಳೋಲ್ಲ ಹಾಂಗೆ ಸೇನೆಲಿ ಕರ್ತು ಮತ್ತು ಚೆಟ್ಟಿ ಅಂತ ಇಬ್ರ್ ಮಲೆಕುಡೀರು ಇದ್ರೊಗಡ. ಬಾಳಾ ಧೈರ್ಯವಂತೊಗಡ. ಕೂಸಪ್ಪ ಗೌಡ್ರ್ ಕೇಳ್ದೇ ಬೇಡ. ಇವು ಎಲ್ಲಾ ಯುದ್ದಕ್ಕೆ ತಯಾರಾಕನ ದೀವಾನ ಬೋಪು ಮತ್ತು ಲಕ್ಷ್ಮೀ ನಾರಾಯಣ ಅಡ್ಡಿ ಮಾಡ್ರೊಗಡ. ರಾಜಿ ಮಾಡ್ದೇ ಒಳ್ಳೆದ್ ಅಂತ ರಾಜನ್ನ ಒಪ್ಪಿಸಿದೊಗಡ. ಯುದ್ದನೇ ಇಲ್ಲ್‌ದೆ ಕೊಡಗು ಇಂಗ್ಲೀಸ್‌ರ ಕೈಗೆ ಹೋತ್. ಅವು ರಾಜನ ಬಲ್ವಾತ್ಕಾರಲಿ ಕಾಶಿಗೆ ಓಡ್ಸಿದೊಗಡ.

ಆಗ ರಾಜನಿಸ್ಟು ಅಮರಸುಳ್ಯಕ್ಕೆ ಬಂದೊ. ಅವುಕ್ಕೆ ಆಸ್ರಯ ಸಿಕ್ಕಿದ್ದ್ ಕೆದುಂಬಾಡಿ ರಾಮಗೌಡ್ರಲ್ಲಿ. ಇಂಗ್ಲೀಸ್‌ರು ಹೊಗೆಸೊಪ್ಪು ಮತ್ತೆ ಉಪ್ಪಿಗೆ ತೆರಿಗೆ ಹಾಕಿದ್ರೊ. ಕಂದಾಯನ ಹಣರೂಪಲೇ ಕೊಡೊಕೂಂತೇಳಿ ಸಾಸ್ನ ಮಾಡಿದ್ರೊ. ಅದ್ ಇಲ್ಲಿನ ಬೇಸಾಯಗಾರ್ರ ಕೆರಳಿಸೀತ್. ಕೆದುಂಬಾಡಿ ರಾಮಗೌಡ್ರ್ ಆಗ ಅಮರಸುಳ್ಯ ಸೀಮೇಲಿ ತುಂಬಾ ಹೆಸ್ರ್ ಗಳಿಸಿದ್ರೊ. ಕೂಸಪ್ಪ ಗೌಡ್ರಿಗೂ ಜನಬೆಂಬಲ ಇತ್ತ್. ಇವೆಲ್ಲಾ ಸೇರಿ ಸೋಮವಾರ ಪೇಟೆ ಕಡೆಯ ಒಬ್ಬ ಲಿಂಗಾಯ್ತನ ಕರ್ಕೊಂಡು ಬಂದೊ. ಸುದ್ದಿ ಹಬ್ಬಿ ಸೇನಾಪತಿ ಮಾಡಿ ಸೇನೆ ಕಟ್ಟಿದೊ. ಇಂಗ್ಲೀಸ್‌ರ ಕಂದಾಯ ತೆಗೆದು ಹಾಕಿ ಮೂರು ವರ್ಸ ಕಂದಾಯ ಮಾಫಿ ಅಂತೇಳಿ ಇಸ್ತಿಯಾರು ಹೊರಡಿಸಿದೊ.

ಕೇಳ್‌ದೇನ್? ಅಮರಸುಳ್ಯದ ಬೇಸಾಯಗಾರ್ರೆಲ್ಲಾ ಜಾತಿ ಮರ್ತು ಒಂದಾದೊ. ರಾಜ್‌ರ ಸೈನ್ಯದ ಸೈನಿಕರ್ ಈ ಸುದ್ದಿನ ಕೇಳಿ ತುಂಬಾ ಮಂದಿ ಒಂದಾಗಿ ಅಮರ ಸುಳ್ಯಕ್ಕೆ ಬಂದೊ. ಜನವೋ ಜನ. ಸಿಕ್ಕಿದ್ದೇ ಆಯುದ. ಬೆಳ್ಳಾರೆ, ಪಂಜ, ಪುತ್ತೂರು, ವಿಟ್ಲ, ಪಾಣೆ ಮಂಗ್ಳೂರು ಆಗಿ ದೊಡ್ಡ ಪಡೆ ಮಂಗಳೂರಿಗೆ ಹೋತ್. ಅಲ್ಲಲ್ಲಿ ತುಂಡರಸ್ರ್ ಸೈನ್ಯನ ಸೇರಿಕೊಂಡೊ. ಅಪಾರವಾದ ಈ ಸೈನ್ಯದ ಎದ್‌ರ್ ನಿಲೀಕೆ ಬೊತ್ತದೆ ಇಂಗ್ಲೀಸ್ರ್ ಕಣ್ಣಾನೂರ್‌ಗೆ ಓಡ್ರೊ.

ಕಲ್ಯಾಣಪ್ಪ ರಾಜ್ಯಪಾಲ ಆತ್. ಹದಿಮೂರ್ ದಿನ ರಾಜ್‌ರ ಹೆಸ್ರಿಲಿ ಆಡಳ್ತೆ ನಡೆಸ್ತ್. ಹದಿಮೂರ್ನೆ ರಾತ್ರೆ ಕಲ್ಯಾಣಪ್ಪನ ಪಡೆ ನಿದ್ರೆ ಮಾಡಿಕೊಂಡಿರಕನ ಇಂಗ್ಲೀಸ್‌ರ ದೊಡ್ಡ ಪಡೆ ಬೆಡಿ, ಪಿರಂಗಿ ಒಟ್ಟಿಗೆ ದಾಳಿ ಮಾಡ್ತ್. ಕಲ್ಯಾಣಪ್ಪ ಮತ್ತು ಅವುನ ಬಂಟ್ರ್‌ಗಳ ಇಂಗ್ಲೀಸ್ರು ಮಾರ್ನಮಿ ಕಟ್ಟೇಲಿ ಗಲ್ಲಿಗೇರಿಸಿದೊ."

* * * * *

ಅಪ್ಪಯ್ಯ ಗೌಡ್ರ್ ಕತೆ ನಿಲ್ಸಿದೊ. ನಾವು ಕಲ್ಲಿನಂಗೆ ಕುದ್ದಿದೊ. ಬಾಡು ನಾಯ್ಕು ಲೊಚಗುಟ್ಟಿತ್. "ಅಯ್ಯೋ ಪಾಪ. ಕೂಸಪ್ಪ ಗೌಡ್ರ್ ಹಂಗಾರೆ ಮಂಗ್ಳೂರ್ಲೇ ಸತ್ತ್‌ಹೋತ್" ಎಂದ್ ಬೇಜಾರಿಲಿ ಹೇಳ್ತ್.

"ಇಲ್ಲೆ ಇಲ್ಲೆ" ಅಪ್ಪಯ್ಯ ಗೌಡ್ರ್ ಹೇಳ್ರೊ "ಕಲ್ಯಾಣಪ್ಪ ಮಂಗ್ಳೂರ್ನ ವಸ ಮಾಡಿದ್ದ್ ಗೊತ್ತಾಕನ ಮಡ್ಕೇರಿಲಿ ಇಂಗ್ಲೀಸ್ರ ಸೈನ್ಯಾಧಿಕಾರಿ ಲೀಹಾರ್ಡಿ ಸುಳ್ಯಕೆ ಸೇನೆಯೊಟ್ಟಿಗೆ ಬಾತ್. ಇದ್ ಗೊತ್ತಾಗಿ ಕಲ್ಯಾಣಪ್ಪ ಕುಡಿಯ ಸೋದರ್ರೊಟ್ಟಿಗೆ ಕೂಸಪ್ಪಗೌಡ್ರ ಸುಳ್ಯಕೆ ಕಳ್ಸಿ ಕೊಟ್ಟಿತ್. ಕುಡಿಯ ಸೋದರ್ರು ಲೀಹಾರ್ಡಿಗೆ ಸಿಕ್ಕಿ ಬಿದ್ರೊ. ಕೂಸಪ್ಪ ಗೌಡ್ರು ತಪ್ಪಿಸಿಕೊಂಡ್ ಓಡ್ರೊ."

"ಓ ಅಸ್ಟೆನಾ? ಮತ್ತೆ ಎಂತದ್ದ್ ಅವರ ಧೈರ್ಯ?" ಚೋಯಂಬು ಕೇಳಕನ ಅಪ್ಪಯ್ಯಗೌಡ್ರಿಗೆ ನಗೆ ಬಾತ್.

"ಅಂದ್ ನೀ ಮಾಡ್ದ್ ಎಂತದ್ದ್? ಹುಲಿನ ಕಂಡಾಕನ ಹೆದ್ರಿ ಓಡಿ ಮರ ಹತ್ತಿತ್ತೆನಾ? ಹುಲಿನ ಕೊಂದ ಮೇಲೆ ನಾನೆ ಅಲ್ಲನ ನಿನ್ನ ಮರಂದ ಇಳ್ಸಿದ್? ಮತ್ತೆ ಹುಲಿಜೊರ ಬಂದ್ ನೀ ಒಂದು ತಿಂಗೊ ಮಲಗಿತ್ತೆನಾ? ಬಾರಿ ಧೈರ್ಯವಂತ ನೀ" ನಾವ್ ಎಲ್ಲಾ ನೆಗಾಡ್ರೊ. ಚೋಯಂಬು ಕೂಡಾ ನೆಗಾಡಿತ್.

ಅಪ್ಪಯ್ಯ ಗೌಡ್ರ್ ಇನ್ನೊಂದು ಬೀಡಿ ತೆಕೊಂಡೊ. ಹೊಗೆ ಬುಡ್ತಾ ಮತ್ತೆ ಕತೆ ಮುಂದರ್ಸಿದೊ. "ಕೂಸಪ್ಪ ಗೌಡ್ರ್ ಓಡಿದ್ದ್ ಇಂಗ್ಲೀಸ್ರಿಗೆ ಹೆದ್ರಿ ಅಲ್ಲ. ಜನ್ರ ವಾಪಸ್ ಒಟ್ಟು ಮಾಡಿ ಇಂಗ್ಲೀಸ್‌ರ ಓಡ್ಸಿಕೆ. ಈ ಪೆರಮುಂಡ, ಕೋಲ್ಚಾರು, ಆಲೆಟ್ಟಿ, ಅಜ್ಜಾವರ, ಉಳುವಾರು, ನಿಡ್ಕಮಲೆ, ಅರಂತೋಡು, ಕಾಂತಮಂಗ್ಲ, ಸುಳ್ಯ ಸುತ್ತಿ ಬೇಸಾಯಗಾರ್ರ ಒಟ್ಟ್ ಸೇರ್ಸಿಕೆ ಸುರು ಮಾಡ್ರೊ. ಕಲ್ಯಾಣಪ್ಪನ್ನ ಗಲ್ಲಿಗೇರಿಸಿದ್ದಕ್ಕೆ ಕಂದಾಯ ಕಟ್ಟೇಡಿ ಎಂದ್ ಎಲ್ಲವುಕ್ಕೆ ಹೇಳ್ರೊ. ಅಮರ ಸುಳ್ಯ ಮಾಗಣೆಂದ ಒಂದು ಕಾಸೂ ಕಂದಾಯ ಸಿಕ್ಕೇ ಹೋಕನ ಲೀಹಾರ್ಡಿ ಗೂಡಚಾರ್ರ ಅಟ್ಟಿತ್. ಕೂಸಪ್ಪ ಗೌಡ್ರ ಕಾರ್‌ಬಾರ್ ತಿಳ್ದ್ ಸಿಟ್ಟ್ ಬಾತ್. ಗೌಡ್ರತಲೆಗೆ ಐದ್ಸಾವಿರ ರೂಪಾಯಿ ಬಹುಮಾನ ಘೋಸಣೆ ಮಾಡ್ತ್.

ಲೀಹಾರ್ಡಿಯ ಪರ್ಮಾನು ಹೊರಟ ಮೇಲೆ ಕೂಸಪ್ಪ ಗೌಡ್ರ್ ಅಡಗಿಕೊಂಡ್ ತಿರ್‌ಗಾಡಿಕೆ ಸುರು ಮಾಡ್ರೊ. ಸಾವಿನ ಬಯಂದ ಅಲ್ಲ. ನಾ ಸಿಕ್ಕಿ ಬಿದ್ರೆ ಇಂಗ್ಲೀಸ್ರ ವಿರುದ್ಧ ಹೋರಾಡವು ಇಲ್ಲೇಂತ ಆದೆ ಎಂದ್ ಅವುಕೆ ಗೊತ್ತಿತ್ತ್."

ಸ್ವಲ್ಪ ಹೊತ್ತ್ ಅಪ್ಪಯ್ಯ ಗೌಡ್ರ್ ನಿಲ್ಸಿದೊ. ನವುಗೆ ತುಂಬಾ ಕುತೂಹಲ ಆಗಿತ್ತ್. ತಡೀಕೆ ಆಗ್ದೆ ಕೇಳ್ದೊ : "ಮುಂದೇನಾತ್?"

ಅಪ್ಪಯ್ಯ ಗೌಡ್ರ್ ನಿಟ್ಟುಸಿರ್ ಬುಟ್ಟೊ. "ಆದು ಏನ್? ದುಡ್ಡಿನ ಆಸೆ ಯಾರಿಗೆ ಇರ್ದುಲೆ ಹೇಳಿ? ಕೂಸಪ್ಪ ಗೌಡ್ರು ಅಡಂಗುವ ಜಾಗೆನ ಯಾರೋ ಒಬ್ಬ ಲೀಹಾರ್ಡಿಯ ಸೈನಿಕರಿಗೆ ತೋರ್ಸಿತ್.

ಅದ್ ಇದೇ ಕೋಲ್ಬಾರಿನ ಒಬ್ಬ ಮಧ್ಯಮ ವರ್ಗದ ಬೇಸಾಯಗಾರ್ನ ಮನೆಲಿ. ಮಳೆಗಾಲದ ಕರ್ಚಿಗೇಂತೇಳಿ ಅಟ್ಟದ ಮೇಲೆ ಅವ ಮುಡೀನ ಸರ್‍ಯಾಗಿ ಜೋಡ್ಸಿ ಇಟ್ಟಿತ್ತ್. ಸೈನಿಕ್ರ ನೋಡ್ದ ಕೂಸಪ್ಪ ಗೌಡ್ರು ಅಟ್ಟ ಹತ್ತಿ ಮುಡಿಗಳ ಹಿಂದೆ ಅಡಗಿ ಕುದ್ದತ್. ಸೈನಿಕರು ಎಂಟು ಜನ ಇದ್ದೊ. ಆದ್ರೂ ಅಟ್ಟಕ್ಕೆ ಹತ್ತಿಕೆ ಸುರುವಿಗೆ ಅವಿಕೆ ಧೈರ್ಯ ಬಾತ್ಲೆ. ಕಡೇಗೆ ಹಣದ ಆಸೆ ಗೆದ್ದತ್. ಇಬ್ರು ಧೈರ್ಯ ಮಾಡಿ ಮೊದ್ಲು ಅಟ್ಟ ಹತ್ತಿದೊ. ಉಳ್ದವು ಹಿಂದಿಂದ ಹತ್ತಿದೊ. ಕತ್ತಿ ಹಿಡ್ಕೊಂಡ್ ನಿಧಾನವಾಗಿ ಮುಂದೆ ಹೋದೊ.

ಕೂಸಪ್ಪ ಗೌಡ್ರ್ ಆಗ್ಲೂ ಹೆದರ್‌ತ್ಲೆ. ತನ್ನಕಲೆ ಇದ್ದ ಅಕ್ಕಿ ಮುಡಿನ ಎತ್ತಿ ಒಬ್ಬ ಸೈನಿಕರ ಮೇಲೆ ಬಿಸಾಡ್ದೊ. ಅಂವ ನೋವಿಲಿ ಅಯ್ಯಯ್ಯೋ ಎಂತೇಳಿ ಬೊಬ್ಬೆ ಹಾಕಿತ್. ಕೂಸಪ್ಪ ಗೌಡ್ರ್ ಇನ್ನೊಂದ್ ಅಕ್ಕಿ ಮುಡಿ ತೆಗ್ದ್ ಬಿಸಾಡ್ದೊ. ತಪ್ಪಿಸಿಕೊಂಡ್ ಸೈನಿಕ್ರು ಅವುರ ಸುತ್ತ್ ಹಾಕ್ದೊ. ಸಿಟ್ಟ್‌ಲಿ ಕೂಸಪ್ಪ ಗೌಡ್ರ್ ಒಂದೇ ಸಮನೆ ಅಕ್ಕಿ ಮುಡೀನ ಎತ್ತಿ ಬಿಸಾಡಿಕೆ ಸುರು ಮಾಡ್ದೊ. ಆಗ ಒಬ್ಬ ಸೈನಿಕ ಅವ್‌ರ ಎಡಬಾಗಲಿ ಕತ್ತೀನ ಸರ್‍ಯಾಗಿ ಬೀಸಿತ್. ಅವ್‌ರ ಎಡ್‌ಕೈ ತುಂಡಾಗಿ ಕೆಳಕ್ಕೆ ಬೀತ್. ಆಗ ಬಲಬಾಗಲಿ ಸೈನಿಕ ಕೊರ್ಳಿಗೆ ಸರ್‍ಯಾಗಿ ಕತ್ತಿ ಬೀಸಿತ್. ಛಿಲ್ಲೆಂತ ರಕ್ತ ಚಿಮ್ಮಿ ಅವ್‌ರ ರುಂಡ ಮುಂಡಂದ ಬೇರ್ಪಟ್ಟ್ ಕೆಳಕ್ಕೆ ಬೀತ್. ಸೈನಿಕ್ರ ಮೊಕಕೆ ರಕ್ತದ ಒಕುಳಿ ಆತ್. ತಲೆ ಕಡ್ದ ಸೈನಿಕ ಬಿದ್ದ ರುಂಡನ ಎತ್ತಿಕೊಂಡ್ ಅಟ್ಟಾಸ ಮಾಡ್ತ್."

* * * * *

ಅಪ್ಪಯ್ಯಗೌಡ್ರ ಮುಖಲಿ ನೋವು ಹೆಪ್ಪ್‌ಗಟ್ಟಿತ್ತ್. ನಾವ್ ಏನ್ ಮಾಡಿಕಾಗದೆ ತುಂಬಾ ಬೇಜಾರಿಲಿ ಇದ್ದೊ. ಸೊಲ್ಪ ಹೊತ್ತಾದ ಮೇಲೆ ಚೋಯಂಬು ಮಾತಾಡಿತ್. "ಅಂತೂ ಎಂಟ್ ಜನ ಸೇರಿ ಆಯ್ದ ಇಲ್ಲದ ಒಬ್ಬನ ಕೊಂದ್‌ಬುಟ್ಟೊ! ಅವುಕೆ ಬಹುಮಾನ ಸಿಕ್ಕಿರೋಕಲ್ಲಾ? ಅವ್‌ರ ಕುಟುಂಬದವಿಕೆ ಬೂಮಿ ಕೊಟ್ಟಿರುವೊ ಅಲ್ಲಾ?"

"ಅದೋ" ಅಪ್ಪಯ್ಯಗೌಡ್ರ್ ಕತೆ ಮತ್ತೆ ಮುಂದುವರ್ಸಿದೊ. "ಆ ಕತೆ ಬಾಳ ಲ್ಯಾಕುಟ್ಟು. ಈ ಸೈನಿಕ್ರು ಕೂಸಪ್ಪ ಗೌಡ್ರ ರುಂಡದೊಡನೆ ಲೀಹಾರ್ಡೀನ ನೋಡೀಕೆ ಹೋದೊ. ಕೂಸಪ್ಪಗೌಡ್ರ ತಲೆ ಹಾರ್ಸಿದೋನೇ ಅದ್ರ ಹಿಡ್ಕೊಂಡಿತ್ತ್. ಲೀಹಾರ್ಡಿಗೆ ವಿಸ್ಯ ಗೊತ್ತಾಗಿ ಕ್ಯಾಪ್ಟನ್ ಡ್ರೆಸಲ್ಲೇ ಹೊರಗೆ ಬಾತ್.

ಸೈನಿಕ್ರು ಲೀಹಾರ್ಡೀನ ಕಂಡ್ ಮಿಲಿಟ್ರಿ ಗತ್ತಿಲಿ ಸೆಲ್ಯೂಟು ಹೊಡ್ದೊ. ರುಂಡ ಹಿಡ್ದವ ಅದ್ರ ಲೀಹಾರ್ಡಿನ ಮುಂತೆ ಇಸಿತ್. ಅದ್ರ ನೋಡ್ದ ಲೀಹಾರ್ಡಿನ ಹುಬ್ಬುಗ ಮೇಲೆ ಹೋತ್. "ದೇವ್ರೇ......... ಇದು ಎಂತಾ ಬವ್ಯತೆ" ಎಂದ್ ಅವ ಉದ್ಗರಿಸಿತ್

ಮಾಮೂಲು ಸ್ಥಿತಿಗೆ ಬಂದ ಲೀಹಾರ್ಡಿ ಮತ್ತೆ ಕೇಳ್ತ್ "ಇವನ್ನ ಕೊಂದದ್ದ್ ಯಾರ್?"

ಕೊಂದ ಸೈನಿಕ ಒಂದು ಹೆಜ್ಜೆ ಎದ್ರ್ ಬಂದ್ ಎದೆ ಮುಂದೆ ಮಾಡಿ ಹೇಳ್ತ್ "ನಾನ್" ಉಳ್ದೊವ್‌ಕೆಲ್ಲಾ ಬಹುಮಾನಲಿ ಪಾಲ್ ತಪ್ಪಿಹೋಕೆ ಬತ್ತ್ಂತೇಳಿ "ನಾವ್ ಎಲ್ಲಾ ಇದ್ರಿಂದ ಇವ್ನ ಕೊಲ್ಲಿಕೆ ಸಾದ್ಯ ಆದ್ದ್? ಅಂತ ಹೇಳ್ದೊ.

ಲೀಹಾರ್ಡಿಗೆ ನೆಗೆ ಬಾತ್. "ಆತ್........ ಆತ್........ ಬಹುಮಾನ ಎಲ್ರಿಗೂ ಕೊಡಮಾ....... ಮಾದ್ಲ್ ಇವಂಗೆ ಮತ್ತೆ ನಿವುಗೆಲ್ಲಾ........ ಬಾ....... ಹಕ್ಕಲೆ ಬಾ......"

ಕೂಸಪ್ಪ ಗೌಡ್ರ ಕೊಂದವ ಉಳ್‌ದವ್ರೆಲ್ಲಾ ನೋಡಿ ಕುಸಿಲಿ ನೆಗೆಯಾಡಿ ಲೀಹಾರ್ಡಿ ಹಕ್ಕಲೆ ಬಂದ್ ನಿಂತತ್. ಈ ಮಾತ್‌ಕತೆನೆಲ್ಲಾ ಕೇಳಿ ಅಲ್ಲೇ ಒಂದ್ ಕೋಣೆಲಿ ಬರ್‌ಕೊಂಡ್ ಕುದ್ದಿದ್ದ ಬೋಪು ದಿವಾನ ಹೊರಗೆ ಬಂದ್ ನೋಡ್ತ್.

ಲೀ ಹಾರ್ಡಿ ಹಕ್ಕಲೆ ಬಂದ್ ನಿಂತ ಸೈನಿಕನ ಒಂದ್ ಸರ್ತಿ ಸರ್‍ಯಾಗಿ ನೋಡ್ತ್. ಮಿಂಚಿನಾಂಗೆ ಅವನ ಒರೆಲಿದ್ದ ಕತ್ತಿನ ತೆಗ್ದ್ ಅವನ ತಲೆನ ಕಟ್ಕಂತೇಳಿ ಕತ್ತರಿಸಿತ್. ಇದ್ರ ನೋಡಿ ಹೆದ್ರಿಹೋದ ಬೋಪು 'ಇಗ್ಗುತ್ತಪ್ಪಾ' ಎಂತೇಳಿ ಬೊಬ್ಬೆ ಹಾಕಿತ್. ಹೆದ್ರಿಹೋದ ಸೈನಿಕರ್ ಜೀವ ಉಳ್ಸಿಕೊಂಬಿಕೆ ಬೇಕಾಗಿ ಮರ್ಲರಂಗೆ ಸಿಕ್ಕಾಬಟ್ಟೆ ಓಡ್ದೊ.

ಲೀ ಹಾರ್ಡಿ ಕೂಸಪ್ಪಗೌಡ್ರ ತಲೆನ ಕೈಲಿ ಹಿಡ್‌ಕೊಂಡ್ತ್. ಹೆಣವಾಗಿ ಬಿದ್ದ ಸೈನಿಕನ ಕುತ್ತಿಗೆಂದ ಉಕ್ಕಿ ಹರಿಯುತ್ತಿದ್ದ ರಕ್ತಲಿ ತನ್ನ ಬಲಗೈ ತೋರು ಬೆರಳು ಮುಳ್ಗಿಸಿತ್. ಆ ರಕ್ತಲಿ ಗೌಡ್ರ ಹಣೆಗೆ ಬೊಟ್ಟು ಇಸುತ್ತಾ ನಡ್‌ಗಿಕೊಂಡ್ ಹೇಳ್ತ್ : "ಓ ವೀರಯೋಧ ನನ್ನ ಕ್ಷಮ್‌ಸ್. ಇದ್ಕಿಂತ ಹೆಚ್ಚಿಗೆ ನಿಂಗೆ ನಾ ಏನೂ ಕೊಡದೆ ಹೋದೆ."

ಬೊಪು ದಿವಾನ ಹೆದ್ರ್‌ಕಂಡ್ ನಡ್‌ಗುತ್ತಾ ಇದರ ನೋಡ್ತಿತ್ತ್."

* * * * *

ಕತೆ ಮುಗೀಕನ ಎಲ್ರ ಕಣ್ಣಲಿ ನೀರ್ ತುಂಬಿತ್ತ್. ಅಪ್ಪಯ್ಯ ಗೌಡ್ರ್ ಎದ್ದೊ. "ನಿವುಗೆ ಹಂದಿಗೈಪು ಬಟ್ಟಲಿಟ್ಟು ತಿಂಬ ಯೋಗ ಇಲ್ಲೆ ನಡೆಸಿ" ಎಂತ ಹೇಳ್ದೊ.

ಹಂದಿ ಕಾಂಬುಕೆ ಸಿಕ್ಕರೂ ಅವಿಕೆ ಅಂದ್ ಅದ್ರ ಕೊಲ್ಲಿಕೆ ಮನಸ್ಸ್ ಬಾತಿತ್ತೊ ಇಲ್ಲಯೊ !

ಡಾ. ಪ್ರಭಾಕರ ಶಿಶಿಲ
ನೆಹ್ರೂ ಮೆಮೋರಿಯಲ್ ಕಾಲೇಜು, ಸುಳ್ಯ.

---

ಪ್ರಿಯ ಓದುಗರೆ
ನಮ್ಮ ಹಿರಿಯರ ವೀರಗಾಥೆಯು ಸರಾಗವಾಗಿ ಇದೇ ತರಹ ಹರಿದು ಬರಲಿ. ಯುವ ಪೀಳಿಗೆಯವರಿಗೆ ಇದರೆಲ್ಲದರ ಪರಿಚಯವಾಗಲೆಂಬುದೇ ನಮ್ಮ ಆಶಯ

- ಸಂ.

## ಗೌಡ ಮಹಿಳಾ ಒಕ್ಕೂಟ ಮಡಿಕೇರಿ, ಪ್ರಥಮ ವಾರ್ಷಿಕ ಮಹಾಸಭೆ ಮತ್ತು ವಾರ್ಷಿಕೋತ್ಸವ, ಹಾಗೂ ಸಾಂಸ್ಕೃತಿಕ ಕಾರ್ಯಕ್ರಮದ ಒಂದು ವೀಕ್ಷಕ ವಿವರಣೆ. ಮಹಿಳಾ ಮಣಿಗಳು ನಿರ್ಮಿಸಿದ ದಾಖಲೆ ಮತ್ತು ಗೌಡ ಮಹಿಳಾ ಇತಿಹಾಸದಲ್ಲೆ ಒಂದು ಮೈಲಿಗಲ್ಲು.

ದಿನಾಂಕ 11-5-1999ನೇ ಮಂಗಳವಾರ ಮಡಿಕೇರಿ ಕೊಡಗು ಗೌಡ ಸಮಾಜದ ಕಟ್ಟಡದಲ್ಲಿ ಗೌಡ ಮಹಿಳಾ ಒಕ್ಕೂಟದ ವಾರ್ಷಿಕೋತ್ಸವವು ಭಾರೀ ವಿಜೃಂಭಣೆಯಿಂದ ಜರುಗಿಸುವುದು ಕೊಡಗಿನ ಗೌಡ ಮಹಿಳಾ ಇತಿಹಾಸದಲ್ಲಿಯೇ ಒಂದು ಮೈಲಿಗಲ್ಲು. ಹನ್ನೆರಡು ಸಂಘಟನಾ ಮಹಿಳಾವಾದಿಗಳ ಪರಿಶ್ರಮದಿಂದ ಜರುಗಿದ ಈ ಕಾರ್ಯಕ್ರಮ ಸರಿಯಾಗಿ ಬೆಳಗ್ಗೆ 10.50 ಕ್ಕೆ ವಾರ್ಷಿಕ ಮಹಾಸಭೆಯೊಂದಿಗೆ ಪ್ರಾರಂಭವಾಯಿತು.

ಮಹಾಸಭೆಯ ಅಧ್ಯಕ್ಷತೆಯನ್ನು ಚೀಯಂಡಿರ ರಾಧ ಯಾಧವನವರು ವಹಿಸಿದ್ದರು. ಪ್ರಾರ್ಥನೆಯನ್ನು ಒಕ್ಕೂಟದ ನಿರ್ದೇಶಕಿಯವರಾದ ಪಂಜಿಪಳ್ಳ ಇಂದ್ರಾಕ್ಷಿ ಮತ್ತು ನೀರ್ಪಾಡಿ ನಾಗವೇಣಿಯವರು ಮಾಡಿದರು. ವಾರ್ಷಿಕ ವರದಿಯನ್ನು ಒಕ್ಕೂಟದ ಮಹಾ ಕಾರ್ಯದರ್ಶಿ ಕೊಡಕಂಡಿ ಕಾವೇರಮ್ಮ ವಾಚಿಸಿದರು. ಆಯಾವ್ಯಯದ ಬಗ್ಗೆ ವಿವರವಾದ ಲೆಕ್ಕವನ್ನು ಸೂದನ ಕಮಲ ರಾಘವಯ್ಯನವರು ಮಂಡಿಸಿ, ಸಭೆಯ ಅನುಮೋದನೆ ಪಡೆದರು. ಹಾಲಿ ಕಾರ್ಯಕಾರಿ ಮಂಡಳಿಯು ಮುಂದುವರಿಯುವಂತೆ ಸಭೆಯು ಅನುವು ಕೊಟ್ಟಿತ್ತು. ಇವರುಗಳು ಎಂದರೆ ಚೀಯಂಡಿ ರಾಧ, ಕೊಡಕಂಡಿ ಕಾವೇರಮ್ಮ, ನಿರ್ಪಾಡಿ ನಾಗವೇಣಿ, ಸೂದನ ಕಮಲ, ಬೈತಡ್ಕ ಜಾನಕಿ, ಪರಿವಾರನ ತಂಗಮ್ಮ, ಪಂಜಿಪಳ್ಳ ಇಂದ್ರಾಕ್ಷಿ, ಕುಂಬು ಗೌಡನ ರಾಣಿ, ಪೊನ್ನಚ್ಚನ ಲಲಿತ, ನಾಟೋಳನ ದೇವಮ್ಮ, ದಂಬೆಕೋಡಿ ಲೀಲಾ, ಕಾಳೆರಮ್ಮನ ಸರಸ್ವತಿ ಇವರು. ಸಭೆಯಲ್ಲಿ ಕೋಳಿಮುಡಿಯನ ರುಕ್ಮಿಣಿ ಮತ್ತು ಅನಂತ ಕುಮಾರ್ ದಂಪತಿಗಳು ಗುಡಿ ಕೈಗಾರಿಕೆ, ವಿವಿಧ ಸಹಕಾರಿ ಸಂಘ ವಿಧವೆಯರಿಗೆ ಸಹಕಾರ ಇಂತಹ ಕಾರ್ಯಕ್ರಮಗಳ ಅಗತ್ಯತೆಯನ್ನು ಮತ್ತು ಸಲಹೆ ನೀಡಿದರು. ಅಧ್ಯಕ್ಷರ ಭಾಷಣದ ನಂತರ, ನಾಗವೇಣಿಯವರು ವಂದನಾರ್ಪಣೆಯನ್ನು ನೆರವೇರಿಸಿದರು.

### ಮಹಿಳಾ ವಾರ್ಷಿಕೋತ್ಸವ

ಮಹಿಳಾ ವಾರ್ಷಿಕೋತ್ಸವ ಕಾರ್ಯಕ್ರಮದ ಉದ್ಘಾಟನೆಯಿಂದ ಅರೆಬಾಷೆ ಗೌಡರ ಮೊಟ್ಟ ಮೊದಲನೆಯ ಕರ್ನಾಟಕ ರಾಜ್ಯದ ಮಾಜಿ ಸಚಿವರು ಆದ ದಂಬೆಕೋಡಿ ಚಿಣ್ಣಪ್ಪನವರ ಧರ್ಮ ಪತ್ನಿ ಲೀಲಾರವರು ಜ್ಯೋತಿ ಬೆಳಗುವುದರ ಮೂಲಕ ಕಾರ್ಯಕ್ರಮವನ್ನು ತಮ್ಮ ಅಮೃತಹಸ್ತದಿಂದ ಉದ್ಘಾಟಿಸಿದರು.

ಗುಡ್ಡೆಮನೆ ಚಂದ್ರರಮೇಶ, ಕಾಳೇರಮ್ಮನ ಯಶೋಧ ತಿಮ್ಮಯ್ಯ, ಕಡ್ಲೆಮನೆ ಶಾಂತಿ ಗಣೇಶ್ ಇವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಸ್ವಾಗತ ಗೀತೆಯನ್ನು ಪಂಜಿಪಳ್ಳ ಇಂದ್ರಾಕ್ಷಿಯವರು ಸ್ವರಚಿತ ಹತ್ತು ಕುಟುಂಬ ಹದಿನೆಂಟು ಗೋತ್ರದ ಹಾಡಿನೊಂದಿಗೆ ನೆರೆದ ಜನಾಂಗದವರನ್ನು ಸ್ವಾಗತಿಸಿದರು. ಸ್ವಾಗತ ಭಾಷಣವನ್ನು ಒಕ್ಕೂಟದ ಅಧ್ಯಕ್ಷೆ ಚೀಯಂಡಿರ ರಾಧನವರು ಅತಿಥಿಗಳ ಪರಿಚಯ ಹಾಗೂ ಗೌರವದ ಹಾರಾರ್ಪಣೆ ಮತ್ತು ನೆನಪಿನ ಕಾಣಿಕೆಯನ್ನು ನೀಡುವುದರೊಂದಿಗೆ ಮಾಡಿದರು. ಮುಖ್ಯ ಅತಿಥಿಗಳಾಗಿ ಶ್ರೀಮತಿಯವರಾದ ಬಳಪದ ಹೇಮಾವತಿ, ಪಟ್ಟಡ ಶೀಲಾಮಣಿ ಪ್ರಭಾಕರ, ಅಮ್ಮಾಜೀರ ಲೀಲಾವತಿ ಪೊನ್ನಪ್ಪ, ತೋಟಂಬೈಲು ಪ್ರೇಮ ಆನಂದ ಮತ್ತು ಸುಳ್ಯದ ಮೀನಾಕ್ಷಿಗೌಡ ಉಪಸ್ಥಿತರಿದ್ದರು. ವಾರ್ಷಿಕೋತ್ಸವದ ಅಧ್ಯಕ್ಷತೆಯನ್ನು ಶ್ರೀಮತಿ ಪಡಿಕಲ್ಲು ಸೀತಮ್ಮ ಮಾದಪ್ಪನವರು ವಹಿಸಿದ್ದರು.

ಸಭೆಯನ್ನು ಉದ್ಘಾಟಿಸಿದ ಶ್ರೀಮತಿ ಲೀಲಾ ಚಿಣ್ಣಪ್ಪನವರು ಮಾತನಾಡಿ ಅರೆಭಾಷೆ ಬಗ್ಗೆ ನನಗೆ ತುಂಬಾ ಹೆಮ್ಮೆ ಬಂದಿದೆ. ಇಂತಹ ಸಂಘ ಸಂಸ್ಥೆಗಳು ಬೆಳೆಯಲು ಆರ್ಥಿಕವಾಗಿ ಸಹಕರಿಸಬೇಕು. ಇಲ್ಲಿಯವರೆಗೆ ಇಂತಹ ವೇದಿಕೆ ಇರಲಿಲ್ಲ. ಎಲೆಮರೆಯ ಕಾಯಿಯಾಗದೆ ಹೊರಬರಬೇಕೆಂದು ತಮ್ಮ ಭಾಷಣದಲ್ಲಿ ವಿವರಿಸಿದರು. ಇನ್ನೊಬ್ಬ ಅತಿಥಿಯಾದ ಸುಳ್ಯದ ಮೀನಾಕ್ಷಿಗೌಡರು ಮಾತನಾಡಿ ಇಂತಹ ಸಂಘಟನೆಯಿಂದ ನಿಜವಾಗಿಯೂ ತಾಕತ್ತು ಬಂದಿದೆ. ಬೇರೆ ಜನಾಂಗದವರ ಅವಹೇಳನಕ್ಕೆ ಹೆದರ ಬೇಕಾಗಿಲ್ಲ, ಅಲ್ಲದೆ ಇಂತಹ ಸಂಘಟನೆಯ ಮೂಲಕ ಮಹಿಳೆಯರು ಸೊಸೈಟಿ, ಬ್ಯಾಂಕ್ ಇನ್ನಿತರ ರೀತಿಯಲ್ಲಿ ಮುಂದುವರಿಯುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ನನಗಿಲ್ಲಿ ಅಘಾದ ಸ್ಫೂರ್ತಿ ಬಂದಿದೆ. ಮುಂದೆ ಸುಳ್ಯದಲ್ಲಿ ಇದೇ ರೀತಿಯ ಸಂಘಟನೆಯನ್ನು ಮಾಡಿ ಕಾರ್ಯಕ್ರಮಕ್ಕೆ ಕೊಡಗು ಜಿಲ್ಲೆಯಿಂದ ನಿಮ್ಮನ್ನು ಖಂಡಿತವಾಗಿ ಆಮಂತ್ರಿಸುತ್ತೇನೆಂದು ಸಭೆಯಲ್ಲಿ ಘೋಷಿಸಿದರು.

ಕೊಡಗು ಸಂಗಾತಿ ಪತ್ರಿಕೆಯ ಸಂಪಾದಕಿಯಾದ ಪಟ್ಟಡ ಶೀಲಾಮಣಿಯವರು ಮಾತನಾಡಿ ಈ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಗೌಡಸ್ತ್ರೀಯರ ಜಗತ್ತಿನಲ್ಲಿ ಇದೊಂದು ದಾಖಲೆ. ಗೌಡ ಮಹಿಳೆ ದೇಶದಲ್ಲಿ ಎಲ್ಲೇ ಇರಲಿ ಒಬ್ಬ ಮಹಿಳೇ ಕನಿಷ್ಠ ಒಂದು ಸದಸ್ಯತನವನ್ನು ಒಕ್ಕೂಟಕ್ಕೆ ನೊಂದಾಯಿಸಿ ಕೊಡುವಂತೆ ಸೂಚಿಸಿದರಲ್ಲದೆ, ಮಹಿಳೆಯರು ಸಹ ತಮ್ಮನ್ನು ತಾವು ಗುರುತಿಸಿಕೊಂಡು ರಾಜಕೀಯವಾಗಿ ಮೇಲೆ ಬರುವುದು ಸೂಕ್ತವೆಂದು ಸಲಹೆ ನೀಡಿದರು. ಪತ್ರಿಕೆ ಬಗ್ಗೆ ಮಾತನಾಡುತ್ತ ಜನಾಂಗದ ಹಿತ ಚಿಂತನೆ ಮತ್ತು ವಿವಿಧ ವಿನಿಮಯದ ಕೊರತೆಯ ಅನಿವಾರ್ಯತೆಯಿಂದ ಪತ್ರಿಕೆ ಹೊರ ಬಂದಿದೆ. ಮಹಿಳೆಗೆ ಮತ್ತು ಹೆಣ್ಣು ಮಕ್ಕಳಿಗೆ ಬರಹದಲ್ಲಿ ಹೆಚ್ಚಿನ ಆದ್ಯತೆ ನೀಡಿ ಬರಹಗಾರ್ತಿಯರನ್ನು ಹುಟ್ಟು ಹಾಕಿ ಸ್ಫೂರ್ತಿ ನೀಡಿದೆ. ಜನಾಂಗದ ಬಗ್ಗೆ 15 ದಿನಕ್ಕೊಂದು ಸಾರಿ ಕನಿಷ್ಠ 1/2 ಗಂಟೆಯನ್ನಾದರೂ ಜನಾಂಗದ ಬಗ್ಗೆ, ಮಹಿಳೆಯರ ಬಗ್ಗೆ ಚಿಂತಿಸಿದರೆ ಅದೆಷ್ಟೊ ಫಲ ಬರುತ್ತದೆಂದು ನುಡಿದರು.

ನಂತರ ಅತಿಥಿ ಭಾಷಣದಲ್ಲಿ ಅಮ್ಮಾಜೀರ ಲೀಲಾವತಿಯವರು ಮಾತನಾಡಿ ನನ್ನತನ ಹಾಗೂ ನಮ್ಮ ಆಚಾರ ವಿಚಾರದ ಬಗ್ಗೆ ಸಲಹೆ ನೀಡಿದರಲ್ಲದೆ ನಮ್ಮ ಸಂಸ್ಕೃತಿಯನ್ನು ಎತ್ತಿ ಹಿಡಿಯಬೇಕೆಂದರು.

ನೆರೆದಿದ್ದ ಮಹನೀಯರಿಗೆ ಮಾತನಾಡಲು ಅವಕಾಶ ಕಲ್ಪಿಸಿ ಕೊಟ್ಟ ಮಹಿಳಾ ಒಕ್ಕೂಟವು ಮಾತನಾಡಲು ಆಹ್ವಾನಿಸಿತು. ಮೊದಲಿಗೆ ನಮ್ಮ ಜನಾಂಗದ ಹಿರಿಯರು, ಜನಾಂಗದ ಮೊದಲ ಮಾಜಿ ಮಂತ್ರಿಗಳು, ಜನಾಂಗದ ಹಿತ ಚಿಂತಕರೂ ಆದ ದಂಬೆಕೋಡಿ ಚಿಣ್ಣಪ್ಪನವರು ಮಾತನಾಡಿ, "ಆದರ್ಶ ಮಹಿಳೆ" ಇದರ ಬಗ್ಗೆ ವಿವರಿಸಿದರಲ್ಲದೆ ಈ ಸಂಘಟನೆ ನೂರಾರು ವರ್ಷ ಬಾಳಲಿ ಎಂದು ಆಶೀರ್ವಾದ ಮಾಡಿದರು. ನಂತರ ಕೊಡಗು ಸಾಂಸ್ಕೃತಿಕ ಅಕಾಡೆಮಿಯ ಅಧ್ಯಕ್ಷರಾದ ತುಂತಜೆ ಗಣೇಶ್ ಮಾತನಾಡಿ ಮುಂದಿನ ನವೆಂಬರ್ ತಿಂಗಳಲ್ಲಿ ಎಲ್ಲಾ ಸಂಘ ಸಂಸ್ಥೆಗಳ ಜೊತೆ ಸೇರಿ ಬೃಹತ್ ಸಮ್ಮೇಳನವನ್ನು ನಡೆಸುವ ಅಭಿಪ್ರಾಯವಿದೆ ಎಂದರು. ಕೊಡಗು ಸಾಂಸ್ಕೃತಿಕ ಅಕಾಡೆಮಿಯ ಉಪಾಧ್ಯಾಕ್ಷರೂ ಆದ ಗುಡ್ಡೆಮನೆ ರಮೇಶ್ ತಮ್ಮ ವಾಕ್ಚಾತುರ್ಯದಿಂದ ಮಾತನಾಡಿ ಸ್ತ್ರೀಯೇ ಸರ್ವಶಕ್ತಿ, ಸ್ತ್ರೀಯೇ ಸಂಪತ್ತು, ಸ್ತ್ರೀಯೇ ಅಧಿದೇವತೆ, ಅಲ್ಲದೆ ಅವಮಾನವೇ ಈ ಸಂಘಟನೆಯ ಮೂಲ. ಈ ಸಂಘಟನೆ ಮುಂದುವರೆದು ಮಹಿಳಾ ಬ್ಯಾಂಕ್ ಸ್ಥಾಪನೆಯಾಗಬೇಕೆಂದು ಕರೆ ನೀಡಿದರು. ನಂತರ ಕೊಡಗು ಗೌಡ ಸಮಾಜದ ಅಧ್ಯಕ್ಷರು, ಕೊಡುಗೈ ದಾನಿಗಳು, ಭಾರಿ ಕಾಫಿ ಬೆಳೆಗಾರರು ಆದ ತೋಟಂಬೈಲು ನಾಣಯ್ಯನವರು ಮಾತನಾಡಿ ಜನಾಂಗದವರು ಯಾವ ರೀತಿಯಲ್ಲಿಯೇ ಮುಂದುವರಿದಿದ್ದರೂ ರಾಜಕೀಯವಾಗಿ ಮಾತ್ರ ಮುಂದುವರಿಯಲೇ ಬೇಕೆಂದು ಒತ್ತಿ ಒತ್ತಿ ಹೇಳಿದರು.

ಕೊನೆಯದಾಗಿ ಅಧ್ಯಕ್ಷರ ಭಾಷಣದಲ್ಲಿ ವಾರ್ಷಿಕೋತ್ಸವದ ಅಧ್ಯಕ್ಷತೆ ವಹಿಸಿದ ಪಡಿಕಲ್ಲು ಸೀತಮ್ಮ ಮಾದಪ್ಪ ನವರು ಮಾತನಾಡಿ ಸ್ತ್ರೀಯೇ ಶಕ್ತಿ ಸ್ವರೂಪ, "ಮಹಿಳೆ ಒಲಿದರೆ ನಾರಿ ಮುನಿದರೆ ಮಾರಿ" ಎಂಬ ಪದದ ಅರ್ಥವನ್ನು ಬಿಡಿಸಿ, ಹೇಳಿದರಲ್ಲದೆ ನಮ್ಮ ಸಂಸ್ಕೃತಿ ಮತ್ತು ಅರೆಭಾಷೆಯನ್ನು ಉಳಿಸುವುದಲ್ಲದೆ ಹಿಂದಿನಿಂದಲೂ ನಡೆದು ಬಂದ ಆಚಾರ ವಿಚಾರವನ್ನು ಚಾಚು ತಪ್ಪದೆ ಮುಂದುವರಿಸಲು ಮಹಿಳೆಯರಿಗೆ ಕಿವಿಮಾತು ಹೇಳಿದರು. ನಂತರ ಇಂತಹ ವೇದಿಕೆಯು ಮಹಿಳೆಯ ಪ್ರತಿಭೆ ಹೊರಹೊಮ್ಮಲು ಅನಿವಾರ್ಯ. ಸ್ತ್ರೀಯು ಮಾನಸಿಕವಾಗಿಯೂ, ನೈತಿಕವಾಗಿಯೂ ದುರ್ಬಲಳಲ್ಲ. ಶಾರಿರೀಕವಾಗಿ ಮಾತ್ರ ದುರ್ಬಲಳು. ಇಂತಹ ಉದಾತ್ತ ಧ್ಯೇಯ ಧೋರಣೆಯನ್ನು ಹೊತ್ತ ಗೌಡ ಮಹಿಳಾ ಒಕ್ಕೂಟದ ಕಾರ್ಯ ಸಾಧನೆಯನ್ನು ವಿಶೇಷವಾಗಿ ಶ್ಲಾಘಿಸಿದರು. ಇದೇ ಸಂದರ್ಭದಲ್ಲಿ ಪ್ರೊನಿಧ್ವನಿಯ ಮತ್ತು ಮಲೆನಾಡು ಮಲ್ಲಿಗೆಯ 25 ಕ್ಯಾಸೆಟ್‌ಗಳನ್ನು ಅಮ್ಮಾಜೀರ ಪೊನ್ನಪ್ಪ ನವರು ಮಹಿಳಾ ಒಕ್ಕೂಟಕ್ಕೆ ಉಡುಗೊರೆವಾಗಿ ನೀಡಿದರು.

ಜನಾಂಗದ ಸೇವೆಯ ಸ್ಮರಣಾರ್ಥವಾಗಿ ಕೊಡಗು ಸಂಗಾತಿ ಪತ್ರಿಕೆಯ ಸಂಪಾದಕಿ ಪಟ್ಟಡ ಶೀಲಾವಾಣಿ ಹಾಗೂ ಗೌರವ ಸಂಪಾದಕರಾದ ಪಟ್ಟಡ ಪ್ರಭಾಕರ, ದಂಪತಿಗಳನ್ನು ಮತ್ತು ಕಾವೇರಿ ನಾಡಿನ ಅಮ್ಮಾಜಿರ ಪೊನ್ನಪ್ಪ, ನೀಲಮ್ಮ ದಂಪತಿಗಳನ್ನು ವಿಶೇಷವಾಗಿ ಸನ್ಮಾನಿಸಿದಲ್ಲದೆ, ವಾರ್ಷಿಕೋತ್ಸವದ ಸಹಕಾರಕ್ಕಾಗಿ ಪಳ್ಳಿಪುರ ಭರತ್, ರೇಖಾ ದಂಪತಿಗಳನ್ನು, ಮಂದ್ರಿರ ನಾಣಯ್ಯ, ಚಂದ್ರಾವತಿ ದಂಪತಿಗಳನ್ನು, ದಂಬೆಕೋಡಿ ಸುಭಾಸ್, ಚಂದ್ರಾವತಿ ದಂಪತಿಗಳನ್ನು ಹಾಗೂ ಕೊಲ್ಯದ ರಾಮಪ್ಪ, ಭವನ ದಂಪತಿಗಳನ್ನು ಸನ್ಮಾನಿಸಲಾಯಿತು.

ತದನಂತರ ಹಲವಾರು ಸ್ಪರ್ಧೆಗಳು ಏರ್ಪಾಡಾಗಿದ್ದು, ಪ್ರಬಂಧ ಸ್ಪರ್ಧೆಯಲ್ಲಿ ಗೌಡ ಸಂಸ್ಕೃತಿ 'ಅಂದು ಇಂದು' ಪ್ರಥಮ ಬಹುಮಾನವನ್ನು ಪ್ರೊ|| ಪೂಜಾರಿ ಮೊಣ್ಣಪ್ಪನವರು, ದ್ವಿತೀಯ ಬಹುಮಾನವನ್ನು ಬೈತಡ್ಕ ಬೆಳ್ಯಪ್ಪನವರು, ತೃತೀಯ ಬಹುಮಾನವನ್ನು ನಾಟೋಳನ ದೇವಯ್ಯ ಮಾದಯ್ಯ ನವರು ಮತ್ತು ಸಮಾಧಾನಕರ ಬಹುಮಾನವನ್ನು ಉಳುವಾರನ ಸುರೇಶ್ ಕುಮಾರ್ ಪಡೆದರು. ಕರಕುಶಲತೆ, ರಂಗೋಲಿ ಹಾಗೂ ವಸ್ತುಪ್ರದರ್ಶನದಲ್ಲಿ ಭಾಗಿಗಳಾದವರಿಗೆ ಬಹುಮಾನವನ್ನು ನೀಡಲಾಯಿತು. ಅದರಲ್ಲಿಯೂ ವಿಶೇಷವಾಗಿ ಬೈತಡ್ಕ ಜಾನಕಿ ಬೆಳ್ಯಪ್ಪನವರ ರಚಿತ, ಜನಾಂಗದ ಮದುವಣಗಿತ್ತಿಯರು ಅಂದು ಇಂದು ಎರಡೂ ಜೊತೆ ಉಡುಪಿನ ಬೊಂಬೆಯ ಪ್ರದರ್ಶನವು ವಿಶೇಷ ಆಕರ್ಷಣೆ ಆಗಿತ್ತು.

ಸಂಸ್ಕೃತಿಯ ಅಂಗವಾದ ಪಟ್ಟೆವಿಳ್ಯ ಕೊಡುವ ಕಾರ್ಯಕ್ರಮ, ಹರಿಸೇವೆ ಕಾರ್ಯಕ್ರಮ, ಪದ್ಮಾವತಿ ಕಲ್ಯಾಣ, ಸಣ್ಣ ಸಣ್ಣ ನಾಮ, ವೆಂಕಟೇಶ್ವರ ಕಲ್ಯಾಣ ನೃತ್ಯರೂಪಕ, ಮದುವೆಯಲ್ಲಿ ಸಬ್ಬಮ್ಮ ದೇವತೆಗೆ ಹರಕೆ ಕಟ್ಟುವ ಹಾಡು, ಶ್ರೀ ಕೃಷ್ಣ ಪಾರಿಜಾತ ನೃತ್ಯರೂಪಕ, ರಂಗಪೂಜೆ ಮತ್ತು ಜ್ಯೋತಿ ಬೆಳಗೋಣಾ ಇದಲ್ಲದೆ ಅಮ್ಮಾಜೀರ ಪೊನ್ನಪ್ಪನವರ ಪೋನಿಟೈಲ್ ನೃತ್ಯ ಆಕರ್ಷಕವಾಗಿತ್ತು. ಒಕ್ಕೂಟವು ಇವುಗಳನ್ನು ನಡೆಸಿಕೊಟ್ಟು, ನಮ್ಮ ಜನಾಂಗದ ಸಂಸ್ಕೃತಿಯನ್ನು ಉಳಿಸುವಲ್ಲಿ ಯಶಸ್ವಿಯಾಗಿದ್ದರೆ, ಸಿನಿಮಾ ಗೀತೆಗಳ ಅಬ್ಬರದ ನೃತ್ಯ ರೂಪಕವು ಜನರ ಮನವನ್ನು ರಂಜಿಸಿತು.

ಸಮಾರಂಭದ ವಾರ್ಷಿಕ ಮಹಾಸಭೆ ಮತ್ತು ವಾರ್ಷಿಕೋತ್ಸವದ ನಿರೂಪಣೆಯನ್ನು ಕಟ್ರತನ ದಮಯಂತಿಯವರು ಉತ್ತಮ ರೀತಿಯ ಆಕರ್ಷಕ ಶೈಲಿಯಲ್ಲಿ ಮಾಡಿದ್ದಾದರೆ ನಂತರದ ಸಾಂಸ್ಕೃತಿಕ ಚಟುವಟಿಕೆಯ ನಿರೂಪಣೆಯು ಮಂಜಾಂಡ್ರ ರೇಖಾ ಉಲ್ಲಾಸ್ ನವರಿಂದ ಮಾಡಲ್ಪಟ್ಟಿತ್ತು. ಸುಮಾರು ಒಂದು ಸಾವಿರಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ನೆರೆದ ಈ ಮಹಿಳಾ ಸಮಾರಂಭವು ಬಹು ಆಕರ್ಷಣೀಯವಾಗಿತ್ತಲ್ಲದೆ ನೋಡಿದವರಿಗೆ ಮುದ ನೀಡಿತು. ಇಂತಹ ಉತ್ತಮ ರೀತಿಯಲ್ಲಿ ನಡೆಸಿದ ಕೊಡಗು ಗೌಡವತಿಯರ ಸಾಧನೆ, ಸಾಹಸ ಮೆಚ್ಚತಕ್ಕದ್ದೆ. ನಿಜವಾಗಲೂ ಖುಷಿ ಪಡುವಂತದ್ದೆ.

**- ಸಂಗಾತಿ ವರದಿ**

---

ಓದುಗರೇ,

ಸಂಸ್ಕೃತಿ ಮತ್ತು ಸಂಪ್ರದಾಯ, ಭಾಷೆಯ ಬಗ್ಗೆ ಉತ್ತಮ ಲೇಖನ ಹರಿದು ಬರಲೆಂದು ನಾವು ಆಶಿಸುತ್ತೇವೆ.

**- ಸಂಪಾದಕಿ**

ಪ್ರತಿಯೊಬ್ಬರ ಮನೆಯಲ್ಲಿರ ಬೇಕಾದ ಪತ್ರಿಕೆ

**- ಕೊಡಗು ಸಂಗಾತಿ**

## ಮನೆ ಮೇಲೆ ಮರ ಬೀತ್ !

ಗಾಳಿ ಮಳೆ ಸುರಾಕೆ ಮುಂದೆ ಮನೆ ಹಿಂದೆ ಇರುವ ಒಣಂಗಿಲ್ ಮರನ ಕಡ್ದ್ ಬೀಳ್ಕೊಕು. ಹೆಂಗೆ ಹೇಳ್ದ ಹೇಳಿ. ಮನೆ ಮೇಲೆ ಬಿದ್‌ಗಿದ್ದರೆ ಮನೆ ಹೊಡಿ ಆದು. ಮನೇಲಿರೋವೆಲ್ಲಾ ಗಂಯ್ಯ್ ಆವ್ತೊ. ಹಗಲಾದರೆ ಮನೆವು ಅಲ್ಲಿ ಇಲ್ಲಿ ಹೋಗಿದ್ದವೆ. ರಾತ್ರೆ ಮನಿ ಮರ ಬಿದ್ದರೆ? ಹಿಂಗೆಲ್ಲಾ ತಲೆ ಬಿಸಿ ಮಾಡಿಕಂಡ್ ಅಜ್ಜಪ್ಪ ಕೆಳಗೆ ಮನೆಗೆ ಹೋಗಿ "ಹೇ ಒಮ್ಮೆ ಬನ್ನಿರಾ, ಮನೆ ಹಿಂದೆ ಇರುವ ಮರನ ಒಮ್ಮೆ ಬುಡಾಂದ ಬೀಳ್ಸಿ ಕೊಡೀಂತ" ರಾಜನಕ್ಕಲೆ ಹೇಳ್ತ್. ರಾಜ ಮರ ಹತ್ತುದರ್ಲಿ, ಕೊಂಬೆ ಕಡೆದರ್ಲಿ ಭಾಳಾ ರುಸ್ತುರಿ. ಅಷ್ಟೇ ಅಲ್ಲ, ಹೆಜ್ಜೇನ್ (ದೊಡ್ಡ ಜೇನು) ಕಂಡವರ ತೋಟಲಿದ್ದರೂ ರಾತ್ರೆ ಮರಹತ್ತಿ ಕದ್ದ್‌ಕೊಯ್ಯುವ ಜಾಣ !

ರಾಜ ಹೇಳ್ತ್ : ಆತ್ ಅಜ್ಜಪಾ ಒಂದ್ ಹತ್‌ದಿನ ಕಳ್ಕಂಡ್ ಬನ್ನೆ. ಆ ಚಿತ್ರಗೂಡೆದ್ ವೀಳ್ಯ ಶಾಸ್ತ್ರ ಆಬುದ್ದಿ. ಮತ್ತೆ ಗುಳಿಗಂಗೆ, ಚವುಂಡಿಗೆ ಕೊಡಿಕೆ ಬೇರೆ ಉಟ್ಟು. ಸುಳ್ಯಲಿ ಒತ್ತೆಕೋಲ, ಭಾಮುಂಡ್ಕಲಿ ಹರ್ಸೇವೆಗೆಲ್ಲಾ ಹೋಕೆ ಉಟ್ಟು. ಆಗ ಅಜ್ಜಪ್ಪಾ ಹೇಳ್ತ್ : ಆಗಲಿ, ಅದೆಲ್ಲಾ ತೀರ್‍ಸಿಕಂಡ್ ಬಾ. ಬಾಕನ ಒಟ್ಟಿಗೆ ಒಬ್ಬನ ಕರ್‍ಕಂಡ್ ಬಾ. ಸರಿ, ವೀಳ್ಯಶಾಸ್ತ್ರನೂ ಮುಗ್ತ್. ಗುಳಿಗ, ಚವುಂಡಿಗೆ ಕೊಡ್ದೂ ಆತ್. ಒತ್ತೆಕೋಲ, ಹರ್ಸೆವೆಲ್ಲಾ ಮುಗ್ಸಿಕಂಡ್ ರಾಜ ಒಟ್ಟಿಗೆ ಒಬ್ಬನ ಕರ್‍ಕಂಡ್ ಮರ ಕಡೆಕೆ ಬಾತ್.

ಬಾಕನ ಉದ್ದದ ತಂತಿನೂ ತಾತ್. ಆಗ ಅಜ್ಜಪ್ಪ ಸೂರೂಲಿ ಕೊಂಬೆ ಕಡ್ಕಣಿ. ಮರ ಯಾವ ಕಡೆಗೆ ಬೀಳ್ದೂತ ಅಂದಾಜಿ ಮಾಡಿಕಡೆನಿ. ಗಾಳಿ ಹೆಂಗೆ ಬೀಸೆದೆತ ನೋಡಿಕಂಡ್ ಕೆಲ್ಸಮಾಡಿ. ಎಚ್ಚರಂದ ಮಾಡಿ. ಮರ ಎಲ್ಲಾರ್ ಮನೆಕಡೆ ವಾಲಿ ಬುದ್ದುತ ಎಚ್ಚರ ಹೇಳ್ತ್. "ಅಯ್ಯೋ ಅಜ್ಜಪಾ, ನೀವ್ ಇದ್ರ ಗ್ಯಾನ ಬುಟ್‌ಬುಡಿ. ನಾಯೆಂತೆಂತಾ ಮರನೆಲ್ಲಾ ಹೆಂಗೆಂಗೆಲ್ಲಾ ಬೀಳ್ಸೊಳೆ. ಇದ್ಯಾವ ಮರ ಹೇಳಿ? ಕೊಂಬೆನ ಕಡೆಕುತ ಇಲ್ಲೆ. ಹಂಗೇ ಬೀಳ್ಸಿಬುಟ್ನನೆ. ನೀವ್ ನೋಡಿಕಂಡಿರಿಂತ ಹೇಳಿ ಜೊತೆಗಾರ ಇತ್ತಲ್ಲ ಅವನ ಹೆಸ್ರ್ ಚುಂಡಯ್ಯಂತ ಅವಂಗೆ ಮರಕ್ಕೆ ಗಡಿ ಹಾಕ್‌ರಾಂತ ಹೇಳ್ತ್. ಚುಂಡಯ್ಯನೋ ರಾಜ ಹೇಳ್ಳಂಗೆ ಕೇಳ್ವ ಸ್ವಂತ ಮೆದುಳೇ ಇಲ್ಲದ ಪೈಕಿ. ಕಡಿರಾಂತ ಹೇಳಿಕೆ ಕಡೆದು. ಬುಡ್‌ರಾಂತ ಹೇಳಿರೆ ಬುಡ್ದು. ನಿಲ್ಸ್‌ರಾಂತ ಹೇಳಿರೆ ನಿಲ್ಸುವಂವ. ಸರಿ, ರಾಜ ಮರಕ್ಕೆ ಗಡಿ ಹಾಕ್‌ಂತ ಹೇಳ್ತಲ್ಲ ಹಂಗೆ ಕೊಡ್ಲಿ ತಕ್ಕರೆಡ್ ಗಡಿ ಹಾಕಿಕೆ ಸುರ್ ಮಾಡೇ ಬುಡ್ತ್. ಒಂದ್ ಹತ್ ಗಡಿ ಹಾಕಿರ್ದು. ಆಗ ರಾಜ ಕೊಡ್ಲಿ ತಕ್ಕಂಡ್ ಓಡಿ ಬಂದ್ ನಿಲ್ಸ್‌ರಾ ನಿಲ್ಸ್. ಮರಕ್ಕೆ ತಂತಿ ಕಟ್ಟೊನೊಂತೇಳಿ ತಂತಿ ಕಟ್ಟಿ ಎಳ್ದ್ ಪಣ್‌ಪುಳಿ ಮರಕ್ಕೆ ಕಟ್ಟಿದೊ. ಇಂವ ಲಟಾ ಪಟಾಂತ ಕಡೆಕನ ರಾಜ ಮರದ ಬುಡನೊಮ್ಮೆ ಕೊಡಿನೊಮ್ಮೆ ನೋಡಿಕಂಡೇ ನಿತ್‌ಕಂಡತ್. ಈಗ ನಿಲ್ಸ್‌ರಾ. ಕಡೆಬೇಡ. ಆ ಕಡೆಂದ ಗರಗಸ ಇಸನೊ. ಅಜ್ಜಪಾ ನಿಮ್ಮತ್ರ ಇರುವ 'ಅಡ್ಡ ಮುರಿ' ಬಾಳ್‌ನ ಕೊಡೀಂತ ಕೇಳಿಕಂಡ್ ಗರಗಸ ಇಸಿದೊ. ಗರ್‌ಬರ್ ಗರ್‌ಬರ್‌ಂತ ಕೊಯ್ಯಕೆ ಸುರು ಮಾಡಿಕಂಡೊ. ಚುಂಡಯ್ಯನ ಹೊಟ್ಟೆ ಸೇರಿದ್ದ ಸೇಂದಿ ಬೆವರಾಗಿ ಹರೆಕೆ ಸುರಾತ್. ಥತ್ ಹಾಳ್ ಬೆವುರುಂತ ಬಯ್ಯಂಡ ಚುಂಡಯ್ಯ ಶರಟ್ ಬಿಚ್ಚಿ ಗುತ್ತಿ ಮೇಲೆ ಇಸಿ ಪುನಾ ಕೊಯ್ಯಕೆ ಸುರು ಮಾಡ್ತ್. ಅಷ್ಟೊತ್ತಿಗೆ ಬೋಜಪ್ಪ ಎತ್ತಳೊ ಹೋಗಿದ್ದವು ಇತ್ತ ಬಂದೊ. ಇವು ಯಂತ ಮಾಡ್ತಾ ಒಳೊಂತ ಹತ್ರ ಬಂದೊ. ಮರ ಕೊಯ್ಯುದರ ನೋಡ್ದ ಬೋಜಪ್ಪ "ಅಯ್ಯೋ ರಾಜ, ಒಮ್ಮೆ ನಿಲ್ಸಿರಾ ಮರ ಮನೆ ಕಡೆ ವಾಲಿಕಂಡುಟ್ಟು. ಬಿದ್ದರೆ ಮನೆ ಸರ್ವನಾಶ ಆದೆ. ನಂಗಂತೂ ಇದೆಲ್ಲಾ ನೋಡಿಕೆ ಬೊತ್ತದೆ. ಮುಂದೇ ನಂಗೆ ಬಿ. ಪಿ. ಬೇರೆ. ಇನ್ ಇಲ್ಲಿದ್ದರೆ ಜಾಸ್ತಿ ಆದುತ ಬೋಜಪ್ಪ ಹೇಳಿಕಂಡ್ ಹೋಗೇಬುಟ್ಟೊ. ಅಜ್ಜಪ್ಪಂಗೆ ತಕುಪ್ರಕು ಸುರಾತ್. ಯಂತರಾ ರಾಜ? ನಿಂಗೆ ಆಗಳೇ ಹೇಳ್ದೆ. ಆ ಬಗ್ಗಿದ ಕೊಂಬೆಗಳ ಕಡ್ಕಣೀಂತ. ನೀ ನನ್ನ ಮಾತ್ ಕೇಳ್ತಲೆ. ಹಿಂಗೆ ಹೇಳಕನ ರಾಜ ಚುಂಡಯ್ಯಂಗೆ ಮರಹತ್ತಿ ಕೊಂಬೆ ಕಡಿರಾಂತ ಹೇಳ್ತ್. ಕೊಡ್ಲಿನ ಅತ್ತ ಬಿಸಾಕಿದ ಚುಂಡಯ್ಯ ಮರ ಹತ್ತಿಕೆ ಹೋತು. ಥೂ ನಿನ್ನ ನಿಂಗೆ ಸೊಯ ಉಟ್ಟಾ ಇಲ್ಲೆಯಾ? ಮರ ಈಗಳೋ ಆಗಳೋ ಬೀಳಿಕೆ ಆವುಟು. ಈಗ ಕೊಂಬೆ ಕಡೆಕೆ ಮರ ಹತ್ತಿಯ? ನಿನ್ನ ಸೊಂಟ ಮುರೆವೆಂತ ಅಜ್ಜಪ ದೊಣ್ಣೆ ತಕ್ಕಂಡ್ ಅತ್ತ ಹೋತು. ಚುಂಡಯ್ಯಂಗೆ ಎಲ್ಲಾ ಅಲ್ಲೇ ಆದಂಗೆ ಆಗೋತು. ರಾಜ ಬೇರೆ ಕೊಂಬೆ ಕಡೀಂತ ಹೇಳ್ತಾ ಉಟ್ಟು. ಈ ಅಜ್ಜ ಬೇರೆ ದೊಣ್ಣೆ ಎತ್ತಿ ನಿತ್ತುಟು. "ರಾಜಣ್ಣಾ ನಾಯೆಂತ ಮಾಡಲೀಂತ ಕೇಳ್ತ್. ನಿನ್ನ ಮನೆ ಹಾಳಾಗ. ಇಳಿನೆ ಒಮ್ಮೆತ" ರಾಜ ಬೊಯ್ಯಕನ ಅಂವ ಜರ್‍ರಂತ ಜಾರಿ ಕೆಳಗೆ ಬಾತ್.

ಒಂದ್ ಗಾಳಿ ಬೀಸಿತ್. ಮರ ಜೂಂಗಿತ್. ಮನೇಲಿದ್ದವೆಲ್ಲಾ ಹೊರಗೆ ಬನ್ನಿನೇ ಏ ಮಕ್ಕಳೆ. ಅವ್ವ ಎಲ್ಲಿನೇ? ಆ ಕೂಸುನ ಕರ್‍ಕಂಡ್ ಹೊರಗೆ ಬನ್ನಿನೇಂತ ಅಜ್ಜಪ್ಪ ಬೊಬ್ಬೆ ಹಾಕಿತ್. ರಾಜ ಈಗ ಏನ್ ಮಾಡೊಕು? ಗರಗಸಂದ ಕೊಯ್ಬಿದ್ದೊ ನೋಡಿ, ಆ ಜಾಗಕ್ಕೆ ಆಪು ಹೊಡ್ತ್. ಇನ್ ಮನೆಕಡೆ ಬೀಳಿಕಿಲ್ಲೆ. ಹೆದ್ರ್‌ಬಡೀಂತ ಧೈರ ಹೇಳ್ತ್. ಅಷ್ಟೇ ಅಲ್ಲ "ಅಜ್ಜಪ್ಪಾ ಇದ್ ಹಳೇ ಮನೆ. ಒಂದ್ ಸಮಯ ಮರಮನಿ ಮನೆ ಮೇಲೆ ಬಿದ್ ಮುರ್ದಕೆ ನೀವ್ ಕೂಡ್ಲೆ ನಷ್ಟ ಪರಿಹಾರಕ್ಕೆ ಒಂದ್ ಅರ್ಜಿ ರೆಡಿಮಾಡಿ. ಹೆಂಗೊ ಪರಿಹಾರ ಸಿಕ್ಕುದು. ಇಲೆಕ್ಷನ್ ಹತ್ರ ಬೇರೆ ಉಟ್ಟು" ಹಿಂಗೆ ಲಾಯ್‌ಲಗ್‌ಡಿ ಹೇಳಕನ ಅಜ್ಜಪಂಗೆ ಎಲ್ಲಿತ್ತೊ ಸಿಟ್. ನಿನ್ನ ಮಂಡೆನ ಹೋಳು ಮಾಡೊಕಾ? ನಾವ್ ಬಾಳಿಬದ್ಕಿದ ಮನೆ ಮುರೆಕೆ ಹೊರ್‍ಟೊಳಾಂತ ರೇಗಾಡಕನ ರಾಜಂಗೆ ಗರ್ಭ ನಡ್ಗಿಹೋತು. ಹಿಂಗಿರಕನ ಮರ ಮತ್ತೊಮ್ಮೆ ಜೂಂಗಿತ್. ಅಜ್ಜಪ ಕಂಡ ಕಂಡ ದೇವ್ರಿಗೆಲ್ಲಾ ಹೇಳಿಕಂಡತ್. ಈಗ ಹೊಸಾ ದೇವ್ರುಗಳೂ ಒಳಲ್ಲಾ, ಆ ದೇವ್ರುಗಳಿಗೂ ಹೇಳಿಕಂಡ್‌ತ್. ಹೆಣ್‌ನ ಕರ್ದ್ ಹೇಳ್ತ್ : ಆದದ್ದೆನ ಬುಡ್‌ನೆ. ಮರದ ಕೊಂಬೆ ಹಂದಿಗೂಡಿಗೆ ಬಿದ್ದರೆ ಹಂದಿನೂ ಇಲ್ಲೆ, ಮರಿಗಳೂ ಸಾಯುವೊ. ಓಡ್ ಓಡ್‌ತ ಹೇಳಕನ "ಇವು ಆಕಿಲಪ್ಪಾ ಜೀವ ಇರುವಂಗೆ ಕೊಂದು ಬುಡುವೊಂತ "ಹೇಳಿಕಂಡ್ ಓಡಿ ಹೋಗಿ ಹಂದಿಗೂಡ್‌ದ್ ಬಾಗ್ಲ್ ಬಿಚ್ಚಿತ್. ದಡ್ಡೆ ಮರಿಗಳ ಕರ್‍ಕಂಡ್ ಗರ್‌ಗುರ್‌ಂತ ಹೇಳಿ ಕಂಡ್ ಅಲ್ಲಿ ಇಲ್ಲಿ ಸುತ್ತಾಡಿಕಂಡ್ ಮರಕಡೆ ತಿದ್ದಲ್ಲಾ ಅಲ್ಲಿಗೇ ಬಂದ್‌ಬುಟ್ಟೊ. ಅಷ್ಟೊತ್ತಿಗೆ ಎಲ್ಲಿತೋ ಟಾಮಿನಾಯಿ ಬೊಗಳಿಕಂಡ್ ಮರದ ಕಡೆ ಓಡಿ ಬಾತ್. ಇದೆಲ್ಲಾ ಆಕನ ಅಜ್ಜಿ ಎಲ್ಲಿ ನನ್ನ ಹಂದಿ ಮರಿಗಳ ನಾಯಿ ಹಿಡ್ದು ಬುಡ್ದೋತ ನಾಯಿನ ಓಡ್ಸಿಕೆ ಮರದ ಹತ್ರ ಓಡ್ತ್. ಏಯ್ ನಿನ್ನ ಸುಡಿಕೆ, ಬಾನೇ ಇತ್ತ. ಬೀಳುವ ಮರದ ಹತ್ರ ಹೋ ಬೇಡನೇಂತ ಅಜ್ಜಪ ಬೊಬ್ಬೆ

ಹೊಡ್ಕಂಡ್ ದೊಣ್ಣೆ ಕುತ್ತಿಕಂಡ್ ಹೆಣ್‌ನ ಎಳ್ಕಂಡ್ ಬಾಕೆ ಮರದ ಬುಡಕ್ಕೇ ಹೋತು. ಹಿಂಗೆ ಹೋದುಕೂ, ಮರ ಲಟ್ ಲಟ್ ಸದ್ ಮಾಡಿಕಂಡ್ ಜೂಂಗಿಕಂಡ್ ಜೂಂಗಿಕಂಟ್ ಪಣ್‌ಪುಳಿ ಮರ ಎಳ್ಕಂಡ್ ಎಳ್ಕಂಡ್ ಲಡಬಡೊಂತ ಬಿದ್ದೇ ಬೀತ್. ಮನೆ ನಡೂಗೆ ಬಿದ್ದ್ ಮನೆಪೂರ ಹೊಡಿ ಹೊಡಿ!! ಹಲ್ ಕಚ್ಚಿಕಂಡ್ (ಸೆಟ್ಟ್‌ಹಲ್ಲ್) ರಾಜನ ಕಡೆ ಅಜ್ಜಪ ತಿರ್‌ಗ್ಗಿತ್. ಆಗ ರಾಜ ತಿರ್‌ಗ್ಗಾಸ್‌ಲಿ ಓಡ್ತಾ ಇದ್ದಂವ ಒಮ್ಮೆ ತಿರ್‌ಗ್ಗಿ ನೋಡ್ತಾ ಇತ್. ಚುಂಡಯ್ಯ ಶರಟ್ ಬುಟ್ ಎತ್ತ ಓಡಿ ಹೊತೋ ಗೊತ್ಲೆ. ಅಜ್ಜಪ ಎದೆ ಎದೆ ಹೊಡ್ಕಂಡ್ ಮರ ಕಡ್ದ ಕೊಡ್ಲಿನ ರಾಜ ಓಡ್ದ ದಾರಿಕಡೆ ಬೀಸಿ ಹೊಡ್ತ್. ಆಯ್ಯೋ ನನ್ನ ಮನೆ ಹಾಳಾತಲ್ಲಾಂತ ಬೊಬ್ಬೆ ಹೊಡ್ತ್. ನಿನ್ನ ಎದೆ ಸೀಳದೆ ಬುಡಿಕಿಲ್ಲೇಂತ ನೆಲಕ್ಕೊಮ್ಮೆ ಒದ್ದತ್. "ನೀವು ಯಂತಕೆ ಈಗೀಗ ಹಿಂಗೆ ನಿದ್ದೆಲಿ ಮಾತಾಡ್ರೆ? ಸುಮ್ಮನೆ ಮಲ್ಗಿಂತ" ಅಜ್ಜಿ ಅಜ್ಜನ ಮೈ ಮೇಲೆ ಕಂಬ್ಳಿ ಹೋಸಿತ್.

ಅಜ್ಜಪ್ಪ ಕಂಡ ಕನ್ಸ್‌ನ ಅಜ್ಜಿ ಒಟ್ಟಿಗೆ ಹೇಳಿಕಂಡ್ ಕೆಟ್ಟ ಕೆಟ್ಟ ಕನ್ಸ್‌ಗ ಯಾಕೆ ಬಂದದೆಯೋಂತ ಬೆವುರು ಉಜ್ಜಿಕಂಡ್ ಕಂಬುಳಿನ ಕರೆಗೆ ಹಾಕಿತ್ ! ಅಷ್ಟೊತ್ತಿಗೆ ಮರಲಿ ಕುದ್ದ ಕೋಳಿಯೂ ಕೂಂಗಿತ್. ಅಜ್ಜಪ್ಪನ ಕಡೇ ಪಿಳ್ಳಿ ತೊಟ್ಲುಗೆ ಕಾಲ್ ಬಡ್ಕಂಡ್ ಬಟ್ಟೆ ಚಂಡಿ ಮಾಡಿಕಂಡ್ ಮರ್‌ಡ್‌ತಾ ಇತ್.

ಬಿ. ಆರ್. ಜೋಯಪ್ಪ, ಮದೆ

✤✤✤✤✤✤✤✤✤✤✤✤✤✤✤✤✤✤✤✤

## ಹೆಣ್ಣು ಮಕ್ಕಳಿಗೆ ಬುದ್ಧಿವಾದ – 1

ಮುತ್ತಂತ ಮಾತೊಂದ ಹೇಳುವೆ ತಂಗ್ಯಮ್ಮಾ
ಮುತ್ತೆಂದು ಆರಿಸಿಕೊಂಡು ಪೋಣಿಸಿ ಮಾಲೆಯ ಧರಿಸಮ್ಮಾ
ತಾಯಿಯ ಮನೆಯ ಹೆಸರನು ಉಳಿಸಮ್ಮಾ
ಗಂಡನ ಮನೆಯ ಕೀರ್ತಿಯ ಬೆಳೆಸಮ್ಮಾ ||ಮುತ್ತಂತ||

ಅತ್ತೆ ಮಾವರೆ ತಂದೆ ತಾಯಿ
ಮನೆಯೆ ಗುಡಿಯು ಗಂಡನೆ ದೇವರು
ವಾರಗೆಯವರೆ ಅಕ್ಕ ತಂಗಿಯರು
ಭಾವ ಮೈಧುನರೆ ಅಣ್ಣ ತಮ್ಮಂದಿರು ||ಮುತ್ತಂತ||

ಕಾರ್ಯದಲಿ ನೀ ದಾಸಿಯ ಹಾಗಿರು
ಸಲಹೆಯ ನೀಡುವಲ್ಲಿ ಮಂತ್ರಿಯಂತಿರು
ಭೋಜನ ಸಮಯದಲ್ಲಿ ತಾಯ್ತನ ತುಂಬಿರಲಿ
ಶಯನ ಕಾಲದಲ್ಲಿ ವೇಶ್ಯೆಯ ಹಾಗಿರು ||ಮುತ್ತಂತ||

ಕ್ಷಮೆಯ ನೀಡುವಲ್ಲಿ ಭೂಮಿತಾಯಿಯಂತಿರು
ಈ ಐದು ಮುತ್ತುಗಳ ಸದಾ ನೀ ಧರಿಸಿರು
ಮುದ್ದಿನ ಮಕ್ಕಳ ಮಾತೆಯಾಗಿರು
ಮುತ್ತು ಧರಿಸಿದ ಮುತ್ತೈದೆಯಾಗಿರು ||ಮುತ್ತಂತ||

ರಚನೆ : ಬಿಟ್ಟೀರ ಚೋಂದಮ್ಮ ಶಂಭು

## ಹೆಣ್ಣು ಮಕ್ಕಳಿಗೆ ಬುದ್ಧಿವಾದ – 2

ಮಲೆನಾಡ ಮನೆಯಲ್ಲಿ ಅರಳಿದ ಮಲ್ಲಿಗೆ
ಹೊಸ ಬಾಳಿಗ ಹೆಜ್ಜೆ ಇಡು ನೀ ಮೆಲ್ಲಗೆ
ನೀ ನಡೆವ ಹಾದಿಯಲಿ ಹೂವಿನ ಮಳೆ ಬರಲಿ
ನೀ ಹತ್ತಿದ ಮನೆಯಲ್ಲಿ ಹಾಲ್ಜೇನು ಹೊಳೆ ಹರಿಯಲಿ ||ಮಲೆನಾಡ||

ತಾಯಿಯ ಮನೆಯ ಮುದ್ದೀನ ಮಗಳೆ
ಅತ್ತೆಯ ಮನೆಯ ಮುತ್ತಾಗು ಮಗಳೆ
ಹಿರಿಯರಲಿ ಗೌರವ ಎಂದೆಂದು ಇರಲಿ
ಕಿರಿಯರಲಿ ಎಂದಿಗೂ ಅಕ್ಕರೆ ಇರಲಿ ||ಮಲೆನಾಡ||

ತಂಬಿಗೆ ಹಾಲಿಗೆ ಹುಳಿ ಹಿಂಡದಿರು ಮಗಳೆ
ತುಂಬಿದ ಮನೆಯೆಂದೂ ಒಡೆಯದಿರು
ತುಂಬು ಚಂದ್ರನ ಹಾಗೆ ನಗುತಿರು ಎಂದೆಂದೂ
ತುಂಬಿದ ಬಾಳುವೆ ಮಾಡಮ್ಮ ಮಗಳೆ ||ಮಲೆನಾಡ||

ವಾದ ಮಾಡುವ ಗಂಡನೆದಿರು ವಾದಿಸದಿರು
ನೆರೆ ಮನೆಗೆ ಹೋಗಿ ನೀ ದೂರದಿರು
ಮನೆಯೊಳಗಿನ ಗುಟ್ಟು ಹೊಸಿಲು ದಾಟದೆ ಇರಲಿ
ರಟ್ಟು ಮಾಡಿ ನೀ ಕೆಡದಿರು ಮಗಳೆ ||ಮಲೆನಾಡ||

ಮನೆಯವರು ನೆರೆಯವರು ಕರಕರೆಯ ಮಾಡಿದರೆ
ಕಣ್ಣೀರು ಕರೆಯದಿರು ಗಂಡನಿದಿರು
ಕಷ್ಟ ಕೋಟಿಯೆ ಬರಲಿ ಗಟ್ಟೀ ಮಾಡಮ್ಮ ಮನಸು
ತಾಳಿದರೆ ಕಾಣುವೆ ಸಂಸಾರದೀ ಸುಖ ||ಮಲೆನಾಡ||

ಹತ್ತು ಕಟ್ಟುವ ಬದಲೊಂದು ಮುತ್ತು ಕಟ್ಟುವ ಹಾಗೆ
ಮುದ್ದು ಮಕ್ಕಳೆರಡು ಪಡೆಯಮ್ಮಾ ಮಗಳೆ
ಮುಂಜಾನೆ ಮುಸ್ಸಂಜೆ ಮುಸುಕೆಳೆದು ಮಲಗದಿರು
ಸಂಧ್ಯಾಕಾಲದಿ ಶಿವನ ನೆನೆ ಮಗಳೆ ||ಮಲೆನಾಡ||

ಬೆಚ್ಚಾನೆ ಮನೆ ಇರಲಿ ವೆಚ್ಚಕ್ಕೆ ಹೊನ್ನಿರಲಿ
ಪತಿ ಇಚ್ಛೆ ಅರಿತು ನಡೆದರೆ ಮಗಳೆ
ಕಿಚ್ಚಿಕ್ಕು ಸ್ವರ್ಗಕ್ಕೆ ನಿನಗಿಲ್ಲೇ ಸ್ವರ್ಗ
ನೂರ್‌ಕಾಲ ಬಾಳಮ್ಮ ಹಾಯಾಗಿ ಮಗಳೆ ||ಮಲೆನಾಡ||

ರಚನೆ : ಬಿಟ್ಟೀರ ಚೋಂದಮ್ಮ ಶಂಭು

ಕೊಡಗು ಸಂಗಾತಿ, ಪಾಕ್ಷಿಕ ಅನ್ನು ಕೊಂಡು ಓದಿರಿ.

# ಕರಿಚಿನ್ನ -ಧಾರಾವಾಹಿ-26

ಮೂಲಕಥೆ : ಅಶ್ವಥಿ ಅರವಿಂದ್
ಅರೆಭಾಷೆಗೆ : ಎಂ. ಇ. ಮಹಮ್ಮದ್

ಇಲ್ಲಿಯವರೆಗೆ.........

ಬೋರುಗುಡ್ಡೆ ದೇವಯ್ಯ ರಾಡಿ ಬದ್ದುನ ಕ್ಯಾಂಬರ್‌ಗೆ ಕರ್‌ಕಂಡ್ ಹೋಗಿ ಏನೋ ಹೇಳ್ದೆ. ಬದ್ದು ತಲೆ ಅಲ್ಲಾಡಿಸಿದೆ. ಜೀವನ್ ಹಾಸ್ಪಿಟಲ್ಲಿಗೆ ಹೋನೆಂತೇಳಿ ಪೋಲೀಸ್ ಸ್ಟೇಷನ್ನಿಂದ ಡ್ಯಾಡಿಗೆ ಹೇಳಿ ಹೊರ್ಟ್ಪದೆ. ಪೂರ್ಣ್ವ ನೆಟ್ಟಂಗೆ ನಾಡ್‌ಕೊಲ್ಲಿ ಮಾದಪ್ಪನ ಮನೆಗೆ ಹೋಗಿ ಮೀರನೊಟ್ಟಿಗೆ ಸೊಲ್ಪ ಹೊತ್ತು ಮಾತಾಡಿ ಕಾಪಿ ಕುಡ್ದ್ ಹೊರ್ಟ್ಪದೆ. ಗಾಳಿಮರ ಸೋಮಯ್ಯನ, ಅವನ ಮಗಳು ನೀಲೂನ ಪೋಲಿಸ್‌ನೊವ್ರು ಮನೆಗೆ ಬಿಟ್ಟು ಬಂದವೆ. ಬೋರುಗುಡ್ಡೆ ದೇವಯ್ಯ ಕಾರ್ ತಕಂಡ್ ಪೋಲಿಸ್ ಸ್ಟೇಷನ್ನಿಗೆ ಹೋದೆ. ಚಂಗುಮಣಿ ಬರೀ ಚಡ್ಡೀಲಿ ಲಾಕಪ್ ಒಳಗೆ ನಿಂತಿದ್ದದೆ. ಎಸ್.ಪಿ. ಅವಂಗೆ ಒಂದ್ ಒತ್ತ ಕೊಟ್ಟ್ ಎಳ್‌ಕಂಡ್ ಬಂದದೆ...

ಮುಂದೆ ಓದಿ......

"ಏರಾ, ಲೋಫರ್, ಸೂ...... ಮಂಚ, ನೀನ್ ಒಂದ್ ರೇಪ್‌ಗಾಗಿ ನನ್ನ ಮಂಚ ರಂಜನ್‌ಗೆ ಫಾಸಿ ಕೊಟ್ಟಿ? ಅವನ ಕೊಂದ್ ಬುಟ್ಟ್ ನೀನ್ ಜೋರಾಗಿ ಒಮ್ಮೆ ನೆಗಾಡಿಕು ಸಾಕ್. ಆದರೆ ಈ ಬೋರುಗುಡ್ಡೆ ದೇವಯನ ಮುಟ್ಟಿದವು ಯಾರ್ ಇಂದ್ ಜೀವಲಿ ಉಳ್ತ್‌ಲೆತ ಹೇಳ್ದ್‌ನ ತಿಳ್ಕ ನಿಂಗು ಅದ್ ಸದ್ಯಲೇ ಅನುಭವಕ್ಕೆ ಬಂದದೆ ನೋಡಿಕ".

"ಕೊಲೆ ಮಾಡಿಕು ಮಾಡ್ದ ಹಣ ತಕಣಿಕು ತಾನೇ ನೀವು ನನ್ನ ಜಾಮೀನಿಲಿ ಬುಡ್ಸಿದ್"

ಚಂಗುಮಣಿ ಗಡ್ಸ್ ಸ್ವರಲೇ ಹೇಳ್ತ್.

"ಥೂ...... ಕಳ್ಳ ಸೂ.......... ಮಂಚ"

ಬೋರುಗುಡ್ಡೆ ದೇವಯ್ಯ ಕ್ಯಾಕರ್ಸಿ ಅವ್ನ ಮೊಖಕ್ಕೆ ಉಗ್ತ್.

ತಕ್ಷಣ ಇನ್ಸ್‌ಪೆಕ್ಟರ್ ರಾಮಮೂರ್ತಿ ಹೋಗಿ ಚಂಗುಮಣಿಗೆ ಒಂದ್ ಒತ್ತ ಮತ್ತೆ ದವಡೆಗೆ ಎರ್ಡ್ ಬುಟ್ಟಿತ್. ಸಬ್ ಇನ್ಸ್‌ಪೆಕ್ಟರ್ ಪ್ರಭುದಾಸ್ ಸನ ಚಂಗುಮಣಿಗೆ ಲಾಯಿಕ ಹೊಡ್ತ್.

ಪೆಟ್ಟ್ ತಡೆಯಕೆ ಬೊತ್ತದೆ ಅವ ಕುಡಿಯಕೆ ನೀರು ಕೇಳ್ತ್.

" ಕೊಡ್ಬಡಿ, ಆ ದ್ರೋಹಿಂಗೆ, ನೀರ್ ಕೊಡಿಕೆ ಬೊತ್ತ್."

ದೇವಯ್ಯ ಇನ್ಸ್‌ಪೆಕ್ಟರ್‌ಗೆ ಹೇಳ್ತ್.

ನೀರ್ ಸಿಕ್ಕದೆ ಚಂಗುಮಣಿಗೆ ದೊಂಡೆ ಆರಿಹೋತ್. ತುಟಿ ಒಣಗಿ, ಎರಡ್ ನಿಮಿಷಲಿ ಚಂಗುಮಣಿ ಸೊಯತಪ್ಪಿ ಅಡಿಗೆ ಬಿದ್ದ್ ಹೋತು.

ಅವನ ಪಜೀತಿ ಕಂಡ್ ಬೋರುಗುಡ್ಡೆ ದೇವಯ್ಯನ ಹೃದಯ ತಂಪಾತ್. ಅವ ಒಳ್ಳೆ ಖುಷಿಲೀ ಪ್ಯಾಕ್ಟ್ ಮಾದಯ್ಯನ ಹತ್ತಿರ ಹೋತ್.

ಮಾದಯ್ಯ ಲಾಕಪ್ ಸೆಲ್ಲ್‌ದ್ ಕಬ್ಬಿಣದ ಗೇಟ್‌ನ ಹಿಡ್ಕಂಡ್ ನಿತ್ತಿತ್. ಬೋರ್‌ಗುಡ್ಡೆ ದೇವಯ್ಯನ ಕಾಂಬೊದ್ ಮೊಖದ ಕಲರ್ ಬದಲಾತ್.

" ಮಾಡದ ತಪ್ಪಿಗೆ ಸುಮ್ಮನೆ ಯಾಕೆ ಮಾರಾಯ ಶಿಕ್ಷೆ ಅನುಭವ್ಸುದು?"

ದೇವಯ್ಯ ಒಂದು ತರ ವ್ಯಂಗ್ಯದ ರೀತಿಲಿ ಕೇಳ್ತ್.

"ನಮ್ಮ ರಂಜನ್‌ನ ಮರ್ಡರ್ ಕೇಸ್‌ಲಿ ನಿಂಗೆ ಸಂಬಂಧ ಇಲ್ಲೆತ ನಂಗೆ ಗೊತ್ತುಟು. ನೀನ್ ಬಾಳ ಒಳ್ಳೆವಾಂತ ಸ ಗೊತ್ತುಟು. ಈ ಬೋರುಗುಡ್ಡೆಲಿ ನಿನ್ನ ದೂರವ್ರು ಯಾರೂ ಇಲ್ಲೆ. ಒಂದು ಕೊಲೆ ಕೇಸ್‌ದ್ ವಿಚಾರಲಿ ಸುಮ್ಮನೆ ಜವಬ್ದಾರಿ ವಹಿಸಿಕಂಡ್ ಯಾಕೆ ನಿನ್ನ ಬಾಳ್‌ನ ನೀನೆ ಹಾಳ್ ಮಾಡಿ ಕೊಂಬೊದು? ಕೇಸ್ ರಿಜಿಸ್ಟರ್ ಆಕೆ ಮೊದ್ಲೆ ಹೊರಗೆ ಬಾಕೆ ನೋಡ್. ನನ್ನ ಸಹಾಯ ಬೇಕಿದ್ದರೆ ಹೇಳ್?"

ಬೇಡ ಬೇಡ ರಂಜನ್‌ದ್ ಕೊಲೆ ಕೇಸ್‌ಲಿ ನಂಗೆ ಜವಬ್ದಾರಿ ಉಟ್ಟು. ನೀಲೂನ ಮಾನ ಹಾಳಾದೆತ ಗೊತ್ತಾದ್ದ್ ನಂಗೆ ಈ ಮರ್ಡರ್ ಮಾಡಕಾಗಿ ಬಾತ್."

ಮಾದಯ್ಯ ಹೇಳ್ತ್.

ಅಂವ ತಾನ್ ಹೇಳ್ದಂಗೆ ಕೇಳ್ದುಲೇಂತ ಗೊತ್ತಾಕನ ದೇವಯ್ಯ ಅಲ್ಲಿಂದ ಹೊರಟಿತ್.

ಎಸ್.ಐ.ಗೆ. ಹೇಳಿ ಅಂವ ಹೊರಟಿತ್. ದಾರಿಲಿ ಹೋಕನ ಗಾಳಿ ಮರ ಸೋಮಯ್ಯನ ಮನೆಗೆ ಒಮ್ಮೆ ಹೋಕು. ತನ್ನ ಮಂಚನ ಯಮಲೋಕಕ್ಕೆ ಕಳ್‌ಸಿದ ವಾನೆಯ ಮನೆಯವ್ರೂ.

ಅಪ್ಪಂಗೂ ಮಗ್ಳಿಗೂ ಸಹಾಯ ಮಾಡಿಕೆ ದೇವಯ್ಯ ಸಾಹುಕಾರ ಕಾರ್‌ಲಿ ಹೋಗ್ತಾ ಇತ್.

ಎಂತಾ ದಾನ ಶೂರ ಕರ್ಣ ಇಂವ. ಕಾರ್ ಇಳ್ದ್ ಸ್ವಲ್ಪ ದೂರ ಓಣಿಗಾಗಿ ನಡಿಯಕು ಗಾಳಿಮರ ಸೋಮಯ್ಯನ ಮನೆಗೆ.

ಅದೆಲ್ಲಾ "ಪರವಾಗಿಲ್ಲೆ, ಅದೊಂದು ಕಷ್ಟ ಅಲ್ಲ. ಬೋರುಗುಡ್ಡೆ ದೇವಯ್ಯ ತನ್ನ ಮನೆಯ ಅಂಗಳಕ್ಕೆ ಬಂದದ್ದ್ ನೋಡಿ ಏಮರಲಿ ಕುದ್ದ್‌ಕಂಡ್ ಇದ್ದ ಸೋಮಯ್ಯ ಹೆದ್ರಿ ಸಡನ್ ಎದ್ದ್ ನಿತ್ತ್‌ಕಂಡತ್.

ನಂಗೆ ಮಾಫ್ ಮಾಡೊಕು ದೇವಯ್ಯಣ್ಣ. ರಂಜನ್‌ನ ಕೊಲೆ ವಿಷ್ಯ ನಂಗೆ ಗೊತ್ತೇ ಇಲ್ಲೇ. ನಾನ್ ಅಂದ್ ಕೊಟ್ಟೂರಿಗೆ ಒಂದ್ ಮದ್ವೆಗ ಹೋಗಿದ್ದೆ. ನಮ್ಮನ್ನ ಪೋಲೀಸಿಗೆ ಕೊಟ್ಟ್ ಶಿಕ್ಷೆ ಕೊಡ್ಸ್‌ಬೇಡಿ. ಪೋಲಿಸ್‌ನವ್ರು ನನ್ನ ಮತ್ತೆ ನನ್ನ ಮಗಳ್ನ ಹೊಡ್ದ್ ಸಾಯಿಸಿಕೆ ಹಿಂದೆ ಬೀಳವು ಅಲ್ಲ.

ಅಷ್ಟ್ ಹೇಳ್‌ಕಾಕನ ಸೋಮಯ್ಯನ ಕಣ್ಣ್ ತುಂಬ ನೀರ್ ಬಾತ್.

" ಅಲ್ಲ ಮಾರಾಯ, ಸೋಮಯ್ಯ ನಿನ್ನ ಮತ್ತೆ ನಿನ್ನ ಮಗಳ್ನ ಪೋಲೀಸ್ ಕರ್ಕ್ಂಡ್ ಹೋದ ವಿಷ್ಯ ನಂಗೆ ಬೆಳಿಗ್ಗೆ ಗೊತ್ತಾದ್. ಆ ಕೂಡ್ಲೆ ಪೋಲೀಸ್ ಸ್ಟೇಷನ್‌ಗೆ ಪೋನ್ ಮಾಡಿ ಬುಟ್ಟ್ ನಿಮ್ಮನ್ನ ಬುಡುಗಡೆ ಮಾಡಿಯೊಳೆ ಗೊತ್ತುಟ್ಟಿ ನಿಂಗೆ? ಅದ್ರಿಂದ್ಲೆ ಪೋಲೀಸ್ ಜೀಪ್‌ಲೀ ಮನೆಗಂಟ ನಾವು ಬಂದದ್ದ್ ಗೊತ್ತುಟ. ನಿಮ್ಮ ಕಷ್ಟನ ಗ್ಯಾನ ಮಾಡಿಯೇ ನಾನ್ ಈಗ ಬಂದದ್ದ್ ಕೂಡ. ಇಂದ ..... ತಕ............ "

ದೇವಯ್ಯ ನೂರರ ಮೂರ್ ನೋಟ್‌ನ ಸೋಮಯ್ಯನ ಮುಂದೆ ಹಿಡ್ತ್.

ಸೋಮಯ್ಯಂಗೆ ತನ್ನ ಕಣ್ಣ್‌ನೇ ನಂಬಿಕೆ ಆಗದೆ ಹೋತ್.

ಶಿಕ್ಷೆ ಕೊಡಿಕೆತ ಬಂದವನ ಕೈಲಿ ರಕ್ಷೆ ಸಿಕ್ಕಿದೂತ ಹೇಳ್ರೆ ಹಿಂಗೆ?

ಸೋಮಯ್ಯ ತನ್ನ ಎರ್ಡ್ ಕೈನ ಬಾಚಿಕಂಡ್ ನೋಟ್‌ನ ಕೇಳಿಕಂಡತ್. ಅದ್ನ ಒಮ್ಮೆ ಕಣ್ಣಿಗೆ ಒತ್ತಿ ಹಿಡ್ದ್ ತನ್ನ ಹಳೇ ಮಾಸಿದ ಕೋಟ್‌ನ ಜೋಬಿಗೆ ಹಾಕಿತ್.

"ಆ ದುಡ್ಡ್‌ನ ಇನ್ನ್ ಕಳ್ಳ್ ಕುಡ್‌ದ್ ಮುಗ್ಸಿತೆ ಬೊತ್ತ್. ಹತ್ತ್ ಪೈಸೆ ಆದಾಯ ಮಾರ್ಗ ಇಲ್ಲದಂವ ನಾನ್‌ತ ಹೇಳ್‌ದುನ ಗೇನ ಮಡ್ಕ."

ದೇವಯ್ಯ ಸೋಮಯ್ಯಂಗೆ ಬುದ್ಧಿವಾದ ಹೇಳ್ತ್.

"ಇಲ್ಲೆ ದೇವಯ್ಯಣ್ಣ. ಇದರ್ಲಿ ನಾನ್ ಒಂದ್ ಪೈಸೆ ಕೂಡ ಸಾರಾಯಿ ಕುಡಿಯಕೆ ಕೊಡ್ದ್‌ಲೆ."

"ಅದೆಂಗೆ ಮಾರಾಯ ಕುಡ್ದ್ ಅಭ್ಯಾಸ ಆದಾವ್ರುಕೆ ಸುಮ್ಮನೆ ಇರಿಕೆ ಆದ್ಯಾ? ಹೋಗಲಿ ಅದಿರ್ಲಿ ಒಂದ್ ನೋಟ್‌ನ ನೀನ್ ಕುಡಿಯಕೆ ತಕ. ಬರುವ ವಾರ ಒಮ್ಮೆ ಮನೆಕಡೆ ಬಂದ್ ಹೋಗ್. ಆ ನೂರ್ ರೂಪಾಯಿನ ನಾನ್ ನಿಂಗೆ ಕೊಟ್ನೆ. ನಿನ್ನ ಮಗಳೆಲ್ಲಿ?"

"ಅವಳು ಒಳಗೆ ಮಲ್‌ಗುಟ್ಟು. ನನ್ನ ಮಗ್ನು ಅರ್ಧ ಆಗಿ ಹೋತ್. ಪೋಲೀಸ್ ಅವ್ಳಿಗೆ ಭಾರಿ ಹಿಂಸೆ ಕೊಟ್ಟ್ ಬುಟ್ಟೊ. ಅವಳ ಅಳ್‌ಗಿಲ್ ನಂಗೆ ಕೇಳಿಕೆ ಆತ್‌ಲೆ."

ಸೋಮಯ್ಯ ಹೇಳ್ತ್ "ಅದ್ ಹೌದ್"

ಬೋರ್‌ಗುಡ್ಡೆ ದೇವಯ್ಯ ತಲೆ ಆಡಿಸ್‌ತ್.

"ಹೊಟ್ಟೆಗೆ ಏನಾದ್ರು ತಗಣಿಕೆ ಹೇಳ್. ನೀನ್ ಹೋಗಿ ಅಂಗ್ಡಿಂದ ಸಾಮಾನ್ ತಕಂಡ್ ಬಂದ್ ಕೊಡ್. ಎಷ್ಟಾದರ್ ನೀವ್ ಚಂಗುಮಣಿನ ಅಪ್ಪ ಮತ್ತು ತಂಗೆ ತಾನೆ ? ನಂಗೆ ನಿಮ್ಮನ ಹಂಗೆ ಬುಟ್ಟ್ ಬುಡಿಕೆ ಆದ್ಯಾ? ನಾನ್ ಆಗಾಗ ಬರ್ತಾ ಇದ್ದೇನೆ. ಸಹಾಯ ಬೇಕಾದ್ರೆ ಕೇಳ್."

ಬೋರ್‌ಗುಡ್ಡೆ ದೇವಯ್ಯನ ಮಾತ್ ಕೇಳ್‌ಕಾಕನ ಗಾಳಿ ಮರ ಸೋಮಯ್ಯಂಗೆ ಅವನ ಕಾಲ್‌ಗೆ ಬೀಳಕೂಂತ ಆತ್.

"ಇಷ್ಟೊಂದ್ ಪರೋಪಕಾರಿ ಯಾರು ಬಳೊ ಈಗ. ದೇವಯ್ಯನ ಕಾಲ್ ತೊಳ್‌ದ ನೀರ್ ಕುಡಿಯೋ ಯೋಗ್ಯತೆ ನಂಗೆ ಆಗಲಿ ನನ್ನ ಮಗಳ್ ನೀಲುಗಾಗಲಿ ಇಲ್ಲೆ.

"ನಂಗೆ ತುಂಬ ಕಾರ್‌ಬಾರ್ ಉಟ್ಟು. ನಾನಿನ್ ಬರ್‍ಲಾ?"

ದೇವಯ್ಯ ಹೊರಟತ್. ಕಾರ್ ಸ್ಟಾಟ್ ಮಾಡಿ ಹೋಕಾಕನ ಅಂವ ಒಂದ್ ಸಿನಿಮಾ ಹಾಡ್‌ನ ಗೋಣಗಿಕ್ಕಂಡೇ ಇತ್ತ್. ತನ್ನ ಎಲ್ಲ ಸ್ಥಾಪನೆಗಳಿಗೆ ಅಂವ ಭೇಟಿ ಕೊಟ್ಟತ್. ಜನರ ಒಟ್ಟಿಗೆ ಪ್ರೀತಿಲಿ ಮಾತಾಡ್ತ್. ಪ್ಯಾಕ್ಟ್ ಮಾದಯ್ಯನೂ, ಚಂಗುಮಣಿಯೂ, ಲಾಕಪ್‌ಲಿ ಆದ ವಿಷ್ಯ ಮಾತ್ರ ಅಂವ ಯಾರೊಟ್ಟಿಗೂ ಹೇಳ್ತ್‌ಲೆ.

ಅಂವ ತನ್ನ ಸೀನಿಯರ್ ಇನ್ಸ್‌ಪೆಕ್ಟರ್ ರಾಬಿನ್‌ನೊಟ್ಟಿಗೆ ಒಪ್ಪಿ ಲಾಭ ನಷ್ಟದ ವಿಷ್ಯ ಚರ್ಚೆ ಮಾಡ್ತ್.

ಮಧ್ಯಾಹ್ನ ಒಂದ್ ಗಂಟೆಗೆ ಬೋರ್ ಗುಡ್ಡೆ ಟೂರಿಸ್ಟ್ ಹೋಂನ ಹೋಟ್ಲಲಿ ಅಂವ ಊಟ ಮಾಡ್‌ತ್. ಅಲ್ಲಿಂದ ತನ್ನ ಆಫೀಸ್ ಕ್ಯಾಬಿನ್‌ಗೆ ಬಾತ್. ಅಲ್ಲಿ ಅಂವ ಫೋನ್‌ಲಿ ಕೆಲವು ಜನರೊಟ್ಟಿಗೆ ಮಾತಾಡ್ತ್. ಸಾಯಿಂಕಾಲಾತ್.

ಬೋರ್‌ಗುಡ್ಡೆ ಕಳ್ಳಂಗಡಿಲಿ ಜನರ ಕ್ಯೂ ಸಾಲ ಕುಡಿಯಕೆ ಬಂದವು ತಲೆಕೆರ್‌ಕಂಡ್ ನಿಂತವು ಕ್ಯಾಶ್ ತಂದವು ಒಂದೊಂದು ಬಾಟಲ್ ಖಾಲಿ ಮಾಡಿಕೆ ಸುರು ಮಾಡ್ರೊ.

ಗಾಳಿ ಮರ ಸೋಮಯ್ಯ ತುಟಿನ ಒರಿಸ್ಕಂಡ್ ಹೊರಗೆ ಬಾತ್.ಕಳ್ಳ್ ಕುಡ್ದ್ ಅವಂಗೆ ತೃಪ್ತಿ ಆದಂಗೆ ಇಲ್ಲೆ. ಅಂಗಡಿದ್ ಸಾಲನ ಕೊಟ್ಟ್ ಮುಗ್ಸಿ ಆತ್. ಅಂವ ಒಂದ್ ಬೀಡಿ ಹೊತ್ತಿಸಿತ್. ಸೀದ ಬಾರ್‌ಗೆ ಹೋತ್.

"ಸಾಲನಾ, ದುಡ್ಡುಟ್ಟಾ?"

ಬಾರ್‌ದ್ ಸಾವ್‌ಕಾರ ಚಿಮ್ಮ ಕೇಳ್ತ್

"ನಿನ್ನ ಸಾಲ ಯಾರಿಗೆ ಬೇಕ್ ಮಾರಾಯಾ? ಒಂದ್ ಕ್ವಾರ್ಟರ್ ಕೊಡು. ಇಗ ದುಡ್ಡ್ ತಗಾ." ಸೋಮಯ್ಯ ನೂರ್ ರೂಪಾಯಿ ನೋಟ್‌ನ ಕೌಂಟರಲಿ ತೋರ್ಸಿತ್.

"ಓಹೋ ಹೋಗಿ ಒದೆ ತಿಂದದಕೆ. ಪೋಲೀಸ್ ಕೊಟ್ಟದಾ ?"

"ಪೊಲೀಸಾದ್ರೆ ಕೊಡ್ಲಿ, ಮಿಲ್ಟ್ರಿಯವದ್ರೂ ಕೊಡ್ಲಿ. ಅದ್‌ನ ತಿಳ್ದ್ ನಿಂಗೆ ಎಂತ ಆತ್ ಹೇಳ್ ಹಣ ತಗಂಡ್ ಕಳ್ಳ್ ಕೊಡ್ ಅಷ್ಟೆ."

ಮೊದಲ್ ಕುಡ್‌ದ ಕಳ್ಳ್ ಸೋಮಯ್ಯಂಗೆ ಧೈರ್ಯ ಕೊಟ್ಟಿತ್. ತುಂಬ ಹೊತ್ತಾದಾಗ ಅವನ ಕಣ್ಣ್ ಕೆಂಪಾತ್. ರೋಡ್‌ದ್ ಅಗಲ ಸಾಲದೇ ಹೋತ್. ಮನೆಗೆ ತಲುಪ್‌ಕನ ಕತ್ತಲಾಗಿತ್ತ್.

ಮನೆದ್ ಹಟ್ಟಿಲಿ ಒಂದ್ ದೀಪ ಮತ್ತೆ ಇಬ್ಬರ್ ಕುದ್ದಿದ್ದನ್ನು ಸೋಮಯ್ಯ ನೋಡ್ತ್.

"ಯಾರದ್" ?

ಪಕ್ಕದ ಮನೆ ಜೋಯಪ್ಪ ಮತ್ತೆ ಅವನ ಹೆಣ್ಣ್ ಜಾಜಿ ಸೇರಿ ನೀಲೂಗೆ ಪಾರ ಕುದ್ದಿದ್ದೋ.

ಸೋಮಯ್ಯ ನಾಲ್ಕ್ ಕಾಲ್‌ಲಿ ಬಾಕನ ಅವ್ರುಕೆ ವಿಷ್ಯ ಗೊತ್ತಾತ್.

"ಇದೇಂತ ಬಾವ ನಿಮ ಅವಸ್ಥೆ. ವಯಸ್ಸಿಗೆ ಬಂದ ಗೂಡೆ ಮನೆಲಿ ಇರ್‌ಕಾಕನ ಸಾಯಂಕಾಲ ಆಕೆ ಮೊದ್ಲೇ ಮನೆಗೆ ತಲ್ ಪೊಕೂಂತ ಒಂದ್‌ಗೇನಾದ್ರೂ ಬ್ಯಾಡ ?"

ಜೋಯಪ್ಪ ಕೇಳ್‌ತ್.

" ಕಳ್ಳ್‌ನ ಜೊತೆಲಿ ಮಾತಾಡಿ ಏನ್ ಸುಖ ಹೇಳಿ. ಬನ್ನಿ ನಾವು ಪೋಯಿ. ಜೋಯಪ್ಪನ ಹೆಣ್ಣ್ ಗಂಡನ ಕರ್ತ್.

"ನಾವು ಬಂದವೆ ನೀಲು"

"ಆತ್ ಆಂಟಿ ತುಂಬಾ ಥ್ಯಾಂಕ್ಸ್"

ನೀಲು ಅವ್ರುಕೆ ಥ್ಯಾಂಕ್ಸ್ ಹೇಳಿ ಬುಟ್ಟ್ ಅಪ್ಪನತ್ತ ತಿರ್‌ಗಿ ಹೇಳ್‌ತ್.

"ನೀನ್ ಹಿಂಗೆ ಕುಡ್‌ಕಂಡ್ ಇದ್ದರೆ ನಾನ್ ಮಾತ್ರ ಖಂಡಿತ ಹೊಳೆಗೆ ಬಾವಿಗೆ ಬಿದ್ದ್ ಒಂದು ದಿನ ಸತ್ತನೆ ನೋಡ್ಕ."

"ಅವ್ಳ್ ಮರ್ಬ್‌ಕಂಡೇ ಹೇಳ್ತ್."

"ನೀನ್ ಅಳ್‌ಬ್ಯಾಡ ಮಗಳೆ ....."

ಸೋಮಯ್ಯ ಮಗಳ ಕಣ್ಣ್ ಒರ್ಸಿಕೆ ಪೇಚಾಡಿ ತೂರಾಡಿ ಬಿದ್ದ್ ಹೋತ್.

"ಪಾಪ ಆ ಗೂಡೆದ್ ಒಂದ್ ಅದೃಷ್ಟ ನೋಡಿ"

ಹೋಗೋ ದಾರಿಲಿ ಜಾಜಿ ಗಂಡನೊಟ್ಟಿಗೆ ಹೇಳ್ತ್.

"ಪಪ್ಪ ಅನ್ನ ಬಡ್ಸ್‌ಲಾ ?

ನೀಲು ಕೇಳ್ತ್.

"ನಂಗೆ ಅನ್ನ ಬೇಡಪ್ಪ, ಹಾಸಿಗೆ ಬಿಡ್ಸ್ ಸಾಕ್"

"ಹಾಸಿಗೆ ಬಿಡ್ಸಿ ಆಕನ ಸೋಮಯ್ಯ ಹೋಗಿ ಬಿದ್ದ್ ಕಂಡತ್. ಎರಡೇ ನಿಮಿಷಲಿ ಅಂವ ಗೊರ್ಕೆ ಹೊಡಿಯಕೆ ಸುರು ಮಾಡ್ತ್.

ಇವ್ಳ್ ಸಹ ನಡ್‌ದ ಸಂಗ್ತೀನ ಗೇನಾ ಮಾಡಿಕ್ಕಂಡೆ ಮಲ್ಗ್‌ತ್.

ಅಷ್ಟಲಿ ಕರಾಟೆ ಕಾಳ, ಸೈಕಲ್ ಉಸ್ಮಾನ್, ಬಿದ್ದು ಅಲ್ಲಿಗೆ ಬಂದೊ. ಹೊರಗೆ ನಿಂತ್ ಕಾಳ ತನ್ನ ಸ್ವರನ ಚಂಗು ಮಣಿದ್ ಸ್ವರದಂಗೆ ಮಾಡಿಕಂಡ್ ನೀಲೂನ ಕರ್ತ್.

"ನೀಲು, ನೀಲೂ.. ಬಾಗಿಲು ತೆಗೆವ್ವಾ ನಾನ್ ನಿನ್ನ ಅಣ್ಣ ಚಂಗು ಮಣಿ"

ನೀಲುಗೆ ಎಚ್ಚರ ಆತ್. ಅವಳ್ ನಿದ್ದೆ ಗಣ್ಣಲೇ ಹೋಗಿ ಅಣ್ಣ ಬಾತ್‌ತ ಗೇನ ಮಾಡಿ ಬಾಗಿಲ್ ತೆಗ್ತ್.

ಮುಂದ್‌ವರ್ದದೆ.



ಜನನ : 12-5-1905
ಮರಣ : 29-5-1986

ಜನನ : 20-5-1919
ಮರಣ : 6-5-1974

## ಹಿರಿಯವರ ಪುಣ್ಯ ಸ್ಮರಣೆಯಲ್ಲಿ

### ದಿ|| ಪಟ್ಟಡ ಕಾರ್ಯಪ್ಪ ಮುತ್ತಣ್ಣ ಮತ್ತು ನೀಲವ್ವ ಮುತ್ತಣ್ಣ ದಂಪತಿಗಳು

ನೀವು ಕಾಲ ಕಂಡು ಹಲವಾರು ವರ್ಷಗಳೇ ಸಂದರೂ ಸದಾ ನೀವು ನಮ್ಮ ನೆನಪಿನಲ್ಲಿರುವಿರಿ. ನೀವು ನಮಗೆ ದಾರಿ ದೀಪವಾಗಿ ಬೆಳಕನ್ನು ನೀಡುತ್ತಾ ಕೈ ಹಿಡಿದು ಮುನ್ನಡೆಸುತ್ತಿದ್ದೀರಿ. ನಮ್ಮ ಹೃದಯದಲ್ಲಿ ಅನುದಿನವು ನೆಲಸಿರುವ ನೀವು ಇಂದು ನಮ್ಮೆಲ್ಲರನ್ನು ಹರಸು ತಂದೆ.

ಪಟ್ಟಡ ಪ್ರಭಾಕರ, ಶೀಲಾಮಣಿ, ದೀಪಕ್ ಮತ್ತು ನೀಶ.

## ಕೆಂಪೇಗೌಡ ರೂರಲ್ ಹೌಸ್ ಬಿಲ್ಡಿಂಗ್ ಕೋ-ಅಪರೇಟಿವ್ ಸೊಸೈಟಿ ನಿಯಮಿತ (ರಿ.)

ದಿನಾಂಕ : 30-5-1999

### ಸೊಸೈಟಿ ಕಾರ್ಯಕ್ರಮ

ಸಮಯ : 10-00ಕ್ಕೆ

1. ಪ್ರಾರ್ಥನೆ
2. 1997-99ನೇ ಸಾಲಿನಲ್ಲಿ ಸಂಘದ ಸದಸ್ಯರ ಪೈಕಿ ದೈವಾಧೀನರಾದವರ ಕುರಿತು ಸಂತಾಪ ಸೂಚನೆ.
3. ಸ್ವಾಗತ
4. ಮೀಟಿಂಗ್ ನೋಟೀಸು ಮತ್ತು ಕಾರ್ಯಕ್ರಮ ಪಟ್ಟಿಯ ಮಂಡನೆ ಹಾಗೂ ಅನುಮೋದನೆ
5. ತಾರೀಖು : 2-10-1997ರಂದು ಜರುಗಿದ ಸರ್ವ ಸದಸ್ಯರ ಮಹಾಸಭೆಯ ವರದಿವಾಚನ ಮತ್ತು ಅನುಮೋದನೆ
6. 1997-98ರಿಂದ 1998-99ರ ಸಾಲಿನಲ್ಲಿ ಸಂಘವು ಕೈಗೊಂಡ ಅಭಿವೃದ್ಧಿ ಕಾರ್ಯ ಕಲಾಪಗಳ ವರದಿ.
7. ಇಲಾಖಾವತಿಯ ಲೆಕ್ಕ ಪರಿಶೋಧಕರಿಂದ 1995-96; 1996-97ಹಾಗೂ 1997-98ನೇ ಸಾಲಿನ ಪರಿಶೋಧಿಸಲ್ಪಟ್ಟ ಲೆಕ್ಕ ಪತ್ರಗಳ ಮಂಡನೆ ಹಾಗೂ ಅನುಮೋದನೆ.
8. ತಾರೀಖು 1-4-1998ರಿಂದ 31-3-1999ರ ವರೆಗಿನ ಲೆಕ್ಕಪತ್ರ ಮಂಡನೆ ಹಾಗೂ ಅನುಮೋದನೆ.
9. ಮುಂದಿನ ಅಭಿವೃದ್ಧಿ ಯೋಜನೆಗಳ ಬಗ್ಗೆ ಸಮಾಲೋಚನೆ.
10. ಮುಂದಿನ ಸಾಲಿಗೆ ಎಂದರೆ 1999-2000 ನೇ ಸಾಲಿಗೆ ಯೋಜಿತ ಕಾರ್ಯಗಳಿಗೆ ತಗಲಬಹುದಾದ ಅಂದಾಜು ಖರ್ಚು ವೆಚ್ಚಗಳ ಖಂಡನೆ ಮತ್ತು ಅನುಮೋದನೆ.
11. ಅಧ್ಯಕ್ಷರ ಅನುಮತಿ ಮೇರೆಗೆ ಇನ್ನಿತರ ವಿಷಯಗಳ ಸಮಾಲೋಚನೆ.
12. 1999-2000 ರಿಂದ 2003-2004ವರೆಗಿನ ಆಡಳಿತ ಮಂಡಳಿಯ ಸದಸ್ಯರ ಚುನಾವಣೆ.
13. ಚುನಾವಣೆಯ ಫಲಿತಾಂಶ ಪ್ರಕಟಣೆ.
14. ಅಧ್ಯಕ್ಷರ ಭಾಷಣ
15. ಧನ್ಯವಾದ ಸಮರ್ಪಣೆ
16. ರಾಷ್ಟ್ರಗೀತೆ.

## ಕೆಂಪೇಗೌಡ ರೂರಲ್ ಹೌಸ್ ಬಿಲ್ಡಿಂಗ್ ಕೋ-ಅಪರೇಟಿವ್ ಸೊಸೈಟಿ ನಿಯಮಿತ (ರಿ.)

ನಂ. 16/11, 1ನೇ 'ಪಿ' ಮುಖ್ಯರಸ್ತೆ ಗೌಡ ಸಮಾಜ ಸದನ, ಬೆಂಗಳೂರು - 560 032.



ಜಕ್ಕೂರಿನ "ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ" ಬಡಾವಣೆಯ ಉದ್ಘಾಟನಾ ಸಮಾರಂಭ
ಮತ್ತು 14ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯ

# ಆಹ್ವಾನ ಪತ್ರಿಕೆ

ದಿನಾಂಕ : 30-5-1999, ಭಾನುವಾರ
ಸಮಯ : ಪೂರ್ವಾಹ್ನ 10-00ಕ್ಕೆ

ಉದ್ಘಾಟನೆ ಮತ್ತು ಆಶೀರ್ವಚನ : ಶ್ರೀ ಶ್ರೀ ಶ್ರೀ ಆದಿ ಚುಂಚನಗಿರಿ ಬಾಲಗಂಗಾಧರನಾಥ ಸ್ವಾಮೀಜಿಗಳು

ಅಧ್ಯಕ್ಷತೆ : ಶ್ರೀ ಕುರುಂಜಿ ವೆಂಕಟರಮಣ ಗೌಡರು,
ಸಂಸ್ಥಾಪಕರು, K.V.G. ವಿದ್ಯಾ ಸಂಸ್ಥೆ, ಸುಳ್ಯ ಮತ್ತು ಅಧ್ಯಕ್ಷರು, ದ. ಕ. ಜಿಲ್ಲಾ ವಿದ್ಯಾ ಸಂಘ.

ಮುಖ್ಯ ಅತಿಥಿಗಳು :

1. ಶ್ರೀ ದಂಬೆಕೋಡಿ ಮಾದಪ್ಪನವರು (ಶಾಸಕರು, ಮಡಿಕೇರಿ ಕ್ಷೇತ್ರ)
2. ಶ್ರೀ ಡಿ. ವಿ. ಸದಾನಂದ ಗೌಡರು (ಶಾಸಕರು, ಪುತ್ತೂರು ಕ್ಷೇತ್ರ)
3. ಶ್ರೀ ಎನ್. ಎಸ್.ದೇವಿಪ್ರಸಾದ್ (ಸಂಪಾಜೆ, ಕೊಡಗು ಜಿಲ್ಲೆ)
4. ಶ್ರೀ ಜಿ. ವಿ. ಜಯರಾಂ, ಮಾಜಿ ಅಧ್ಯಕ್ಷರು (ಜಕ್ಕೂರು ಗ್ರಾಮ, ಜಕ್ಕೂರು)
5. ಶ್ರೀ ಡಿ. ಎಸ್. ಆನಂದ (ಅಧ್ಯಕ್ಷರು ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜ, ಬೆಂಗಳೂರು)
6. ಶ್ರೀ ತುಂತಜೆ ಗಣೇಶ್ (ಅಧ್ಯಕ್ಷರು, ಗೌಡ ಸಾಂಸ್ಕೃತಿಕ ಅಕಾಡೆಮಿ, ಮಡಿಕೇರಿ)

## ಕಾರ್ಯಕ್ರಮ

1. ಸ್ವಾಮೀಜಿಯವರು ಹಾಗೂ ಅತಿಥಿಗಳನ್ನು ಬರಮಾಡಿಕೊಳ್ಳುವುದು.
2. ಪ್ರಾರ್ಥನೆ.
3. ಸ್ವಾಗತ
4. ಬಡಾವಣೆಯ ಉದ್ಘಾಟನೆ ಹಾಗೂ ಮುಖ್ಯ ರಸ್ತೆಗಳಿಗೆ ನಾಮಕರಣ, ಕೆಂಪೇಗೌಡ ರಸ್ತೆ, ಗುಡ್ಡೆಮನೆ ಅಪ್ಪಯ್ಯಗೌಡರ ರಸ್ತೆ, ಕೆದಂಬಾಡಿ ರಾಮಗೌಡ ರಸ್ತೆ, ಪೂಜಾರಿ ರಾಮಪ್ಪ ರಸ್ತೆ.
5. ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳಿಂದ ಆಶೀರ್ವಚನ
6. ಮುಖ್ಯ ಅತಿಥಿಗಳಿಂದ ಭಾಷಣ.
7. ವಂದನಾರ್ಪಣೆ

ನಂಗಾರು ನಾಣಯ್ಯ
ಅಧ್ಯಕ್ಷರು
ಕೆಂಪೇಗೌಡ ರೂರಲ್ ಹೌಸ್ ಬಿಲ್ಡಿಂಗ್
ಕೋ - ಅಪರೇಟಿವ್ ಸೊಸೈಟಿ (ರಿ.), ಬೆಂಗಳೂರು

ಆಡಳಿತ ಮಂಡಳಿ ಪರವಾಗಿ
ಎಂ. ಡಿ. ಚೆನ್ನಪ್ಪ
ಕಾರ್ಯದರ್ಶಿ

ಸೂಚನೆ : ಸಂಘದ ಸದಸ್ಯರು, ಅತಿಥಿಗಳು ಹಾಗೂ ಆಹ್ವಾನಿತರು ಸಮಯಕ್ಕೆ ಸರಿಯಾಗಿ ಆಗಮಿಸಿ ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ನೆರವೇರಿಸಲು ಸಹಕರಿಸಬೇಕಾಗಿ ವಿನಂತಿ.

**Kodagu Sangathi** Kannada Fortnightly Edited, Published, Printed & Owned by Pattada P. Sheelamani, No. 35, Savitha Nilaya, I Cross, 4th Block, Jayalaxmipuram, Mysore - 12. And **SANGATHI** Office ✆ : **0821/516771.** And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ✆ : 0821/431792.